
ಕಲ್ಯಾಣ ಕಿರಣ

ಏಪ್ರಿಲ್ 1995 ಬೆಲೆ ರೂ 4.00



ಶರಣರ ಬರವೆಮಗೆ ಪ್ರಾಣ ಜೀವಾಳ

ಕಲ್ಯಾಣ ಕಿರಣ

ಏಪ್ರಿಲ್ ೧೯೯೫ | ಮಾಸಪತ್ರಿಕೆ | ಬಿಡಿ ಸಂಚಿಕೆ ೪.೦೦ ರೂ
ಸಂಪುಟ ೨೨ | ಸಂಚಿಕೆ ೧೧ | ಬಸವ ಶಕೆ ೮೬೧

ವಾರ್ಷಿಕ ಚಂದಾ ೪೦ ರೂ | ಆಜೀವ ಸದಸ್ಯತ್ವ ೪೦೦ ರೂ

ಮುಖಪುಟ : ಬೆಂಗಳೂರಿನ ಬಸವೇಶ್ವರ ವೃತ್ತದಲ್ಲಿರುವ ಅಶ್ವಾರೂಢ ಪುತ್ಥಳಿ

ಹಿಂಬದಿಯ ಪುಟ : ಗಣ ಮೇಳಾಪದಲ್ಲಿ ಬಸವ ಚೈತನ್ಯ

೮೬೨ನೆಯ ಬಸವ ಜಯಂತಿಯ ಶುಭಾಶಯಗಳು

ಯುವನಾಮ ಸಂವತ್ಸರ ವೈಶಾಖ ಮಾಸದ ಅಕ್ಷಯ ತೃತೀಯ ದಿ. ೨.೫.೧೯೯೫ ರಂದು ಬಂದಿದ್ದು ವಿಶ್ವಗುರು ಬಸವಣ್ಣನವರ ೮೬೨ನೆಯ ಜಯಂತಿಯು ಅಂದು ಆಚರಿಸಲ್ಪಡುತ್ತಿದೆ. ತನ್ನಿಮಿತ್ತ ಸೃಷ್ಟಿಕರ್ತ ಪರಮಾತ್ಮನು, ಧರ್ಮಗುರು ಬಸವಣ್ಣನವರು ತಮಗೆಲ್ಲರಿಗೂ ಆಯುರಾರೋಗ್ಯ ಭಾಗ್ಯ ಸಕಲ ಸಂಪದವನ್ನು ಅನುಗ್ರಹಿಸಲೆಂದು ಹಾರೈಸುತ್ತೇವೆ.

— ಕಲ್ಯಾಣ ಕಿರಣ ಸಿಬ್ಬಂದಿ

ಸಂಪುಟ : 24 ಸಂಚಿಕೆ : 11 ಬಸವ ಶಕೆ : 862 ಏಪ್ರಿಲ್-1995

ಬಸವಣ್ಣನ ನೆನೆಯೋಣ

ಶ್ರೀಕಾರ ರೂಪಾಗಿ ಓಂಕಾರ ಉಸಿರಾಗಿ
ಲೋಕಕೆ ಗುರುವಾಗಿ ಬೆಳಕನು ತೋರುವ,
ಬಸವಣ್ಣನ ನೆನೆಯೋಣ ಶ್ರೀ ಗುರು ಬಸವಣ್ಣನ ನೆನೆಯೋಣ ॥

ಸೃಷ್ಟಿಕರ್ತನು ತಾನು ಪರಮ ಕರುಣೆಯ ತೋರಿ
ಜಗದ ಉದ್ಧಾರಕ್ಕೆ ಕಳುಹಿದ ಶ್ರೀಗುರು ॥ ॥೧॥
ಬಸವಣ್ಣನ ನೆನೆಯೋಣ......

ಬಾಗೇವಾಡಿಯೊಳುದಿಸಿ ಕಲ್ಯಾಣದೊಳು ನೆಲೆಸಿ
ಕೂಡಲ ಸಂಗನೊಳು ಕೂಡಿದ ಶ್ರೀಗುರು ಬ. ನೆ. ॥೨॥

ಅಜ್ಞಾನ ಸಾಗರದಿ ತೆರೆ ಕೊಬ್ಬಿ ಮೊರೆವಾಗ
ಸುಜ್ಞಾನ ನಾವೆಯನು ತಂದೆಮ್ಮ ದಾಟಿಸುವ ಬ. ನೆ. ॥೩॥

ಮರ್ತ್ಯವೇ ಶಿವಲೋಕ ಕಾಯಕವೇ ಕೈಲಾಸ
ಎಂದು ಸಾರಿ ಇಳೆಯ ಬಾಳಹಿರಿಮೆಯ ತೋರ್ದ ಬ. ನೆ. ॥೪॥

ಅರಿದೊಡೆ ಶರಣನು ಮರೆದೊಡೆ ಮಾನವ
ಮರೆಯದೆ ಪೂಜಿಸು ಸೃಷ್ಟಿಕರ್ತನ ಎಂದ ಬ. ನೆ. ॥೫॥

ಕಾಯ ವೀಣೆಯ ಮಾಡಿ ನರವ ತಂತಿಯ ಮಾಡಿ
ಉರದಿಂದ ಹಾಡುತ ದೇವನನು ಒಲಿಸಿದ ಬ. ನೆ. ॥೬॥

ನರವಿಂಧ್ಯದೊಳಗೆ ಹುಲುಗಿಳಿಯು ನೀನಾಗು
ಬಕುತಿಯ ಪಂಜರದಿ ಅಭಯವ ಪಡೆಯೆಂದ ಬ. ನೆ. ॥೭॥

ಮರ್ತ್ಯಲೋಕವಿದುವು ಕರ್ತನ ಕಮ್ಮಟವು
ಇಲ್ಲಿ ಸಲ್ಲುವವರು ಅವನಲ್ಲೂ ಸಲುವರೆಂದ ಬ. ನೆ. ॥೮॥

ಇವನಾರು ಇವನಾರು ಭೇದವನೆಣಿಸದೆ
ಎಲ್ಲರು ನನ್ನವರು ಎನ್ನಲು ಕಲಿಸಿರುವ ಬ. ನೆ. ॥೯॥

ಭಕ್ತಿಯ ಭೂಮಿಯೊಳು ಅರಿವಿನ ಮಾಮರದಿ
ನಿಷ್ಪತ್ತಿ ಹಣ್ಣಾಗಿ ದೇವನಿಗೆ ಎಡೆಯಾದ ಬ. ನೆ. ॥೧೦॥

ಆನಂದ ವರ್ಷದಿ ಧರೆಗಿಳಿದು ತಾ ಬಂದು
ನಳನಾಮ ವರ್ಷದಿ ದೇವನೊಳು ಬೆರೆದಂಥ ಬ ನೆ. ॥೧೧॥

ಶರಣ ಗಣ ಮಣಿಯಾಗಿ ಶರಣ ಗುಣ ನಿಧಿಯಾಗಿ
ಶರಣಾಗತ ರಕ್ಷಕ ಕಾರಣಿಕ ಗುರುವಾದ ಬ. ನೆ. ॥೧೨॥

—ಬಸವಾತ್ಮಜೆ

ಲಂಕೇಶರ 'ಗಟಾರ' ಪತ್ರಿಕೆ

—ಮಾತಾಜಿ

ಮೊನ್ನೆ ಒಂದು ದಿನ ಯಾರೋ 'ಗಟಾರ' ಪತ್ರಿಕೆಯ ಉಕ್ತಿಯೊಂದನ್ನು ತಂದು ತೋರಿಸಿದರು. ಈ ವಿಶೇಷ ಹೆಸರು ನಾನಿಟ್ಟಿದ್ದು, ಏಕೆಂದರೆ ಲಂಕೇಶ ಎಂಬ ಹೆಸರು ಬಹಳ ಅರ್ಥಗರ್ಭಿತವಾಗಿದೆ. ಆದ್ದರಿಂದ ಅತ್ಯಂತ ಕೆಳಮಟ್ಟದ ಲಂಕೇಶ – ಈ ಪತ್ರಿಕೆಗೆ ಈ ಹೆಸರನ್ನೇ ಸದ್ಯ ಬಳಸಬಹುದು. ಬೆಂಗಳೂರಿನಲ್ಲಿ ಶಿವರಾತ್ರಿಯಂದು ಪ್ರತಿಷ್ಠಾಪನೆಯಾದ ಯೋಗಿರಾಜ ಶಿವನ ಬೃಹತ್ ಮೂರ್ತಿಯ ಸಂದರ್ಶನಕ್ಕೆಂದು ನಾನು ಹೋದಾಗ ಅಲ್ಲಿ ಹಾಕಿದ್ದ ಒಂದು ಧ್ವನಿ ಸುರುಳಿ ಮಧುರ ಕಂಠದಿಂದ ಹಾಡುತ್ತಿದ್ದುದನ್ನು ಕೇಳಿ ಮೈಮರೆತು ಬಿಟ್ಟೆ. ಶಿವಸ್ತುತಿಯ ಕಡೆಯಲ್ಲಿ ರಾವಣೇಶ್ವರನು ಮಾಡಿದ ಈ ಶಿವಸ್ತುತಿಯನ್ನು ನಿತ್ಯವೂ ಪಠಿಸಿದರೆ ಎಂಬ ಸಮಾರೋಪವಿತ್ತು. ಲಂಕೇಶ ಎಂದರೆ ರಾವಣ. ಆತ ಮಹಾಶಿವಭಕ್ತ, ಸಾತ್ವಿಕ; ಆತನ ಸಾಮ್ರಾಜ್ಯ ಸಮೃದ್ಧವಾಗಿತ್ತು. ದೇಶದಲ್ಲಿ ಯಾವ ಕೊರತೆಯೂ ಇರಲಿಲ್ಲ. ಪ್ರಜೆಗಳು ನೆಮ್ಮದಿಯಿಂದ ಇದ್ದರು. ವೈಯಕ್ತಿಕವಾಗಿ ಸಚ್ಚಾರಿತ್ರ ಸಂಪನ್ನ, ನಿತ್ಯವೂ ಶಿವನ ಪೂಜೆ–ಶಿವನ ಸ್ತುತಿ ಅವನದು, ಏಕ ಪತ್ನಿ ವ್ರತಸ್ಥ ; ಮಂಡೋದರಿಯಲ್ಲಿ ಏಕ ಪತ್ನಿ ನಿಷ್ಠೆ. ಆತ ಗಾನಕೋವಿದ. ಬಹುಶಃ ಆತನ ಗಾಯನ ನಿಷ್ಠೆಯಿಂದಲೇ ಸ್ಫೂರ್ತಿ ಪಡೆದ ವಿಶ್ವಗುರು ಬಸವಣ್ಣನವರು "ಎನ್ನ ಕಾಯವ ದಂಡಿಗೆಯ ಮಾಡಯ್ಯ, ಎನ್ನ ಶಿರವ ಸೋರೆಯ ಮಾಡಯ್ಯ, ಎನ್ನ ನರವ ತಂತಿಯ ಮಾಡಯ್ಯ, ಎನ್ನ ಬೆರಳ ಕಡ್ಡಿಯ ಮಾಡಯ್ಯ, ಬತ್ತೀಸ ರಾಗವ ಹಾಡಯ್ಯ, ಉರದಲೊತ್ತಿ ಬಾರಿಸಯ್ಯ ಕೂಡಲ ಸಂಗಮ ದೇವಾ" ಎಂದು ಎದೆ ತುಂಬಿ ಹಾಡಿರಬಹುದು.

ಈಗಿನ ಲಂಕೇಶ ಎಂಬ ಹೆಸರು ಈ ವ್ಯಕ್ತಿಯ ಸ್ವಭಾವವನ್ನರಿಯದೆ ತಾಯಿ–ತಂದೆ ಇಟ್ಟ ಹೆಸರೋ ಅಥವಾ ಈ ಪುಣ್ಯಜೀವಿ (?) ತನ್ನನ್ನೇ ತಾನು ರಾವಣೇಶ್ವರನ ಮಟ್ಟಕ್ಕೆ ಏರಿಸಿಕೊಂಡು ಅಥವಾ ಲಂಕೇಶನಾದ ರಾವಣನನ್ನು ತನ್ನ (ಕೆಳ) ಮಟ್ಟಕ್ಕೆ ಇಳಿಸಿಕೊಂಡು, ತಾನೇ ಇಟ್ಟುಕೊಂಡ ಕಾವ್ಯನಾಮವೋ ? ! (ಈ ಚರಿತ್ರೆಯ ಮೂಲವನ್ನು ಸಂಶೋಧಿಸುವಷ್ಟು ತಾಳ್ಮೆ, ಆಸಕ್ತಿ, ಆಗತ್ಯ ನನಗೆ ಕಾಣಬರುತ್ತಿಲ್ಲ.) ಅಂತೂ ಈ ಹೆಸರು ನಿಜ ಲಂಕೇಶನಾದ ರಾವಣನಿಗೆ ಎಷ್ಟೆಷ್ಟೂ ಅನ್ವಯಿಸದ ಕಾರಣ ಇನ್ನು ಮುಂದೆ ಈ ಲೇಖನದಲ್ಲಿ ಈ ಪದ ಬಳಸುವುದಿಲ್ಲ; 'ಗಟಾರ' ಪತ್ರಿಕೆ ಎಂದೇ ಉಲ್ಲೇಖಿಸುವೆ. [ನಿಜಕ್ಕೂ ಈ ಪದವೂ ಅನ್ವಯವಾಗದು; ಏಕೆಂದರೆ 'ಗಟಾರ'ವು ಪರಿಸರವನ್ನು ಸ್ವಚ್ಛವಾಗಿಡಲು ಬೇಕು. 'ಹಂದಿ' ಎನ್ನೋಣವೋ ಅದೂ ಸಹ ತಾನು ಕೊಳಕು ಪ್ರಾಣಿಯಾದರೂ ಊರ ಸ್ವಚ್ಛತೆಗೆ ಸ್ವಲ್ಪ ಸಹಕಾರಿಯಾಗುತ್ತದೆ. ಈ ಪತ್ರಿಕೆಯ ಗುಣ ಧರ್ಮ ಹೇಳುವ ಯಾವ ಪದವೂ ಸಿಕ್ಕದ್ದರಿಂದ ಅನಿವಾರ್ಯವಾಗಿ 'ಗಟಾರ' ಕ್ಕೆ ತುಸು ಅವಮಾನವಾದರೂ ಚಿಂತೆಯಿಲ್ಲ. ಅದು ಜಡವಸ್ತುವಾದ್ದರಿಂದ ಅದೇ ಹೆಸರನ್ನೇ ಬಳಸುವೆ.]

ಸತ್ಯದ ಪರವಾದ ಏನೋ ಒಂದು ಧ್ವನಿ ಕೇಳಿಸಿದ್ದರಿಂದ 'ಗಟಾರ' ಪತ್ರಿಕೆ ಹುಟ್ಟಿದ ಆರಂಭದ ದಿನಗಳಲ್ಲಿ ಅದನ್ನು ಅಭಿಮಾನವಿಟ್ಟು ನನಗೆ ಓದುವ ಅಭ್ಯಾಸವಿತ್ತು. ಅದರಲ್ಲಿ ಬರುವ ಸುಳ್ಳಿನ ಸರಪಣಿ, ಲಂಗುಲಗಾಮಿಲ್ಲದೆ ಯಾರನ್ನು ಬೇಕಾದರೂ ಬೈದು ತೀಟೆ ತೀರಿಸಿಕೊಳ್ಳುವ ದುರಭ್ಯಾಸ, ಯಾವ ನೈತಿಕ ಮೌಲ್ಯಗಳಲ್ಲೂ ಶ್ರದ್ಧೆ-ನಂಬಿಕೆ ಇಲ್ಲದ ಪ್ರಧಾನ ಬರಹಗಾರರಿಂದ ಬಹುಪಾಲು ಪುಡಿ ಬರಹಗಾರರ ವರೆಗೂ ವ್ಯಾಪಿಸಿರುವ ಪ್ರವೃತ್ತಿ, ಒಳ್ಳೆಯದನ್ನು, ವಿಧಾಯಕವಾದ ಏನನ್ನೂ ಕಂಡರೂ ಸಂತೋಷಿಸದ ಕೀಳು ಅಭಿರುಚಿ, ತಾವಷ್ಟೆ ಸರ್ವಜ್ಞರು, ಸರ್ವೋತ್ತಮರು, ಯಾವುದರ ಬಗ್ಗೆ ಬೇಕಾದರೂ ತೀರ್ಪುಕೊಡಬಲ್ಲರು ಎಂಬ ದುರಹಂಕಾರದ ವರ್ತನೆ ಕಂಡು ಈ ಪತ್ರಿಕೆಯನ್ನು ಧಾರ್ಮಿಕ ಜನರು, ಧರ್ಮ–ದೇವರು-ರಾಷ್ಟ್ರೀಯತೆ-ನೀತಿ ಮುಂತಾದುವುಗಳಲ್ಲಿ ಶ್ರದ್ಧೆಯಿದ್ದವರು ಓದಬಾರದೆಂದು ನಿರ್ಣಯಿಸಿ ನಾವೂ ಅದನ್ನು ಓದುವುದು ನಿಲ್ಲಿಸಿದ್ದಲ್ಲದೆ ಆಶ್ರಮವಾಸಿಗಳು ತಂದು ಓದಬಾರದು ಎಂದು ನಿಷೇಧ ಹಾಕಲಾಯಿತು. 'ಹಿರಿಯಕ್ಕನ ಚಾಳಿ ಮನೆಮಂದಿಗೆಲ್ಲ' ಎಂಬಂತೆ ಸಂಪಾದಕ ಮಹಾಶಯ ಗಟಾರೇಶ್ವರರ ಸ್ವಭಾವ, ಪ್ರವೃತ್ತಿ, ಅಭಿರುಚಿಗೆ ಅನುಸಾರವಾಗಿಯೇ ಸಾಮಾನ್ಯವಾಗಿ ಈ ಪತ್ರಿಕೆಯ ಬರಹಗಾರರು ಬರೆಯುತ್ತಿದ್ದಾರೆ. ಅಪರೂಪಕ್ಕೊಂದು ಬಾರಿ ಗಟಾರದ ಕೆಸರಿನಲ್ಲಿ ಯಾರಾದರೂ ಜಾರಿಸಿಕೊಂಡ ಬಂಗಾರದ ಉಂಗುರದಂತೆ ಏನಾದರೂ ಒಂದು ಒಳ್ಳೆಯ ಬರಹವಿದ್ದರೆ ಅದು ಅಪವಾದ ಎಂದುಕೊಳ್ಳಬಹುದು ; ಕನ್ನಡ ಓದುಗ ಹೆಮ್ಮೆ ಪಡಬಹುದು. 'ಸತ್ಯ' ಎನ್ನುವುದು ಈ ಪತ್ರಿಕೆಯ ಬಳಿ ಎಂದೂ ಹಾಯುವಂತೆ ತೋರದು. ಆದರೆ ಸತ್ಯವೆಂಬಂತೆ ಜನರನ್ನು ಕುಹಕ ಭಾಷೆಯ ಮೂಲಕ ಭ್ರಾಂತಿಗೆ ಒಳಪಡಿಸುವ ಜಾಣ್ಮೆ ಮಾತ್ರ ಗಟಾರ ಪತ್ರಿಕೆಯ ಬಹುಪಾಲು ಬರಹಗಾರರಿಗೆ ಚೆನ್ನಾಗಿ ಕರಗತವಾಗಿದೆ. ಒಂದಲ್ಲ ಎರಡಲ್ಲ ಬೇಕಾದಷ್ಟು ಉದಾಹರಣೆಗಳನ್ನು ಈ ಬಗ್ಗೆ ಕೊಡಬಹುದು. ಒಂದೆರಡು ಉದಾಹರಣೆ ಕೊಡುವೆ,

7 ನೆಯ ಶರಣ ಮೇಳ ಆದ ಮೇಲೆ ಒಂದು ಕುಚೋದ್ಯದ ಬರಹ ಬಂದಿತು. ಅದು ಹುನಗುಂದ ಶಾಸಕ ಶ್ರೀ ಎಸ್. ಆರ್. ಕಾಶಪ್ಪನವರ ಬಗ್ಗೆ ಇತ್ತು. ಉಳಿದುದೆಲ್ಲ ಸತ್ಯವೋ, ಮಿಥ್ಯವೋ, ಗಟಾರೇಶ್ವರ ಸುಳ್ಳು ನಿರೂಪಣೆ ಸತ್ಯವಿರುವ ವರದಿಯನ್ನೂ ನಂಬದಂತೆ ಮಾಡುತ್ತಿದೆ. ಮಾತೆ ಮಹಾದೇವಿ ಮಾಡುವ ಶರಣ ಮೇಳಕ್ಕೆ ಕಾಶಪ್ಪ

ನವರು ಗ್ರಾನೈಟ್ ಗಣಿಗಳವರಿಂದ ಹಣ ಕೂಡಿಸಿಕೊಟ್ಟರೆಂಬುದಾಗಿ ಬರೆಯಲಾಗಿತ್ತು, ಓದಿದವರೆಲ್ಲರಿಗೆ ಸೋಜಿಗವೋ ಸೋಜಿಗ. ಕಾಶಪ್ಪನಿಂದ ಎಷ್ಟು ಕಿರುಕುಳ, ತೊಂದರೆ ಆಯಿತು ಎಂಬುದನ್ನು ಕೂಡಲ ಸಂಗಮದಿಂದ ಸುತ್ತ 100 ಕಿಲೋ ಮೀಟರ್ ವಾಸಿಗಳು ಮತ್ತು ಶರಣ ಮೇಳಕ್ಕೆ ಬಂದ ಎಲ್ಲರೂ ಬಲ್ಲರು. 'ಸದ್ಯ, ಆತ ಬಗೆಬಗೆಯ ಕಿರುಕುಳ ಕೊಡುವುದು ಬಿಟ್ಟರೆ ಸಾಕು' ಎಂದು ಶರಣ ಮೇಳದ ಸಮಸ್ತ ಯಾತ್ರಾರ್ಥಿಗಳು ಸಾಕ್ಷಾತ್ ಸೃಷ್ಟಿಕರ್ತನನ್ನೇ ಬೇಡುವಾಗ 'ಗಟಾರ' ಪತ್ರಿಕೆ ಹೀಗೆ ಬರೆದುದು ಎಷ್ಟು ವಿಚಿತ್ರವಲ್ಲವೆ ? ಮತ್ತು ಅದೇ ಸನ್ನಿವೇಶದಲ್ಲೇ ಶ್ರೀ ಗುರು ಬಸವಣ್ಣನವರ ಭಾವಚಿತ್ರ ಕಟ್ಟಿದ್ದ ಕಮಾನನ್ನೂ ಪಂಚಪೀಠಾಧೀಶ್ವರರ ದಿವ್ಯ ಪ್ರತ್ಯಕ್ಷ ಉಪಸ್ಥಿತಿಯಲ್ಲಿ ಕಾಶಪ್ಪನವರು ಕೆಡವಿದ್ದರು. ಹೀಗೆ, 'ನೀರಿದೆ ಎಂದು ನಂಬಿಸಿ ಕಳಿಸಿದರೆ, ಅಲ್ಲಿ ಕೆಸರು ಸಹ ಇಲ್ಲದ ಪರಿಸ್ಥಿತಿ' ಗಟಾರ ಪತ್ರಿಕೆಯ ವರದಿಯದು.

ತೀರಾ ಇತ್ತೀಚೆಗೆ ಮತ್ತೊಬ್ಬರು ಗಟಾರ ಪತ್ರಿಕೆಯ ಮತ್ತೊಂದು ಸಂಚಿಕೆಯ ಪ್ರತಿಯನ್ನು ತಂದು ಕೊಟ್ಟರು. ಅದರಲ್ಲಿ ಒಂದು ವ್ಯಂಗ್ಯ ಲೇಖನವಿತ್ತು. "ಹೆಪ್ಪಿಟ್ಟ ಹಾಲು" ನನ್ನದೇ ಸ್ವಂತ ಕಥೆ ಎಂದು, ನಾನು ಮದುವೆಯಾಗಿ ಗಂಡನಿಂದ ಒದೆಸಿಕೊಂಡು, ಬಿಟ್ಟು ಬಂದು ಸನ್ಯಾಸಿಯಾಗಿದ್ದೇನೆಂದು ಬರೆಯಲಾಗಿತ್ತು. ಯಾವ ನಾಚಿಕೆ-ಹೇಸಿಕೆ-ಎಗ್ಗೂ ಇಲ್ಲದೆ ಈ ಗಟಾರ ಪತ್ರಿಕೆ ಬರೆಯುವುದು ನೋಡಿದರೆ ಇಂಥ ಬರಹಗಾರರ ಸಮೂಹದ ಕನಸಿನ ರಾಜ್ಯ ಎಲ್ಲಾದರೂ ಸ್ಥಾಪನೆಯಾದರೆ ಅದೆಂತಹ ನರಕ ಸದೃಶ ಕೊಳಕು ಸಮಾಜ ನಿರ್ಮಾಣವಾಗಬಹುದು ಎನ್ನಿಸಿತು. ಬಾಲ್ಯದಿಂದಲೂ ನನ್ನದು ತೆರೆದಿಟ್ಟ ಪುಸ್ತಕದಂತೆ ಜೀವನವಿದ್ದು, ನಮ್ಮ ಕಾಲೇಜಿನ ಪ್ರತಿಯೊಬ್ಬ ಅಧ್ಯಾಪಕರು, ಸಹಪಾಠಿಗಳು ವಿಶೇಷ ಅದರಾಭಿಮಾನ ಹೊಂದಿದ್ದರು. ಇನ್ನೂ ಪರೀಕ್ಷೆಗೆ ಮೊದಲೇ ಆಗಲೇ ಒಡವೆ-ವಸ್ತುಗಳನ್ನು ತೆಗೆದು ವಿಭೂತಿ-ರುದ್ರಾಕ್ಷಿ ಧರಿಸಿ, ಬಿಳಿಯ ನೂಲಿನ ಸೀರೆಯುಟ್ಟು ಹೋಗುವಾಗ ಎಲ್ಲರೂ ಗೌರವಪೂರ್ವಕವಾಗಿ ಬೆರಗಾಗಿ ನಿಲ್ಲುತ್ತಿದ್ದರು. ಸನ್ಯಾಸ ದೀಕ್ಷೆ ತಗೊಂಡ ಬಳಿಕ ರೋಟರಿ ಸಂಸ್ಥೆಯವರು ಕರೆದು ಸತ್ಕರಿಸಿ, ಗೌರವಿಸಿದ ಸಭೆಗೆ ಜನರು ಕಿಕ್ಕಿರಿದು ಸೇರಿದ್ದರು. ಪದವಿ ಪರೀಕ್ಷೆ ಮುಗಿಯುವ ಮುನ್ನವೇ ವೈರಾಗ್ಯದ ಪ್ರೇರಣೆ ಉಂಟಾಗಿತ್ತು. ಪರೀಕ್ಷೆ ಮುಗಿಯುತ್ತಲೇ ಅಧ್ಯಾತ್ಮಿಕ ಚಿಂತನೆ ಗಾಢವಾಯಿತು. ಫಲಿತಾಂಶ ಬರುತ್ತಲೇ ವರ ನೋಡುವುದು ಮುಂತಾಗಿ ಆರಂಭವಾಗುತ್ತದೆಂದು ತಿಳಿದು ನಾನು ಮೊದಲೇ ಮನೆಯಿಂದ ನಿರ್ಗಮಿಸಿಬಿಟ್ಟೆ. ಅಂದಾಗ ಹೆತ್ತ ತಾಯಿ, ಬಂಧು ಬಳಗ ಮುಂತಾದವರಿಗೇ ಗೊತ್ತಿಲ್ಲದ ನಿಗೂಢ ಕಥೆಯನ್ನು ಹೆಣೆಯುವ ಬರಹಗಾರರದು ಒಂದು ಒಗೆಯ ಸಾಹಿತ್ಯಕ ಹಲ್ಲೆಯಲ್ಲವೆ? ಮದುವೆ ಎಂದಾಯಿತು? ಯಾರು ನನ್ನ ಗಂಡ ಎಂದು ಹುಡುಕಿ ಕೊಡಲು ಗಟಾರ ಪತ್ರಿಕೆಯ ಸಂಪಾದಕ ಗಟಾರೇಶನನ್ನು ಮತ್ತು ಈ ಗಟಾರಕ್ಕೆ ಸರಕು ತುಂಬುವ

ಚಂದ್ರೇಗೌಡರನ್ನೇ ಕೇಳುವ ಸನ್ನಿವೇಶ ಬಂದಿದೆ. ಇಂಥ ಸುಳ್ಳು ಕಥೆ ಹೆಣೆಯುವ ಕೀಳುಮಟ್ಟದ ಬರಹಗಾರ-ಪ್ರಕಾಶಕರ ವಿರುದ್ಧ ಮಾನನಷ್ಟ ಮೊಕದ್ದಮೆ ಹೂಡೋಣ ಎಂದು ಕೆಲವು ಶರಣೆಯರು ಆಗ್ರಹಿಸಿದರು. "ಹಾ, ಹೂ ಎಂದು ಗಟಾರೇಶನನ್ನು ಹೊಗಳುವ ಕೆಲವರನ್ನು ಬಿಟ್ಟರೆ ಬಾಕಿ ಸುಸಂಸ್ಕೃತರು, ಸಭ್ಯರು ಈ ಪತ್ರಿಕೆಯ ಮಟ್ಟವೇನು ಎಂದು ತಿಳಿದಿದ್ದಾರೆ. ಯಾಕೆ ನಮ್ಮ-ನಿಮ್ಮ ಸಮಯ-ಶಕ್ತಿ-ಹಣವನ್ನು ಇಂಥ ವ್ಯರ್ಥ ಕೆಲಸಕ್ಕೆ ಅಪವ್ಯಯ ಮಾಡುವುದು ? ನಮ್ಮ ಒಂದೊಂದು ನಿಮಿಷದ ಸಮಯ, ಶಕ್ತಿ, ಸಮಾಜ ಕೊಡುವ ಒಂದೊಂದು ಕಾಸು ಸಹ ಧರ್ಮ ಪ್ರಚಾರಕ್ಕೆ ಮೀಸಲಾಗಲಿ. ಶಾಂತವಾಗಿರಿ " ಎಂದು ಹೇಳಿದೆ.

ಗಟಾರ ಪತ್ರಿಕೆ ಇಂದು ಕನ್ನಡ ಪತ್ರಿಕೋದ್ಯಮ ಕ್ಷೇತ್ರಕ್ಕೇ ಅವಮಾನಕರವಾದ ಕಲಂಕ, ಪಾಪದ ಕೂಪ. ಯಾವ ಶಿಷ್ಟಾಚಾರ ಸಂಹಿತೆ, ಪ್ರಾಮಾಣಿಕತೆ ಅದರಲ್ಲಿಲ್ಲ. ಆದರೂ ಇಂದು ದೊಡ್ಡ ದೊಡ್ಡ ಸ್ವಾಮಿಗಳು, ರಾಜಕೀಯ ಗಣ್ಯರು, ಅಧಿಕಾರಿಗಳು ಎಲ್ಲರೂ ಸುಮ್ಮನಿದ್ದಾರೆ. ಗಟಾರೇಶ ಎಂಬ ಕೊಚ್ಚೆಯ ಮೇಲೆ ಕಲ್ಲು ಹಾಕಿ ಸಿಡಿಸಿಕೊಂಡು, ಮಲಿನವಾಗುವುದು ಏಕೆ ಎಂದು ? ಆದರೆ ಸಭ್ಯರ-ಸುಸಂಸ್ಕೃತ ಮೌನ ಗಟಾರೇಶನನ್ನು ದುರಹಂಕಾರದ ಅಟ್ಟಕ್ಕೆ ಏಕೆ ಬೆಟ್ಟಕ್ಕೇ ಏರಿಸಿದೆ ! ಇಂದು ನಮ್ಮ ದೇಶದಲ್ಲಿ ಧಾರ್ಮಿಕರು, ಸಾತ್ವಿಕರು, ಮೌಲ್ಯ ಸಹಿತ ಜೀವನದಲ್ಲಿ ನಂಬಿಕೆ ಉಳ್ಳವರು ಸಭ್ಯತೆಯ ಸೋಗಿನಲ್ಲಿ ಮೌನಿಗಳು, ನಿರ್ಲಿಪ್ತರೂ ಆಗಿರುವುದರಿಂದ ಗಟಾರೇಶರಂತಹ ಬೌದ್ಧಿಕ ಕೊಳಕರು ತಾವು ಅತಿ ಶ್ರೇಷ್ಠರೆಂದು ಉಬ್ಬಿದ್ದಾರೆ. ಅಂಥವರನ್ನು ಕುರಿತೇ ಜಗನ್ಮಾತಾ ಅಕ್ಕಮಹಾದೇವಿ ಹೀಗೆ ಹೇಳುವುದು :

ಹಂದಿಯೂ ಮದಕರಿಯು
ಒಂದೇ ದಾರಿಯಲ್ಲಿ ಸಂಧಿಸಿದರೆ
ಹಂದಿಗಂಜಿ ಮದಕರಿ ಕೆಲಕ್ಕೆ ಸರಿದರೆ
ಹಂದಿಯದು ಕೇಸರಿಯಪ್ಪುದೇ ಚನ್ನಮಲ್ಲಿಕಾರ್ಜುನಾ ?

ಒಂದು ಆನೆಯು ರಾಜಗಾಂಭೀರ್ಯದಿಂದ ರಾಜಬೀದಿಯಲ್ಲಿ ಹೋಗುತ್ತಿರುತ್ತದೆ ಎಂದುಕೊಳ್ಳೋಣ. ಆಗ ಒಂದು ಹಂದಿಯು ಚರಂಡಿಯಲ್ಲಿ ಹೊರಳಾಡಿ, ಏನೇನೋ ಕೊಳಕನ್ನು ತಿಂದು ಮೈತುಂಬ ರಾಡಿಯನ್ನು ಮೆತ್ತಿಕೊಂಡು ಠೀವಿಯಿಂದ ಬಂದು ಆನೆಯ ಎದುರು ನಿಲ್ಲುತ್ತದೆ. ಆನೆಯೋ ಮಿಂದು, ಸಿಂಗರಿಸಿಕೊಂಡು ಶುಭ್ರವಾಗಿರುವ ಪ್ರಾಣಿ; ಕೊಳಕು ಹಂದಿಯನ್ನು ಕಂಡು (ಅಂಜಿ ಅಲ್ಲ) ಅಸಹ್ಯಪಟ್ಟು ಪಕ್ಕಕ್ಕೆ ಸರಿದು ಹಂದಿಗೆ ದಾರಿಬಿಡುವುದು ಅಥವಾ ಇನ್ನೊಂದು ರಸ್ತೆಯಲ್ಲಿ ಸಾಗುವುದು ಎಂದುಕೊಳ್ಳೋಣ. ಆಗ ಆ ಹಂದಿಯು 'ನಾನು ಸಿಂಹವಿರಬೇಕು. ಅದಕ್ಕೆ

ಆನೆಯು ಹೆದರಿ ಪಕ್ಕಕ್ಕೆ ಸರಿಯಿತು' ಎಂದು ಎದೆಯುಬ್ಬಿಸಿದರೆ, ಆಗ ಯಾರಿಗೇ ಆದರೂ ನಗು ಬರದೆ ಇರದಷ್ಟೆ.

ಕರ್ತವ್ಯಶೀಲರಾದ ಸಭ್ಯರಿಗೆ ಒಂದು ಗುರಿ ಇರುತ್ತದೆ. ಆಯುಷ್ಯ ಕಿರಿದು, ಬದುಕು ನಶ್ವರ ಎಂದು ಅವರು ಗುರಿ ತಲುಪಲು ಧಾವಂತ ಪಡುತ್ತಾರೆ. ಹಿಂದೆ ಕಟ್ಟೆಯ ಕಾನ್‌ಫರೆನ್ಸ್ ಮಾಡುತ್ತಿದ್ದ ಮರಾದ ಹರಕು ಬಾಯಿ ಹೆಂಗಸರ ಕೆಲಸವನ್ನು ಈಗ ನಿರ್ವಹಿಸುತ್ತಿರುವ ಗಟಾರ ಪತ್ರಿಕೆಯಂತಹವುಗಳ ಕಡೆ ಗಮನ ಕೊಡಲು ಕರ್ತವ್ಯಶೀಲರಿಗೆ ಪುರುಸೊತ್ತಿರದು. ಜೊತೆಗೆ ಭಾರತದ ನ್ಯಾಯಾಲಯಗಳ ವಿಳಂಬ ನೀತಿಯಿಂದಾಗಿ ಸಮಯಹರಣ ಮಾಡಲು ಯಾರೂ ಇಷ್ಟಪಡುವುದಿಲ್ಲ. ಇದರಿಂದಾಗಿ ಈ ಕೆಲವು ಪತ್ರಿಕೆಗಳು ಮನಸ್ಸಿಗೆ ಬಂದಂತೆ ಬರೆಯುತ್ತವೆ, ವರ್ತಿಸುತ್ತವೆ. ಕೆಲವು ಪತ್ರಿಕೆಗಳು ನೇರವಾಗಿ ಪೀತ ಪತ್ರಿಕೆ ಎನ್ನಿಸಿಕೊಂಡು ಬಿಡುತ್ತವೆ. ಹೀಗಾಗಿ ಸಾರ್ವಜನಿಕರು ಎಚ್ಚರಿಕೆಯಿಂದ ಓದುತ್ತಾರೆ. ಈ 'ಗಟಾರ' ಪತ್ರಿಕೆಯಂತಹವಕ್ಕೆ ವೈಚಾರಿಕತೆ, ಸಮಾಜವಾದದ ಸೋಗು ಮುಚ್ಚಿ ಇವು ಗೋಮುಖ ವ್ಯಾಘ್ರಗಳಂತೆ ಇರುತ್ತವೆ. ಮನಸ್ವೇಚ್ಛೆ ಏನು ಬೇಕಾದರೂ ಬರೆದು ವ್ಯಕ್ತಿಗಳ ಜೀವನದಲ್ಲಿ ಕಪೋಲಕಲ್ಪಿತ ಕಥೆ ಹೆಣೆಯುವ ಇಂಥ ಪತ್ರಿಕೆಗಳದು ಒಂದು ಬಗೆಯ ಗೂಂಡಾಗಿರಿಯೆ! ದೈಹಿಕ ಹಲ್ಲೆ, ಗೂಂಡಾಗಿರಿಗಿಂತಲೂ ಸಾಹಿತ್ಯಕವಾಗಿ ಕಲ್ಪನೆಯನ್ನು ಹೆಣೆದು ವ್ಯಕ್ತಿಗಳ ತೇಜೋವಧೆ ಮಾಡುವಿಕೆ ಇನ್ನೂ ಹೆಚ್ಚಿನ ಗೂಂಡಾಗಿರಿಯೆ ಸರಿ. ಏಕೆಂದರೆ ಆ ಕಪೋಲ ಕಲ್ಪಿತ ಕಥೆಗಳನ್ನೇ ನಂತರದವರು ಐತಿಹಾಸಿಕ ಸಂಗತಿಯಾಗಿ ಪರಿಗಣಿಸಲೂಬಹುದು. ಇದರಿಂದಾಗಿ ಸಾಹಿತ್ಯಕ ಗೂಂಡಾಗಿರಿ ಕಾಲ ದೇಶಾತೀತವಾಗಿ ದಾಖಲೆಯಾಗುವ ಸಂಭವವಿರುತ್ತದೆ. ಶ್ರೀ ಅರುಣ ಶೌರಿಯವರ ಪತ್ರಿಕಾ ವ್ಯವಸಾಯ ಕುರಿತು ಬರೆದ ಎರಡು ಲೇಖನಗಳನ್ನು ಓದಿದೆ; ಇವರೊಬ್ಬ ಜವಾಬ್ದಾರಿಯುತ ಪತ್ರಕರ್ತರು. ಒಂದು ಲೇಖನದಲ್ಲಿ ಬರೆಯುತ್ತಾರೆ, "ಕೆಲವು ಪತ್ರಿಕೆಗಳು ಉಗುಳಿ ಓಡುವುದಷ್ಟೆ ಕೆಲಸ" ಎಂದು ಭಾವಿಸಿವೆ ಎಂಬುದಾಗಿ. ಯಾವ ಗಾಂಭೀರ್ಯ, ಪರಿಶೀಲನೆ ಇಲ್ಲದೆ ಬರೆದು ಬಿಡುತ್ತವೆ. ತಮ್ಮ ವರದಿ ತಪ್ಪು ಎಂದು ತಿಳಿದಾಗಲೂ ತಿದ್ದಿಕೊಳ್ಳುವುದಿಲ್ಲ ಮತ್ತು ತಪ್ಪು ವರದಿಗಾಗಿ ವಿಷಾದವನ್ನು ವ್ಯಕ್ತಪಡಿಸುವುದಿಲ್ಲ ಎಂದು. ಇಂದು (14-4-95) ಹೊಸ ದಿಗಂತ ದಿನ ಪತ್ರಿಕೆಯಲ್ಲಿ "ದಾರಿ ತಪ್ಪಿದ ಪತ್ರಿಕಾ ಮಾಧ್ಯಮ" ಎಂಬ ಶ್ರೀ ಅರುಣಶೌರಿಯವರ ಇನ್ನೊಂದು ಲೇಖನವನ್ನೂ ಓದಿದೆ. ನಿಜಕ್ಕೂ ಮನನಾರ್ಹ ಲೇಖನ. ಪತ್ರಿಕಾ ವ್ಯವಸಾಯದ ಪಾವಿತ್ರ್ಯತೆಗೇ ಬಹುಪಾಲು ಜನರು ಬದ್ಧರಾಗಿಲ್ಲ. ಪತ್ರಿಕೆಗಳು ಹೇಗೆ ತಮಗೆ ಬೇಕಾದ್ದನ್ನು ಬೆಲ್ಲವಾಗಿ ಮಾಡಿ, ಅಭಿಪ್ರಾಯ ರೂಪಿಸಲು ಏಕಮುಖವಾಗಿ ಹೋರಾಡುತ್ತವೆ ಎಂಬುದನ್ನೂ ಮನನೀಯವಾಗಿ ಬರೆದಿದ್ದಾರೆ. ಆದರೆ ಬರಹದ ಕೊನೆಯಲ್ಲಿ ಅವರು ಕೊಟ್ಟ ಒಂದು ಅಭಿಪ್ರಾಯದ ಮಾತು "ಜನರು ಈಗ ಮಾಧ್ಯಮಗಳು

ಮೂಡಿಸುವ ಅಭಿಪ್ರಾಯಗಳಿಗೆ ಹೆಚ್ಚಿನ ಬೆಲೆಯನ್ನೇ ನೀಡುತ್ತಿಲ್ಲ" ಎಂಬುದು ಬಹಳ ಗಮನಾರ್ಹವಾಗಿದೆ. ನಾನು ಸ್ವಾನುಭವದಿಂದ ಕಂಡುಕೊಂಡ ಈ ಸತ್ಯವನ್ನು ಶ್ರೀ ಅರುಣಶೌರಿಯವರ ಲೇಖನವೂ ಸಮರ್ಥಿಸಿದಾಗ ನಿಜಕ್ಕೂ ಹಿಗ್ಗಾಯಿತು. ನಮ್ಮ ಅನೇಕ ಕಾರ್ಯಕ್ರಮಗಳು ಅಸಂಖ್ಯಾತರನ್ನು ಆಕರ್ಷಿಸಿ, ಪರಿಣಾಮ ಬೀರಿರುತ್ತವೆ. ಪತ್ರಿಕಾ ಪ್ರಚಾರ ಸಿಗುವುದಿಲ್ಲ. ಆದರೆ "ನಾಲ್ಕು ವಡ್ಡಿ ಮೂರು ಕಾಳು" ಜನ ಸೇರಿರುವುದಿಲ್ಲ. ಆದಕ್ಕೆ ಕೆಲವು ಪತ್ರಿಕೆಗಳು ಎಷ್ಟು ಪ್ರಚಾರ ಕೊಡುತ್ತವೆ?! ಆದರೂ ಗಮನಿಸಬಹುದು ಬಾಯಿಂದ ಬಾಯಿಗೆ ಹೋದ ಪ್ರಚಾರ ಎಷ್ಟು ಪರಿಣಾಮಕಾರಿಯಾಗಿ ಕೆಲಸ ಮಾಡುತ್ತದು ಎಂಬುದನ್ನು. ಆದ್ದರಿಂದಲೇ ನಾನು ಅನೇಕ ಸಲ ಒತ್ತಿ ಒತ್ತಿ ಹೇಳುತ್ತೇನೆ. "ನಾವು ಕೀರ್ತಿ-ಪ್ರಚಾರದ ಕಡೆಗೇ ಎಲ್ಲ ಲಕ್ಷ್ಯ ಇಡಬಾರದು. ಸತತವಾಗಿ ಕಾರ್ಯ ಮಾಡುತ್ತಾ ಹೋಗಬೇಕು, ನಂತರ ಕೀರ್ತಿ ದೊರೆತೇ ದೊರೆಯುತ್ತದೆ."

ಪಶ್ಚಾತ್ತಾಪ ಪಡಲು ಬಿಡುವುದೇ ಇಲ್ಲ

ಕನ್ನಡ ಪತ್ರಿಕೋದ್ಯಮ ಜಗತ್ತಿನಲ್ಲಿ ಅತ್ಯಂತ ಕೊಳಕು ಎನ್ನಬಹುದಾದ ಪತ್ರಿಕೆಯ ಜನಕ ಲಂಕೇಶ. ಆದರೆ ಎಂತೆಂಥವರು "ಪತ್ರಿಕೋದ್ಯಮದಲ್ಲಿ ಒಂದು ಹೊಸ ಪಥ ನಿರ್ಮಾಣ ಮಾಡಿದರು. ಒಂದು ಹೊಸ ಆಯಾಮ ನೀಡಿದರು" ಎಂದು ಆ ವ್ಯಕ್ತಿಯ 60ನೆಯ ಹುಟ್ಟುಹಬ್ಬದ ಸನ್ನಿವೇಶದಲ್ಲಿ ಹೊಗಳಿದ್ದೇ ಹೊಗಳಿದ್ದು. ಪಾಪ ಅವರಿಗೆ ತಾನು ಸಾಗಿ ಬಂದಿರುವ ಹೀನ ದಾರಿಯನ್ನು ಪರಿಶೀಲನೆ ಮಾಡಲು ಅವಕಾಶವನ್ನೇ ಈ ವಂದಿಮಾಗಧರು ಕೊಡರು. ಶ್ರೀ ಪಾಟೀಲ ಪುಟ್ಟಪ್ಪನವರ ಹೋಲಿಕೆಯಲ್ಲಿ ಹೇಳುವಂತೆ "ನಿನ್ನ ಬೆನ್ನು ನಾನು ಕೆರೀತೀನಿ, ನನ್ನ ಬೆನ್ನು ನೀನು ಕೆರೆ" ಎಂಬ ಹೊಂದಾಣಿಕೆ ಪರಸ್ಪರರಲ್ಲಿ. ಗಟಾರೇಶರು ಪತ್ರಿಕಾ ವೃತ್ತಿಗೆ ಒಂದು ಹೊಸ ಆಯಾಮ ಕೊಟ್ಟರು ಎಂಬ ಒಂದು ಹೊಗಳಿಕೆ ಓದಿ ನನಗಂತೂ ತುಂಬಾ ನಗು ಬಂದಿತು. ಹಾವು-ಚೇಳುಗಳ ಮರಿಯಂಥ ಶಿವಪ್ರಕಾಶರ ಭಾಷೆಯಲ್ಲಿ 'ಪಾಪದ ಮೊಟ್ಟೆ'ಗಳಂತಹ ಕೆಲವು ವರದಿಗಾರರ ಸಂತಾನವನ್ನೇ ಬೆಳೆಸಿಬಿಟ್ಟಿದ್ದಾರೆ. ಇಂಥ ಅಟ್ಟಕ್ಕೇರಿಸುವ ಹೊಗಳುಭಟ್ಟರಿಂದ ಗಟಾರೇಶರಿಗೆ ಪಶ್ಚಾತ್ತಾಪ ಪಡಲೂ ಸಮಯವಿಲ್ಲ, ಅವಕಾಶವೂ ಇಲ್ಲ. ಈ ದೇಶದಲ್ಲಿ ಒಂದು ವಿಲಕ್ಷಣ ವಾತಾವರಣ ಮೂಡಿದೆ. ಒಳ್ಳೆಯ ಜನರು ಎದೆಗುಂದಿದ್ದಾರೆ. ಅವರ ಧ್ವನಿ ಕ್ಷೀಣವಾಗುತ್ತಿದೆ. ಕೊಳಕು ಬುದ್ಧಿಯ ಕೊಳಕು ಬಾಯಿಯ ಬರಹಗಾರರಿಗೆ ಹೆದರಿ ಸಜ್ಜನರು ದಿವ್ಯ ಮೌನ ತಾಳಿಬಿಟ್ಟಿರುವುದರಿಂದ ಶನಿ ಸಂತಾನದ ಅಭಿವೃದ್ಧಿಗೆ ತಡೆಯೇ ಇಲ್ಲವಾಗಿದೆ.

ಮಾನವರು ಒಂದೊಂದು ಕಾಲದಲ್ಲಿ, ಒಂದು ವಯಸ್ಸಿನಲ್ಲಿ, ಒಂದು ಪರಿಸರದ ಒತ್ತಡಕ್ಕೆ ಸಿಕ್ಕಿ ತಪ್ಪು ಮಾಡಬಹುದು. ಆದರೆ ಕಾಲವು ಸಾಗಿದಂತೆ ಬದುಕು ಮಾಗಿದಂತೆ ಪಶ್ಚಾತ್ತಾಪ ಪಡುವ ಸಾಧ್ಯತೆ ಇರುತ್ತದೆ. ಆದರೆ ಲಂಕೇಶ್, ಶಿವಪ್ರಕಾಶ

ರಂತಹವರ ಬದುಕಿನಲ್ಲಿ ಈ ಅಂತರವಲೋಕನ, ಆತ್ಮನಿರೀಕ್ಷಣೆ ಮತ್ತು ಪಶ್ಚಾತ್ತಾಪಗಳು ಸಮೀಪ ಸಹ ಸುಳಿಯುವು. ಕಾಯಿಗಳಲ್ಲಿ ಮೂರು ಬಗೆ. ಬಾಳೆ, ಮಾವು, ಹುಣಿಸೆ ತರಹ. ಬಾಳೆಕಾಯಿ ಎಳೆಯದಿರುವಾಗಲೂ ಹುಳಿಯಿರದು. ಮಾಗಿದಾಗ ಇನ್ನಷ್ಟು ಸಿಹಿಯಾಗುವುದು. ಮಾವು ಎಳೆಯದಿದ್ದಾಗ ಒಗರು, ಹುಳಿ ಇದ್ದು ನಂತರ ಸಿಹಿಯಾಗುವುದು. ಹುಣಿಸೆ ಒಗರು, ಹುಳಿ ಇದ್ದು ಹಣ್ಣಾದರೂ ಹುಳಿಯೇ ಇರುವುದು. ಹಾಗೆಯೇ ಕೆಲವರು ಬಾಲ್ಯದಿಂದಲೂ ಉತ್ತಮರಾಗಿಯೇ ಇದ್ದು, ಉತ್ತಮರಾಗಿಯೇ ಬದುಕುವರು. ಮತ್ತೆ ಕೆಲವರು ಬಾಲ್ಯ-ಯೌವನಗಳಲ್ಲಿ ತಪ್ಪು ಮಾಡಿದರೂ ಮುಪ್ಪು ಮಾಗಿದಂತೆ ಮಾವಿನ ಹಣ್ಣು ಮಾಗಿ ಸಿಹಿಯಾಗುವಂತೆ ಬದಲಾಗುವರು. ಮತ್ತೆ ಕೆಲವರು ಬಾಲ್ಯ-ಯೌವ್ವನಗಳಲ್ಲಿದಂತೆಯೇ ಇರುವುದಲ್ಲದೆ ಮುಪ್ಪಾದರೂ ಬದಲಾಗರು, ಇನ್ನಷ್ಟು ದುಷ್ಟ ಪ್ರವೃತ್ತಿ ವಯಸ್ಸಾದಂತೆ ಹೆಚ್ಚು ಆಗಬಹುದು.

ಲಂಕೇಶ್, ಶಿವಪ್ರಕಾಶರ ಥವರ ಅಂತರಂಗ ಒಳಗೆ ತಳಮಳಿಸಿ ಪಶ್ಚಾತ್ತಾಪ ಪಡುತ್ತಿದ್ದರೂ ಪಡುತ್ತಿರಬಹುದು. ಆದರೆ ಆ ತಪ್ಪುಗಳನ್ನು ಒಪ್ಪಿಕೊಳ್ಳಲು, ತಿದ್ದಿಕೊಳ್ಳಲು ಅವರೇನು ಸಂತ, ಶರಣ, ಮಹಾತ್ಮರಲ್ಲ ತಾನೆ ? ಹಾಗಾಗಿ ಅವರ ಅಹಂ ಅಡ್ಡ ಬರುತ್ತದೆ. ತಪ್ಪು ಒಪ್ಪಿಕೊಳ್ಳದಂತೆ ತಡೆಯುತ್ತದೆ ; ತಪ್ಪನ್ನು ಮುಂದುವರಿಸುವಂತೆಯೇ ಪ್ರಚೋದಿಸುತ್ತದೆ. ಇಂಥ ತಪ್ಪು ಒಪ್ಪಿಕೊಳ್ಳದಂತೆ, ಪಶ್ಚಾತ್ತಾಪ ಪಡದಂತೆ ರಕ್ಷಿಸುವ ಒಂದು ದಂಡು ಸದಾ ಸುತ್ತುವರಿದಿರುತ್ತದೆ. "ನೀವು ಮಾಡುವುದು ಸರಿ; ಮಾಡಿದ್ದು ಸರಿಯೇ ಸರಿ" ಎಂದು ಅವರನ್ನು ವೈಭವೀಕರಿಸಿ ಹೊಗಳಿ ಅವರನ್ನು ಸರ್ವಜ್ಞರೆಂಬ ಭ್ರಾಂತಲೋಕದಲ್ಲಿ ಕಟ್ಟಿಹಾಕುತ್ತದೆ ಈ ದಂಡು. ಮಹಾಚೈತ್ರ ಉತ್ತಮ ಕೃತಿ, ಉತ್ತಮ ನಾಟಕ ಎಂದು ಶಿವಪ್ರಕಾಶರನ್ನು ಹೊಗಳಿ ಸ್ವವಿಮರ್ಶೆ ಮಾಡಿಕೊಳ್ಳದಂತೆ, ತನ್ನ ತಪ್ಪಿಗಾಗಿ ಪಶ್ಚಾತ್ತಾಪ ಪಡದಂತೆ ಈ ದಂಡು ಕೆಲಸ ಮಾಡುತ್ತದೆ.

ಅದೇ ರೀತಿ ಪತ್ರಿಕೋದ್ಯಮದಲ್ಲಿ ಒಂದು ಹೊಸ ಆಯಾಮ ಕಲ್ಪಿಸಿದವರು, ಸೃಜನಶೀಲರು ಎಂದೆಲ್ಲ ಹೊಗಳಿ ಅಟ್ಟಕ್ಕೇರಿಸಿ ಲಂಕೇಶರನ್ನು ಕೊಳಕು ಬರವಣಿಗೆಯ ಸೃಷ್ಟಿ ಅಥವಾ ಪ್ರಕಾಶನದ ಕೆಸರಿನಿಂದ ಹೊರಬರದಂತೆ ಈ ದಂಡು ಪ್ರಯತ್ನಿಸುತ್ತದೆ. ಪತ್ರಿಕೋದ್ಯಮದ ನೀತಿ, ನಿಯಮ, ನಿಯಂತ್ರಣಗಳನ್ನು ಗಾಳಿಗೆ ತೂರುತ್ತಾ ಒಂದಾದರೂ ವಿಧಾಯಕವಾದ ದೃಷ್ಟಿಕೋನ ರೂಪಿಸದೆ, ಅರುಣಶೌರಿಯವರು ಹೇಳುವಂತೆ ದಾರಿಯಲ್ಲಿ ಸಿಕ್ಕವರ ಮೇಲೆಲ್ಲ **'ಉಗುಳಿ ಓಡಿ'** ತನ್ನ ಅಪ್ರಾಮಾಣಿಕ ಬರಹಗಳಿಗಾಗಿ ಎಳ್ಳಷ್ಟೂ ಪಶ್ಚಾತ್ತಾಪ ಪಡದೆ ಒಳ್ಳೆಯದನ್ನೂ ವಿಕೃತವಾಗಿ ತಿರುಚಿ ಬರೆಯುವ ಹಾವು-ಚೇಳುಗಳಂತಹ ಕೆಲವು ವರದಿಗಾರರ ಬಾಯಿಗೆ ಧ್ವನಿ ಕೊಟ್ಟು ಕನ್ನಡ ಸಾಹಿತ್ಯದಲ್ಲಿ ಒಂದು ಕಲಂಕವಾಗಿರುವ ಲಂಕೇಶರ **'ಗಟಾರ'** ದ ನಾತವನ್ನು ಸಹಿಸಿಕೊಳ್ಳುವುದೇ ಕನ್ನಡಿಗರ ಹಣೆ ಬರಹವೇನೋ ? !

★

॥ ಓಂ ಶ್ರೀ ಗುರು ಬಸವಲಿಂಗಾಯ ನಮಃ ॥

ಕರ್ನಾಟಕದ ರಾಜಧಾನಿ ಬೆಂಗಳೂರಿನ ಮಲ್ಲೇಶ್ವರಂ ಬಡಾವಣೆಯಲ್ಲಿರುವ ಮಹಾನಗರಪಾಲಿಕೆ ಆಟದ ಮೈದಾನದಲ್ಲಿ

(ಕೆ. ಸಿ. ಜನರಲ್ ಆಸ್ಪತ್ರೆ ಎದುರು)

1995 ರ ಮೇ 12, 13, 14 ರಂದು

ಅಖಿಲ ಭಾರತ ಬಸವ ಧರ್ಮ ತೃತೀಯ ಸಮ್ಮೇಳನ

ಶರಣ ಬಂಧುಗಳೇ,

ವಿಶ್ವಗುರು ಬಸವಣ್ಣನವರು 12 ನೆಯ ಶತಮಾನದಲ್ಲಿ ಆಗಿಹೋದ ಕ್ರಾಂತಿ ಪುರುಷರು, ಶ್ರೇಷ್ಠ ಸಮಾಜ ಸುಧಾರಕರು, ಸಮತಾವಾದಿಗಳು, ರಾಜಕಾರಣ ಮುತ್ಸದ್ದಿ, ಜಾತಿ ವರ್ಣವರ್ಗರಹಿತ ಧರ್ಮಸಹಿತವಾದ ಕಲ್ಯಾಣ ರಾಜ್ಯವನ್ನು ಮರ್ತ್ಯಲೋಕದಲ್ಲಿ ಕಟ್ಟಿ ತೋರಿಸಿದ ಚಿಂತನ ಶೀಲರು. ಪರಮಾತ್ಮನ ದಿವ್ಯಕೃಪೆ-ಯನ್ನು ಹೊತ್ತು ಮರ್ತ್ಯಲೋಕಕ್ಕೆ ಬಂದು ವಿಶ್ವಾತ್ಮನ ಕುರುಹಾಗಿ ಇಷ್ಟಲಿಂಗ-ವನ್ನು ಸಾಕಾರಗೊಳಿಸಿಕೊಟ್ಟು ಸಮತಾವಾದವನ್ನು ನೆಲೆಗೊಳಿಸಿದರು. ಗಣಲಾಂಛನವನ್ನಾಗಿ ಇಷ್ಟಲಿಂಗವನ್ನು ಕೊಟ್ಟು ಪ್ರತಿಯೊಬ್ಬರ ಅಂಗದ ಮೇಲೂ ಧರಿಸಿಕೊಳ್ಳುವ ಸದವಕಾಶ ನೀಡಿ ಉದಾತ್ತವಾದ ಶರಣ ಸಮಾಜವನ್ನು ಕಟ್ಟಿದರು. ಹೀಗೆ ಇಷ್ಟಲಿಂಗವೇ ಪ್ರಮುಖವಾದ ಲಾಂಛನವಾಗಿರುವ ಲಿಂಗಾಯತ (ಲಿಂಗವಂತ), ಶರಣ ಸಮಾಜದ ಅಸ್ತಿತ್ವಕ್ಕೆ ಕಾರಣೀಭೂತರಾಗಿ ಲಿಂಗಾಯತ ಧರ್ಮದ ಸ್ಥಾಪಕರಾದರು. ಇಂತಹ ಲಿಂಗವಂತ ಸಮಾಜವು ಅಂದರೆ ಲಿಂಗಾಯತ ಧರ್ಮಾನುಯಾಯಿಗಳು ಕರ್ನಾಟಕದಲ್ಲಿ ಬಹುಸಂಖ್ಯಾತರಾಗಿ ನೆರೆಯ ಆಂಧ್ರ, ಮಹಾರಾಷ್ಟ್ರ, ತಮಿಳುನಾಡು, ಕೇರಳ, ಮಧ್ಯಪ್ರದೇಶ ಮತ್ತು ಹೊರರಾಷ್ಟ್ರಗಳಲ್ಲಿಯೂ ಸಾಕಷ್ಟು ಸಂಖ್ಯೆಯಲ್ಲಿ ನೆಲೆಸಿದ್ದಾರೆ.

ಬಸವ ತತ್ತ್ವಾನುಯಾಯಿಗಳಾದ ಲಿಂಗವಂತ ಧರ್ಮೀಯರನ್ನು ಸಂಘಟಿಸಲು, ಸಂಸ್ಕಾರ ನೀಡಲು, ವಚನ ವಾಙ್ಮಯವು ಪ್ರತಿಪಾದಿಸುವ ಶರಣ ಸಂಸ್ಕೃತಿಯ ಪ್ರಭಾವಕ್ಕೆ ಒಳಪಡಿಸಲು ವಿವಿಧ ಸ್ಥಳಗಳಲ್ಲಿ ಬಸವ ಧರ್ಮ ಸಮ್ಮೇಳನಗಳನ್ನು

ಹೆಮ್ಮೆಕೊಳ್ಳಲಾಗುತ್ತಿದೆ. ವಿಶ್ವಗುರು ಬಸವಣ್ಣನವರ ವಿದ್ಯಾಭೂಮಿ, ತಪೋಸ್ಥಾನ, ಐಕ್ಯಕ್ಷೇತ್ರ ಕೂಡಲ ಸಂಗಮದಲ್ಲಿ ಬಸವ (ಲಿಂಗಾಯತ) ಧರ್ಮ ಸಂಸ್ಥಾಪನಾ ದಿನದ ಅಂಗವಾಗಿ ಪ್ರತಿವರ್ಷದ ಜನವರಿ 12 ರಿಂದ 15 ರ ವರೆಗೆ ಶರಣ ಮೇಳವು 1988 ರಿಂದಲೂ ನಡೆದು ಬರುತ್ತಿದೆಯಷ್ಟೆ. ಮುಸಲೀಮರಿಗೆ ಮೆಕ್ಕಾ, ಸಿಖ್ಖರಿಗೆ ಅಮೃತಸರ, ಬೌದ್ಧರಿಗೆ ಗಯೆ ಪವಿತ್ರ ಧರ್ಮಕ್ಷೇತ್ರಗಳಾದಂತೆ ಬಸವ ತತ್ತ್ವಾನುಯಾಯಿಗಳಿಗೆ ಕೂಡಲ ಸಂಗಮವೇ ಧರ್ಮಕ್ಷೇತ್ರವಾಗಿರುವ ಕಾರಣ, ಲಿಂಗಾಯತ ಧರ್ಮೀಯರು ವರ್ಷಕ್ಕೊಮ್ಮೆಯಾದರೂ ಒಂದು ಕಡೆ ಸೇರಿ, ತಮ್ಮ ಧಾರ್ಮಿಕ ಅನುಯಾಯಿತ್ವವನ್ನು ಸ್ಥಿರೀಕರಿಸಬೇಕೆಂಬುದೇ ಶರಣ ಮೇಳದ ಉದ್ದೇಶ. ಎಲ್ಲೆಡೆಯಲ್ಲಿ ಚದುರಿ ಹೋಗಿರುವ ಲಿಂಗವಂತ ಧರ್ಮೀಯರನ್ನು ಸಂಘಟಿಸಲು, ಸಂಸ್ಕಾರ ನೀಡಲು ಮತ್ತು ಏಕರೂಪದ ಆಚಾರ-ವಿಚಾರಗಳನ್ನು ಸಮಾಜದಲ್ಲಿ ಅಳವಡಿಸಲು ಕರ್ನಾಟಕದ ಹೊರರಾಜ್ಯಗಳಲ್ಲಿ, ಕರ್ನಾಟಕದ ವಿವಿಧ ಸ್ಥಳಗಳಲ್ಲಿ ಬಸವ ಧರ್ಮ ಸಮ್ಮೇಳನ ನಡೆಸಬೇಕೆಂದು ಶರಣ ಮೇಳದ ಮಹಾಸಭೆಯಲ್ಲಿ ದಿ.14-1-1993 ರಂದು ನಿರ್ಣಯ ಕೈಗೊಳ್ಳಲಾಯಿತು. 1993 ರ ಮೇ ತಿಂಗಳಿನಲ್ಲಿ ಮೊಟ್ಟ ಮೊದಲನೆಯ ಸಮ್ಮೇಳನವು ತಮಿಳುನಾಡಿನ ನೀಲಗಿರಿ ಜಿಲ್ಲೆಯ ಕಾಟೇರಿ ಡ್ಯಾಂಸೈಟ್ ಎಂಬಲ್ಲಿ ನಡೆಯಿತು. 1994 ರ ಮೇ ತಿಂಗಳಿನಲ್ಲಿ ಎರಡನೆಯ ಸಮ್ಮೇಳನವು ಆಂಧ್ರ ಪ್ರದೇಶದ ರಾಜಧಾನಿ ಹೈದರಾಬಾದ್ ನಗರದಲ್ಲಿ ನಡೆಯಿತು. ಮೂರನೆಯ ಸಮ್ಮೇಳನವು 1995 ನೆಯ ಮೇ ತಿಂಗಳಿನ 12, 13, 14 ರಂದು ಕರ್ನಾಟಕದ ರಾಜಧಾನಿ ಬೆಂಗಳೂರಿನಲ್ಲಿ ನಡೆಯುತ್ತಿದೆ.

ಇಂಥ ಸಮ್ಮೇಳನವನ್ನು ನಡೆಸುವುದರಿಂದ ಶರಣ ಬಂಧುಗಳೆಲ್ಲ ಒಟ್ಟಾಗಿ ಸೇರಲು, ಪರಸ್ಪರ ಸಹೋದರ ಭಾವನೆಯಿಂದ ಬೆರೆಯಲು ಅವಕಾಶ ಒದಗುವುದು. ಕನ್ನಡವನ್ನೇ ಧರ್ಮ ಭಾಷೆಯನ್ನಾಗಿ ಹೊಂದಿರುವ ಲಿಂಗಾಯತ ಧರ್ಮದ ಅನುಯಾಯಿಗಳು ಧಾರ್ಮಿಕವಾಗಿ, ಸಾಮಾಜಿಕವಾಗಿ, ಸಾಂಸ್ಕೃತಿಕವಾಗಿ ಒಂದಾಗಬೇಕಾದರೆ ಇಂಥ ಗಣಸಮ್ಮೇಳನಗಳು, ತನ್ಮೂಲಕ ಶರಣ-ಸಮಾಗಮ ಅತ್ಯಗತ್ಯ.

ಧರ್ಮಪಿತ ಬಸವ ತಂದೆಯವರು ಹೀಗೆ ಆದೇಶಿಸಿದ್ದಾರೆ :

ಲಕ್ಷಗಾವುದ ದಾರಿಯ ಹೋಗಿ
ಭಕ್ತನು ಭಕ್ತನ ಕಾಂಬುದು ಸದಾಚಾರ
ಅಲ್ಲಿ ಕೂಡಿ ದಾಸೋಹವ ಮಾಡಿದಡೆ
ಕೂಡಿಕೊಂಬನು ನಮ್ಮ ಕೂಡಲ ಸಂಗಮದೇವನು —ಬ. ಷ. ವ. 246

ಮಾನಸಿಕವಾಗಿ, ಹಾರ್ದಿಕವಾಗಿ, ಧಾರ್ಮಿಕವಾಗಿ, ಸಾಂಸ್ಕೃತಿಕವಾಗಿ ನಾವು ಪರಸ್ಪರ ಹತ್ತಿರವಾಗಬೇಕಾದರೆ ಲಕ್ಷಗಾವುದ ದೂರವೇ ಇರಲಿ, ಹೋಗಿ ಭಕ್ತ

ಕಾಣಬೇಕಂತೆ. ಅವರೊಂದಿಗೆ ಕೂಡಿ (ಒಡೆಯರಂತೆ, ಅತಿಥಿಗಳಂತೆ, ಜಂಬದಿಂದ ಬಿಗುಮಾನದಿಂದ ವರ್ತಿಸದೆ) ದಾಸೋಹವನ್ನು ಮಾಡಬೇಕಂತೆ.

ಧರ್ಮಕರ್ತರು ತಮ್ಮ ಇನ್ನೊಂದು ವಚನದಲ್ಲಿ ಹೀಗೆ ಆದೇಶಿಸುತ್ತಾರೆ :

ಕಾಗೆಯೊಂದಗುಳ ಕಂಡಡೆ ಕೂಗಿ ಕರೆಯದೆ
ತನ್ನ ಬಳಗವೆಲ್ಲವನು.
ಕೋಳಿಯೊಂದು ಕುಟಕ ಕಂಡಡೆ ಕೂಗಿ ಕರೆಯದೆ
ತನ್ನ ಕುಲವನೆಲ್ಲವನು ?
ಶಿವಭಕ್ತನಾಗಿ ಭಕ್ತಿಪಕ್ಷವಿಲ್ಲದಿದ್ದರೆ
ಆ ಕಾಗೆ ಕೋಳಿಗಳಿಗಿಂತ ಕರಕಷ್ಟ ಕೂಡಲಸಂಗಮದೇವಾ.

ಈ ಆದೇಶದಂತೆ ನಾವು ಭಕ್ತಿಪಕ್ಷವನ್ನು ಕಟ್ಟಿಕೊಂಡು ಬಾಳಬೇಕು. ಮಾನವ ಸಂಘಜೀವಿ, ಸಮಾಜ ಜೀವಿ, ಭಕ್ತಿಯನ್ನೇ ಸೂತ್ರವನ್ನಾಗಿ ಮಾಡಿಕೊಂಡು ಸಂಘ ಶಕ್ತಿಯನ್ನು ಬೆಳೆಸಬೇಕು.

ಈ ಸಮ್ಮೇಳನವು ಯಶಸ್ವಿಯಾಗಲು ನಿಮ್ಮೆಲ್ಲರ ಸಹಾಯ-ಸಹಕಾರ-ಪರಿಶ್ರಮ ಅತ್ಯಗತ್ಯ. ತನು–ಮನ–ಧನ–ಅಭಿಮಾನ–ಸಮಯ–ಪ್ರಾಣ ಎಂಬ ಷಡಂಗಗಳನ್ನೂ ನಾವು ಧರ್ಮ ಗುರುವಿಗಾಗಿ, ದೇವರಿಗಾಗಿ ವಿನಿಯೋಗಿಸಬೇಕು. **ಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು ಲಿಂಗಾನಂದ ಮಹಾಸ್ವಾಮಿಗಳ** ದಿವ್ಯಸನ್ನಿಧಿ ಮತ್ತು ಮಾರ್ಗದರ್ಶನದಲ್ಲಿ ನಡೆಯಲಿರುವ ಈ ಸಮ್ಮೇಳನದಲ್ಲಿ ಹಲವಾರು ಪೂಜನೀಯ ಮಠಾಧೀಶರು, ಸಮಾಜದ ನೇತಾರರು, ರಾಜಕೀಯ ಗಣ್ಯರು ಭಾಗವಹಿಸಿ ಉಪನ್ಯಾಸ ಮಾಡಲಿದ್ದಾರೆ. ಈ ಸಮ್ಮೇಳನ ಕಾರ್ಯಕ್ರಮದ ವ್ಯವಸ್ಥೆಗೆ ಬೃಹತ್ ಪ್ರಮಾಣದ ಖರ್ಚು ಬರಲಿದ್ದು ತಮ್ಮೆಲ್ಲರ ಸಹಾಯ-ಸಹಕಾರ ಅತ್ಯಗತ್ಯ. ಧನ ಸಹಾಯ ಮಾಡುವವರಿಗೆ ಕೆಳಗಿನಂತೆ ವಿವರಗಳನ್ನು ನೀಡಲಾಗಿದೆ.

1.	ಮಹಾಪೋಷಕರು	10,000 ರೂ. ಗಳು	ಮತ್ತು ಮೇಲೆ ಕೊಟ್ಟವರು
2.	ಪೋಷಕರು	5,000 ರೂ. ಗಳು	,,
3.	ದಾನಿಗಳು	1,000 ರೂ. ಗಳು	,,
4.	ಹಿತೈಷಿಗಳು	500 ರೂ. ಗಳು	,,
5.	ಸ್ವಾಗತ ಸಮಿತಿ ಸದಸ್ಯತ್ವ	150 ರೂ. ಗಳು	,,
6.	ಪ್ರತಿನಿಧಿ ಶುಲ್ಕ (ಒಬ್ಬರಿಗೆ)	100 ರೂ. ಗಳು	,,

ಬಂದಂತಹ ಪ್ರತಿನಿಧಿಗಳಿಗೆ ಸೂಕ್ತವಾಗಿ ಊಟ–ವಸತಿಯ ವ್ಯವಸ್ಥೆ ಮಾಡುವ ಹೊಣೆಗಾರಿಕೆ ನಮ್ಮ–ನಿಮ್ಮ ಮೇಲಿದೆ. ಅದರಲ್ಲೂ ಬೆಂಗಳೂರು ನಗರದಲ್ಲಿ ಎಲ್ಲಾ

ವಸ್ತುಗಳೂ ವಿಪರೀತ ತುಟ್ಟಿ. ಆದ್ದರಿಂದ ತಾವೆಲ್ಲರೂ ಉದಾರವಾಗಿ ಧನ ಸಹಾಯ ಮಾಡಬೇಕೆಂದು ಕೋರುತ್ತೇವೆ. ಬಸವ ತತ್ತ್ವಾನುಯಾಯಿಗಳು ಸ್ಥಳೀಯ ಸಮಿತಿಗಳನ್ನು ರಚಿಸಿಕೊಂಡು ಉದಾರವಾಗಿ ದೇಣಿಗೆ ಸಂಗ್ರಹಿಸಿಕೊಡಬೇಕು; ಅಕ್ಕಿ, ಬೇಳೆ, ಬೆಲ್ಲ, ತರಕಾರಿ ಮುಂತಾದ ಪದಾರ್ಥಗಳನ್ನು ದಾಸೋಹಕ್ಕೆ ನೀಡುವುದಲ್ಲದೆ ಬೇರೆ ಬೇರೆ ಖರ್ಚಿನ ಐಟಮ್‌ಗಳನ್ನೂ ವಹಿಸಿಕೊಳ್ಳ ಬಹುದು. ಬೆಂಗಳೂರು ನಗರ ಮತ್ತು ಸಮೀಪದ ತಾಲ್ಲೂಕು ಗ್ರಾಮಗಳವರು ಸ್ವಯಂ ಸೇವಕರಾಗಿ ಕೆಲಸ ಮಾಡಲು ಮುಂದೆ ಬಂದು, ಮೊದಲೇ ಸಮ್ಮೇಳನ ಸಮಿತಿಯವರಿಂದ ಒಪ್ಪಿಗೆ ಪಡೆದುಕೊಳ್ಳಬೇಕು. ಬೆಂಗಳೂರು ನಗರದ ಮಧ್ಯದಲ್ಲಿ ಜನನಿಬಿಡ ಪ್ರದೇಶದಲ್ಲಿ ಸಮ್ಮೇಳನ ನಡೆಯಲಿರುವುದರಿಂದ ಪ್ರತಿನಿಧಿಗಳು ಗುರುತಿನ ಚೀಟಿ(ಬ್ಯಾಡ್ಜ್)ಯನ್ನು ಧರಿಸಿರಲೇ ಬೇಕಾಗುತ್ತದೆ. ಆದ್ದರಿಂದ ದೇಣಿಗೆ ಅಥವಾ ಪ್ರತಿನಿಧಿ ಶುಲ್ಕ ಕೊಟ್ಟು ಪಡೆದ ರಸೀತಿಗಳನ್ನು ತಂದು ತೋರಿಸಿ ಅಥವಾ ಸಮ್ಮೇಳನದ ಸ್ಥಳದಲ್ಲೇ ಹಣ ಪಾವತಿ ಮಾಡಿ ಬ್ಯಾಡ್ಜ್ ಪಡೆಯಬೇಕು. ಉಚಿತ ಪ್ರವೇಶ ಬಯಸುವವರು ಸಹ ಕಾರಣ ತಿಳಿಸಿ ಬ್ಯಾಡ್ಜ್ ಪಡೆದು ಧರಿಸಿರಲೇಬೇಕು.

ತಮ್ಮ ಸ್ವಂತ ಕಾಣಿಕೆ ಕಳಿಸುವವರೇ ಇರಲಿ, ದೇಣಿಗೆ ಸಂಗ್ರಹಿಸುವವರೇ ಇರಲಿ ಬ್ಯಾಂಕ್ ಡ್ರಾಫ್ಟ್‌ಗಳನ್ನು ***All India Basava Dharma Third Conference Committee*** ಎಂದು ಯಾವುದೇ ಬ್ಯಾಂಕಿನ ಬೆಂಗಳೂರು ಶಾಖೆಗೆ ತೆಗೆಸಬೇಕು. ಸಮ್ಮೇಳನಕ್ಕೆ ದೇಣಿಗೆ ಕೊಟ್ಟು 80 G ಇನ್‌ಕಮ್ ಟ್ಯಾಕ್ಸ್ ರಿಯಾಯಿತಿ ಪಡೆಯಬೇಕು ಎನ್ನುವವರು ***Basava Mahamane Charitable Trust*** ಎಂದು ಡಿ. ಡಿ. ತೆಗೆಸಬೇಕು.

❋ ಕಾರ್ಯಕ್ರಮದ ವಿವರ ❋

ಶುಕ್ರವಾರ ದಿ. 12–5–1995 : ಬೆಳಿಗ್ಗೆ 10–15 ಗಂಟೆಗೆ ಧ್ವಜಾರೋಹಣ ಮತ್ತು ಉದ್ಘಾಟನೆ; ಸಂಜೆ 4 ರಿಂದ ಧರ್ಮಚಿಂತನಗೋಷ್ಠಿ. 8 ಗಂಟೆಗೆ ಸಾಂಸ್ಕೃತಿಕ ಕಾರ್ಯಕ್ರಮ.

ಶನಿವಾರ ದಿ. 13–5–1995 : ಬೆಳಿಗ್ಗೆ 10–30 ಗಂಟೆಗೆ ಬಸವ ಜಯಂತಿ ಉತ್ಸವ ಉದ್ಘಾಟನೆ. ಬೆಂಗಳೂರಿನ ಚಿಕ್ಕಲಾಲ್‌ಬಾಗ್‌ದಿಂದ ಮಧ್ಯಾಹ್ನ 3–30 ರಿಂದ ಮೆರವಣಿಗೆ, ಪಥ ಸಂಚಲನ. ಮಲ್ಲೇಶ್ವರಂ ಮೈದಾನದವರೆಗೆ, ಸಂಜೆ 6–30 ರಿಂದ ಅಲ್ಪ ವಿರಾಮ; ಚಹಾಪಾನ, ರಾತ್ರಿ 7 ಗಂಟೆಗೆ ಸಾಮೂಹಿಕ ಇಷ್ಟಲಿಂಗಪೂಜೆ, 9 ರಿಂದ ಸಾಂಸ್ಕೃತಿಕ ಕಾರ್ಯಕ್ರಮ.

ಭಾನುವಾರ ದಿ. 14–5–1995 : ಬೆಳಿಗ್ಗೆ 10–30 ರಿಂದ ಸಮುದಾಯ ಪ್ರಾರ್ಥನೆ,

ಲಿಂಗಾಯತ ಧರ್ಮ ಮಹಾಸಭಾ ಕುರಿತು ಚಿಂತನೆ ಮತ್ತು ಸಮಾರೋಪ ಸಮಾರಂಭ. ದಿನ ನಿತ್ಯದ ಗೋಷ್ಠಿಗೆ ಮೊದಲು ಧ್ವಜಾರೋಹಣವಿರುತ್ತದೆ. ಎಲ್ಲಾ ಪ್ರತಿನಿಧಿಗಳು ಕಡ್ಡಾಯವಾಗಿ ಸ್ಕಾರ್ಫ್ ಧರಿಸಬೇಕು. ರಾಷ್ಟ್ರೀಯ ಬಸವ ದಳದ ಸಕ್ರಿಯ ಕಾರ್ಯಕರ್ತರಿಗೆ ಸಮವಸ್ತ್ರವನ್ನು ಕಡ್ಡಾಯಗೊಳಿಸಲಾಗಿದೆ. ಬಿಳಿಯ ಕುರ್ತಾ ಕಮೀಜ್ (ನೆಹರೂ ಡ್ರೆಸ್), ಸ್ಕಾರ್ಫ್, ಟೋಪಿ ಶರಣರಿಗೆ ಕಡ್ಡಾಯ. ವಯಸ್ಕ ಶರಣರು-ಶರಣೆಯರು ಬಿಳಿಯ ವಸ್ತ್ರ ತೊಟ್ಟು ಕಾವಿ ಸ್ಕಾರ್ಫ್ ಹಾಕಿದರೆ ಸಾಕು. ಸ್ಕಾರ್ಫ್, ಬಸವಲಿಂಗ ಮುದ್ರೆಯ ಟೋಪಿ ಮಾರಾಟಕ್ಕೆ ಸಿಗುತ್ತವೆ.

— ಸಮ್ಮೇಳನ ಸ್ವಾಗತ ಸಮಿತಿ —

ಬಸವ ಧರ್ಮ ಪೀಠ ಟ್ರಸ್ಟ್, ಕೂಡಲ ಸಂಗಮ ಇದರ ವತಿಯಿಂದ ರಾಷ್ಟ್ರೀಯ ಬಸವ ದಳಗಳ ಸೇವೆ–ಸಹಕಾರದೊಡನೆ ನಡೆಯುವ ಅಖಿಲ ಭಾರತ ಬಸವ ಧರ್ಮ ತೃತೀಯ ಸಮ್ಮೇಳನ ನಿರ್ವಹಣೆಗಾಗಿ ಕಾರ್ಯಕಾರಿ ಸಮಿತಿ, ಸಲಹಾ ಸಮಿತಿ, ಸಂಘಟನಾ ಸಮಿತಿ, ಸ್ವಾಗತ ಸಮಿತಿಗಳನ್ನು ರಚಿಸಲಾಗಿದೆ. ಇನ್ನಿತರ ಹಲವಾರು ಸಂಘ–ಸಂಸ್ಥೆಗಳ ನೆರವಿನೊಡನೆ ಸಮ್ಮೇಳನವು ಮಲ್ಲೇಶ್ವರಂ ಬಡಾವಣೆಯ 3 ನೆಯ ಬ್ಲಾಕಿನಲ್ಲಿರುವ ಕಾರ್ಪೊರೇಷನ್ ಕ್ರೀಡಾಂಗಣ (ಕೆ. ಸಿ. ಜನರಲ್ ಆಸ್ಪತ್ರೆ, ಮಲ್ಲೇಶ್ವರಂ ಪೋಲಿಸ್ ಠಾಣೆ ಎದುರು) ದಲ್ಲಿ ನಡೆಯುತ್ತದೆ. 'ಶರಣ ಮಂಟಪ' - ಶರಣರ ಭಾವಚಿತ್ರ ಪ್ರದರ್ಶನ, ಪುಸ್ತಕ ಮಾರಾಟದ ಮಳಿಗೆ ಇರುತ್ತವೆ. ಪ್ರತಿನಿಧಿಗಳ ವಾಸ್ತವ್ಯಕ್ಕಾಗಿ ಬೇರೆ ಬೇರೆ ಕಲ್ಯಾಣ ಮಂಟಪ, ಛತ್ರ, ಶಾಲೆ-ಕಾಲೇಜುಗಳನ್ನು ಪಡೆಯಲಾಗಿದೆ. [ಈಗಾಗಲೇ, ಶ್ರೀರಾಮ ಕಲ್ಯಾಣ ಮಂದಿರ, ಸೀತಾ ಸಮುದಾಯ ಭವನ, ತೆಂಗಿನಮರದ ರಸ್ತೆ, 7 ನೆಯ ಕ್ರಾಸ್, ಗೀತಾಂಜಲಿ ಟಾಕೀಸ್ ಹಿಂಭಾಗ ಮಲ್ಲೇಶ್ವರಂ, ಬೆಂಗಳೂರು-6. ಇವುಗಳನ್ನು ಸಮ್ಮೇಳನದ ಸಮಯದಲ್ಲಿ ವಾಸ್ತವ್ಯಕ್ಕಾಗಿ ಪಡೆದುಕೊಳ್ಳಲಾಗಿದೆ.] ಸ್ವಾಗತ ಸಮಿತಿಯ ತಾತ್ಕಾಲಿಕ ಕಾರ್ಯಾಲಯವು ಸಮ್ಮೇಳನದ ವೇಳೆಯಲ್ಲಿ ಸಭಾಮಂಟಪ ಮೈದಾನದಲ್ಲಿ, ಶಾಶ್ವತ ಕಾರ್ಯಾಲಯವು ರಾಜಾಜಿನಗರದ ಬಸವ ಮಂಟಪದಲ್ಲಿ ಇರುತ್ತದೆ. ಶರಣ ಬಾಂಧವರು ಸಹಸ್ರಾರು ಸಂಖ್ಯೆಯಲ್ಲಿ ಬಂದು ಸಮ್ಮೇಳನದ ಯಶಸ್ಸಿಗಾಗಿ-ತನು ಮನ-ಧನಗಳಿಂದ ದುಡಿದು ಸೃಷ್ಟಿಕರ್ತ ಪರಮಾತ್ಮನ ಮತ್ತು ಧರ್ಮಗುರು ಬಸವಣ್ಣನವರ ಕೃಪೆಗೆ ಪಾತ್ರರಾಗಬೇಕೆಂದು ಕೋರುತ್ತೇವೆ.

— ಶರಣರ ಬರವಿಗೆ ಪ್ರಾಣಜೀವಾಳ —

ಶರಣ ಎನ್. ಪುಟ್ಟರುದ್ರಪ್ಪ,	**ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ**
ಪ್ರಧಾನ ಕಾರ್ಯದರ್ಶಿ ದೂ : 3325335	ಕಾರ್ಯಾಧ್ಯಕ್ಷೆ

ಕಾರ್ಯಾಲಯದ ವಿಳಾಸ :

ಅಖಿಲ ಭಾರತ ಬಸವ ಧರ್ಮ ತೃತೀಯ ಸಮ್ಮೇಳನ ಸಮಿತಿ
ಬಸವ ಮಂಟಪ, 2035, 20ನೇ ಮೆಯಿನ್, 2ನೇ ಬ್ಲಾಕು,
ರಾಜಾಜಿನಗರ, ಬೆಂಗಳೂರು-560010

ಬಸವ ಧರ್ಮದ ಮಹಾಜಗದ್ಗುರು ಪೀಠ—ಅಲ್ಪ ಪರಿಚಯ

ಕೂಡಲ ಸಂಗಮ ಸುಕ್ಷೇತ್ರದಲ್ಲಿ ಬಸವ ಧರ್ಮದ ಮಹಾಜಗದ್ಗುರು ಪೀಠವು ಸ್ಥಾಪನೆಯಾಗಿದ್ದು, ಅನೇಕ ಧಾರ್ಮಿಕ, ಆಧ್ಯಾತ್ಮಿಕ, ಸಾಮಾಜಿಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ಯಾತ್ರಾರ್ಥಿಗಳಿಗಾಗಿ ನಿತ್ಯ ದಾಸೋಹವನ್ನು ನಡೆಸುತ್ತಿದೆ. ಬಂದ ಪ್ರವಾಸಿಗಳು ಉಳಿದುಕೊಳ್ಳಲು ಮೂರು ಅಂತಸ್ತಿನ ಅತಿಥಿ ಗೃಹವನ್ನು ನಿರ್ಮಿಸಿದೆ. ಕೂಡಲಸಂಗಮವನ್ನು ಅಂತರರಾಷ್ಟ್ರೀಯ ಖ್ಯಾತಿಯ ಕ್ಷೇತ್ರವನ್ನಾಗಿ ರೂಪಿಸುವ ಯೋಜನೆ ಹೊಂದಿರುವುದೇ ಅಲ್ಲದೆ, ವಿವಿಧ ಭಾಷೆಗಳಲ್ಲಿ ಸಾಹಿತ್ಯವನ್ನು ಪ್ರಕಟಿಸುತ್ತಲಿದೆ. ಸಂಗಮ ಕ್ಷೇತ್ರದ ಮಹಾಮನೆ ಮಹಾಮಠದ ಆವರಣದಲ್ಲಿ ಧಾರ್ಮಿಕ ಸಾಹಿತ್ಯ, ಶರಣರ ಭಾವಚಿತ್ರ, ಪ್ರವಚನ, ಭಕ್ತಿಗೀತೆಗಳ ಆಡಿಯೋ, ವಿಡಿಯೋ ಕೆಸೆಟ್ಟುಗಳು ಮಾರಾಟಕ್ಕೆ ದೊರೆಯುತ್ತವೆ.

ಬಸವ (ಲಿಂಗಾಯತ) ಧರ್ಮದ ಆರು ಸೂತ್ರಗಳು

1. **ಧರ್ಮಗುರು** – ವಿಶ್ವಗುರು **ಬಸವಣ್ಣನವರು.**
2. **ಧರ್ಮ ಸಂಹಿತೆ** – ಸಮಾನತೆ ಸಾರುವ **ವಚನ ಸಾಹಿತ್ಯ.**
3. **ಧರ್ಮ ಲಾಂಛನ** – ವಿಶ್ವಾತ್ಮನ ಕುರುಹಾದ **ಇಷ್ಟಲಿಂಗ.**
4. **ಧರ್ಮ ಕ್ಷೇತ್ರ** – ಬಸವಣ್ಣನವರ ಐಕ್ಯಕ್ಷೇತ್ರ **ಕೂಡಲಸಂಗಮ.**
5. **ಧರ್ಮ ಧ್ವಜ** – ಷಟ್ಕೋನ ಸಹಿತ **ಬಸವ ಧ್ವಜ.**
6. **ಧರ್ಮದ ಧ್ಯೇಯ**– ಜಾತಿ ವರ್ಣವರ್ಗರಹಿತ, ಧರ್ಮ ಸಹಿತ **ಕಲ್ಯಾಣ ರಾಜ್ಯ ನಿರ್ಮಾಣ.**

ಬಸವಣ್ಣ

ಕನ್ನಡಿಗರ ರಾಷ್ಟ್ರಪುರುಷನೆಂದರೆ — ಬಸವಣ್ಣ ।
ಕನ್ನಡಿಗರ ಧರ್ಮದ್ರಷ್ಟಾರನೆಂದರೆ — ಬಸವಣ್ಣ ।
ಕನ್ನಡಿಗರ ಸಾಹಿತ್ಯಮಂದಾರನೆಂದರೆ — ಬಸವಣ್ಣ ।
ಕನ್ನಡಿಗರಿಗೆ, ಬಸವಾ ಬಸವಾ ಎಂಬುದೇ ಉಸಿರು ।
ಬಸವಾ ಬಸವಾ ಎಂಬುದೇ ಮಂತ್ರ ತಂತ್ರ ।
ಬಸವಾ ಬಸವಾ ಎಂಬುದೇ ಸಾಕ್ಷ್ಯ ಮೋಕ್ಷವೆಂದ ಕುಮಾರ ಕಕ್ಕಯ್ಯ

—ಕುಮಾರ ಕಕ್ಕಯ್ಯ ಪೋಳ

ಕಾನೂನು ದೃಷ್ಟಿಯಲ್ಲಿ 'ಮಹಾಚೈತ್ರ'

—ರಾಜಶೇಖರ ಚಂದನಗೌಡರು

ಶ್ರೀ ಎಚ್. ಎಸ್. ಶಿವಪ್ರಕಾಶ ಅವರು ಬರೆದ ನಾಟಕ ಮಹಾಚೈತ್ರ ಇತ್ತೀಚೆಗೆ ಗುಲಬರ್ಗಾ ಹಾಗೂ ಕುವೆಂಪು ವಿಶ್ವವಿದ್ಯಾಲಯಗಳಲ್ಲಿ ಕನ್ನಡ ಪಠ್ಯಪುಸ್ತಕವೆಂದು ಪುರಸ್ಕೃತವಾದಾಗಿನಿಂದ, ಅದರ ಬಗ್ಗೆ ಸಮಾಜದಲ್ಲಿ ಅಶಾಂತಿ, ಕ್ಷೋಭೆ ಭುಗಿಲೆದ್ದು ಎಷ್ಟೋ ಮಠಾಧೀಶರೂ, ಬಸವಾನುಯಾಯಿಗಳು ಬೀದಿಗಿಳಿಯುವಂತೆ ಮಾಡಿವೆಯಲ್ಲದೆ ಎಷ್ಟೋ ಗಣ್ಯ ಲೇಖಕರು ಅಂದರೆ ಜ್ಞಾನಪೀಠ ಪ್ರಶಸ್ತಿ ಪಡೆದ ಶ್ರೀ ಯು. ಆರ್. ಅನಂತಮೂರ್ತಿ, ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರೂ ಆದ ಗೋ. ರು. ಚನ್ನಬಸಪ್ಪ, ಡಾ॥ ಚಿದಾನಂದಮೂರ್ತಿ, ಶ್ರೀ ಜಿ. ಎಸ್. ಶಿವರುದ್ರಪ್ಪ, ಶ್ರೀ ಜೆ. ಎಸ್. ಸಿದ್ಧಲಿಂಗಯ್ಯ ಅಲ್ಲದೇ ನಿವೃತ್ತ ನ್ಯಾಯಾಧೀಶರೂ ಹಾಗೂ ನ್ಯಾಯವಾದಿಗಳು ಆದಂಥ ಶ್ರೀ ಕೋ. ಚನ್ನಬಸಪ್ಪ ಅವರಂಥವರೂ ಕೂಡ ಮಹಾಚೈತ್ರವನ್ನು ಶ್ಲಾಘಿಸಿದ್ದಲ್ಲದೇ ಅದೊಂದು ಮಹಾ ಸೃಜನಶೀಲ ಕೃತಿಯೆಂದೂ ಹೊಗಳಿ ಸಮಾಜದಲ್ಲಿ ಅಶಾಂತಿ ಇನ್ನೂ ಭುಗಿಲೇಳುವಂತೆ ಮಾಡಿದ್ದು ನೋಡಿ ಮನಸ್ಸಿಗೆ ತುಂಬಾ ದುಃಖ ಉಂಟು ಮಾಡಿದ್ದರಿಂದ ಈ ಲೇಖನ ಬರೆಯುತ್ತಿದ್ದೇನೆ.

ಸಹಸ್ರಾರು ಬಸವಾನುಯಾಯಿಗಳೂ, ಮಹಾಚೈತ್ರದಲ್ಲಿ ಬರುವ ಬಸವ ನಿಂದೆ ಹಾಗೂ ಇತರ ಶಿವಶರಣರ ನಿಂದೆ, ಅವರ ಅಪಹಾಸ್ಯ ಹಾಗೂ ಅವರ ಚಾರಿತ್ರ್ಯ ವಧೆ ಮಾಡಿ "ವಿಶ್ವಗುರು ಬಸವಣ್ಣನವರ" ಹುಟ್ಟನ್ನೇ ಅವಾಚ್ಯವಾಗಿ ಚಿತ್ರಿಸಿ ಇತಿಹಾಸವನ್ನೇ ತಿರುಚಿ ಬರೆದಿದ್ದರಿಂದ ಅವರ ಮನಸ್ಸಿಗೆ ಆಘಾತವಾಗಿ ಅವರ ಧಾರ್ಮಿಕ ಭಾವನೆಗಳು ಕೆರಳಿ ಗುರು ನಿಂದನೆಯನ್ನು ಸಹಿಸಲಾರದೆ ಆಕ್ರೋಶಗೊಂಡು ಬೀದಿಗೆ ಬರುವಂತೆ ಮಾಡುವಲ್ಲಿ, ಕೃತಿಕಾರರು, ಅವರ ಸಮರ್ಥಕರು, ಹಾಗೂ ವಿಶ್ವವಿದ್ಯಾನಿಲಯದವರು ಕಾರಣವೆಂಬುದರಲ್ಲಿ ಸಂದೇಹವಿಲ್ಲ, ಆದರೂ ಬಸವಾನುಯಾಯಿಗಳು ಸಂಯಮದಿಂದ ವರ್ತಿಸಿ ಶಾಂತಿಯುತ ಹೋರಾಟ ಮಾಡಬೇಕಾಗಿದೆ. ಇಂಥ ಅಶಾಂತಿಗೆ ಕಾರಣರಾದ ಶ್ರೀ ಎಚ್.ಎಸ್. ಶಿವಪ್ರಕಾಶರ ಸಮರ್ಥಕರಾದ ಅವರ ಸಾಹಿತಿ ಮಿತ್ರರು ಹಾಗೂ ವಿಶ್ವವಿದ್ಯಾನಿಲಯದ ಅಧಿಕಾರಿಗಳು ಈ ನಾಟಕವನ್ನು ಅಮೂಲಾಗ್ರವಾಗಿ ಓದಿ ಅದರಲ್ಲಿ ಬರೆಯಲಾದ ಬಸವಣ್ಣನವರ ಹಾಗೂ ಇತರ ಶಿವಶರಣರ, ಶಿವಶರಣೆಯರ ವ್ಯಕ್ತಿ-ನಿಂದೆ ಹಾಗೂ ಅಪಮಾನಕರವಾದ ಅಂಶಗಳು ಅವರ ಅನುಯಾಯಿಗಳ ಮನಸ್ಸಿಗೆ ಆಘಾತ ಕೊಟ್ಟು ಅವರ ಧಾರ್ಮಿಕ ಭಾವನೆಗಳನ್ನು ಕೆರಳಿಸಿ ಸಮಾಜದಲ್ಲಿ

ಗಲಭೆ ಹಾಗೂ ಅಶಾಂತಿ ಹುಟ್ಟಿಸುತ್ತಿವೆಯೋ ? ಅನ್ನುವದನ್ನು ಕಾಯಿದೆಯ ದೃಷ್ಟಿಯಲ್ಲಿ ವಿಮರ್ಶಿಸಬೇಕಿತ್ತೇ ಹೊರತು ಅದನ್ನು ಅವರು ಅಭಿವ್ಯಕ್ತಿ ಸ್ವಾತಂತ್ರ್ಯದಡಿಯಲ್ಲಾಗಲೀ ಇಲ್ಲವೇ ಸೃಜನಶೀಲ ಕೃತಿಗಳ ನಿರ್ಮಾಣಕ್ಕೆ ಅಡ್ಡಿ ಒಡ್ಡುತ್ತವೆ ಎಂಬ ನೆಪದಲ್ಲಿ ಮಹಾಚೈತ್ರ ನಾಟಕವನ್ನು ವಿಮರ್ಶಿಸಿ ಅದನ್ನು ಸಮರ್ಥಿಸುತ್ತಿದ್ದು ಇದು ಸಮಾಜದ ಒಂದು ದುರ್ದೈವವಾಗಿದೆ. ಈ ನಾಟಕ ಒಂದು ಸೃಜನಾತ್ಮಕ ಕೃತಿಯೆಂದು ಹೇಳುವವರು ಯಾವ ಮಾನದಂಡದಿಂದ ಹೇಳುತ್ತಿದ್ದಾರೆ ಅನ್ನುವುದು ನನ್ನಂಥ ಸಾಮಾನ್ಯರಿಗೆ ಇನ್ನೂ ಅರ್ಥವಾಗಿಲ್ಲ. ಅದನ್ನು ಸೃಜನಾತ್ಮಕ ಕೃತಿ ಎಂದು ಹೊಗಳುವವರು ಅದನ್ನು ಅಮೂಲಾಗ್ರವಾಗಿ ಓದದೇ ಹೇಳಿದ ಹೇಳಿಕೆ ಎಂಬುದು ನನ್ನ ಗ್ರಹಿಕೆ.

ಇದೊಂದು ಸೃಜನಾತ್ಮಕ ಕೃತಿಯೆಂದು ಒಂದು ವೇಳೆ ಗ್ರಹಿಸಿದರೂ ಕೃತಿಕಾರನು ತನ್ನ ಮನಸ್ಸಿಗೆ ಬಂದದ್ದನ್ನು ಬರೆದು ಅದನ್ನು ಅಭಿವ್ಯಕ್ತಿ ಸ್ವಾತಂತ್ರ್ಯದ ಅಡಿಯಲ್ಲಿ ಸಮರ್ಥಿಸಿಕೊಳ್ಳಬಹುದೇ ? ಅಥವಾ ಇಂಥ ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಭಾರತದ ಸಂವಿಧಾನದಲ್ಲಿಯಾಗಲೀ ಇಲ್ಲವೇ ಭಾರತದ ದಂಡ ಸಂಹಿತೆಯಲ್ಲಿ ಏನಾದರೂ ಕಟ್ಟುಪಾಡುಗಳಿವೆಯೋ ಎಂಬುದನ್ನು ಕೂಲಂಕುಷವಾಗಿ ಓದಿ ತಿಳಿದುಕೊಂಡು ಈ ಕಾನೂನುಗಳ ವ್ಯಾಪ್ತಿಗೆ ಒಳಪಟ್ಟು ಒಂದು ಕೃತಿ ರಚಿಸಬೇಕಾಗುತ್ತದೆ ಎಂಬುದನ್ನು ಈ ಸೃಜನಶೀಲ ಲೇಖಕರು ತಿಳಿದುಕೊಂಡಿರುವದು ಒಳ್ಳೆಯದು.

ನಮ್ಮ ಭಾರತದ ಸಂವಿಧಾನದ ಅಧಿನಿಯಮ 19 (1) (ಅ) ಒಬ್ಬ ವ್ಯಕ್ತಿಗೆ ವಾಕ್ ಸ್ವಾತಂತ್ರ್ಯ (ಫ್ರೀಡಂ ಆಫ್ ಸ್ಪೀಚ್ ಅಂಡ್ ಎಕ್ಸ್‌ಪ್ರೆಷನ್) ಕೊಟ್ಟಿದ್ದು ನಿಜವಾದರೂ ಅದೇ ಅಧಿನಿಯಮದ ಉಪನಿಯಮ (2) ಸರಕಾರಕ್ಕೆ ವ್ಯಕ್ತಿ ಸ್ವಾತಂತ್ರ್ಯವನ್ನು ಮೊಟಕುಗೊಳಿಸುವ ಅಧಿಕಾರವನ್ನು ಕೊಟ್ಟಿದ್ದು ಈ ಉಪನಿಯಮದ ವ್ಯಾಪ್ತಿಗೆ ಒಳಪಟ್ಟು ಸರಕಾರವು ಭಾರತದ ದಂಡ ಸಂಹಿತೆ ಕಾನೂನಿನಲ್ಲಿ ಮೂರು ಕಲಮುಗಳನ್ನು ಅಂದರೆ (1) 153 (ಅ) [2] 235 (ಅ) ಹಾಗೂ (3) 500 ಸೇರಿಸಿದ್ದು ಅವುಗಳಲ್ಲಿ ಕಲಮು (1) 153 ಅ ಇದು ಬೇರೆ ಬೇರೆ ಜಾತಿ, ಮತ, ಪಂಥಗಳಲ್ಲಿ ದ್ವೇಷವನ್ನು ಹುಟ್ಟಿಸಿ ಸಮಾಜದಲ್ಲಿ ಜಾತೀಯ, ಮತೀಯ ಅಥವಾ ಪಂಥಗಳಲ್ಲಿ ಸೌಹಾರ್ದತೆ ಹದಗೆಡಿಸುವಂಥ ಬರವಣಿಗೆಯನ್ನು ತಡೆದು ಅಂತಹ ಲೇಖನ ಅಥವಾ ಕೃತಿಗೆ ಕಾರಣರಾದವರನ್ನು ಮೂರು ವರ್ಷದ ಕಾರಾಗೃಹ ಶಿಕ್ಷೆ ಹಾಗೂ ದಂಡ ಅಥವಾ ಎರಡನ್ನೂ ವಿಧಿಸಬಹುದಾದ ಅಪರಾಧವನ್ನಾಗಿಸಿದೆ, ಅದೇ ರೀತಿ (2) ಕಲಮು 295 (ಅ) ಇದು ಯಾವುದೇ ವರ್ಗದ ಧಾರ್ಮಿಕ ಭಾವನೆಗಳನ್ನು ಅಥವಾ ಧಾರ್ಮಿಕ ನಂಬಿಕೆಗಳನ್ನು ಅವಮಾನಿಸಿ ಅವರ ಭಾವನೆಗಳನ್ನು ಕೆರಳಿಸುತ್ತಿದ್ದಾರೆ. ಅಂಥ ಲೇಖಕರನ್ನು ಅಥವಾ ಕೃತಿಕಾರರನ್ನು ಮೂರು ವರ್ಷ ಕಾರಾಗೃಹ ಶಿಕ್ಷೆ ಹಾಗೂ ದಂಡವನ್ನು ವಿಧಿಸುವ ಅಪರಾಧವನ್ನಾಗಿಸಿದೆ. ಅದೇ ರೀತಿ

(3) ಕಲಮು 500 ಇದು ಯಾವುದೇ ಒಬ್ಬ ಮನುಷ್ಯ ಮತ್ತೊಬ್ಬರನ್ನು ಅವಮಾನ ಪಡಿಸಿದರೆ ಅಂಥವನನ್ನು ಎರಡು ವರ್ಷ ಕಾರಾಗೃಹವಾಸ ಹಾಗೂ ದಂಡ ವಿಧಿಸುವ ಅಪರಾಧವನ್ನಾಗಿಸುತ್ತದೆ. ಆದ್ದರಿಂದ ಕೃತಿಕಾರರಾಗಲೀ, ವಿಮರ್ಶಕರಾಗಲೀ ಇಲ್ಲವೇ ಒಂದು ಕೃತಿಯ ಸಮರ್ಥಕರಾಗಲೀ, ಅಭಿವ್ಯಕ್ತಿ ಸ್ವಾತಂತ್ರ್ಯವೆಂದರೇನು ? ಅದರ ಬಗ್ಗೆ ಇರುವ ಕಟ್ಟುಪಾಡುಗಳೇನು ? ಎಂಬುದನ್ನು ಚೆನ್ನಾಗಿ ಅರಿತು ಮನನ ಮಾಡಿಕೊಂಡು ಒಂದು ಕೃತಿಯನ್ನು ರಚಿಸಬೇಕೇ ವಿನಾ ತಮಗೆ ತೋಚಿದ್ದನ್ನು ಬರೆದು ಸಮಾಜದಲ್ಲಿ ಅಶಾಂತಿ, ಕ್ಷೋಭೆ, ಗಲಭೆ, ಅರಾಜಕತೆ ಹುಟ್ಟಿಸುವದಲ್ಲ. ಮೇಲೆ ಹೆಸರಿಸಿದ ಉದ್ದಾಮ ಪಂಡಿತರೂ, ಸಾಹಿತಿಗಳೂ ತಮ್ಮ ವೃತ್ತಿ ಬಾಂಧವರನ್ನು ಕಾನೂನಿನ ವಿರುದ್ಧ ರಕ್ಷಿಸುವುದಕ್ಕೆ ಮುಂದಾಗದೇ ಮೇಲಿನ ಕಾನೂನಿನ ಅಡಿಗೆ ಒಳಪಟ್ಟು ಇನ್ನೊಮ್ಮೆ ತಮ್ಮ ಅನಿಸಿಕೆ ಅಥವಾ ವಿಮರ್ಶೆಗಳನ್ನು ಪ್ರಕಟಿಸಬೇಕೆಂದು ಕೋರುತ್ತೇನೆ.

ಅಲ್ಲದೇ ವಿಶ್ವವಿದ್ಯಾನಿಲಯದ ಪಠ್ಯ ಪುಸ್ತಕ ಸಮಿತಿಯವರೂ ಈ 'ಮಹಾಚೈತ್ರ' ಕೃತಿಯನ್ನು ಪಠ್ಯಪುಸ್ತಕವಾಗಿಸುವಲ್ಲಿ ಎಡವಿದ್ದು ಮೇಲಿನ ಕಾನೂನುಗಳ ಕಟ್ಟುಪಾಡುಗಳ ಅಡಿಯಲ್ಲಿ ಪರಾಮರ್ಶಿಸದೇ ಅದರಲ್ಲಿರುವ ನ್ಯೂನತೆಗಳು ಮೇಲ್ನೋಟಕ್ಕೂ ಕಾಣಿಸುತ್ತಿದ್ದರೂ ಅವುಗಳಿಗೆ ಗಮನ ಕೊಡದೇ ಹೇಗೆ ಪಠ್ಯಪುಸ್ತಕವನ್ನಾಗಿ ಆಯ್ದರು ಎಂಬುದಕ್ಕೆ ಕಾರಣ ಕೊಟ್ಟು ಇನ್ನು ಮುಂದಾದರೂ ಇಂತಹ ಘಟನೆಗಳು ನಡೆಯದಂತೆ ಜಾಗರೂಕರಾಗಿರುತ್ತಾರೆ ಅಂತಾ ಹಾರೈಸುತ್ತೇನೆ.

ಅಲ್ಲದೇ ನಮ್ಮ ಘನಸರಕಾರದವರು ಈ ವಿಷಯ ಒಂದು ಸಾಮಾನ್ಯ ಘಟನೆಯೆಂದು ಅಲಕ್ಷಿಸದೇ ಕೂಡಲೇ ಕಾರ್ಯಪ್ರವೃತ್ತರಾಗಿ ಸಮಾಜದಲ್ಲಿ ಭುಗಿಲೆದ್ದಿರುವ ಅಶಾಂತಿ ಹಾಗೂ ಕ್ಷೋಭೆಯನ್ನು ಶಮನಗೊಳಿಸಲು ಕೂಡಲೇ ಕಾರ್ಯಪ್ರವರ್ತರಾಗಿ ಅಪರಾಧಿಗಳನ್ನು ಶಿಕ್ಷಿಸಿ ಮುಂದೆ ಇಂಥ ಘಟನೆಗಳು ಪುನಃ ಘಟಿಸದಂತೆ ನೋಡಿಕೊಳ್ಳಲಿ.

೭–೩–೧೯೯೫

ರಾಜಶೇಖರ. ಹೆಚ್. ಸಿ.
ನ್ಯಾಯವಾದಿ,
ನಂ. 82, ಹೈಪಾಯಿಂಟ ಅಪಾರ್ಟಮೆಂಟ
45, ಅರಮನೆ ರಸ್ತೆ, ಬಸವೇಶ್ವರ ವೃತ್ತ
ಬೆಂಗಳೂರು–560001.

ನ್ಯಾಯ ನಿಷ್ಠುರಿ, ದಾಕ್ಷಿಣ್ಯ ಪರನು ನಾನಲ್ಲ
ಲೋಕ ವಿರೋಧಿ ಶರಣನಾರಿಗಂಜುವನಲ್ಲ
ಕೂಡಲ ಸಂಗಮದೇವರ ರಾಜತೇಜದಲ್ಲಿಪ್ಪೆನಾಗಿ !

—ಧರ್ಮಪಿತ ಬಸವಣ್ಣನವರು.

"ಮಹಾಚೈತ್ರ" ದ ವಿಚಾರವಾದಿಗಳು ಸ್ಪಷ್ಟೀಕರಿಸುವರೇ ?

ಮಹಾಚೈತ್ರ ಕೃತಿಯು ಹಿಂಸೆ ಹಾಗೂ ಮುಕ್ತ ಲೈಂಗಿಕತೆಯನ್ನು (Advocacy of Crime & Free Sex) ಪ್ರತಿಪಾದಿಸುವ ಮೂಲಕ, ಬಸವಣ್ಣನವರ ಹಾಗೂ ಉಳಿದ ಶರಣ–ಶರಣೆಯರ ವ್ಯಕ್ತಿತ್ವ ಹಾಗೂ ಚಾರಿತ್ರ್ಯವನ್ನು ತೇಜೋವಧೆ ಮಾಡುವ ಕೃತಿಯಾಗಿದೆ ಎಂದು ನಮ್ಮ ಅನಿಸಿಕೆ. ಲೇಖಕರಾದಿಯಾಗಿ ಈ ಕೃತಿಯನ್ನು ಸಮರ್ಥಿಸುವ ರಾಜಕಾರಣಿಗಳು, ಮಂತ್ರಿಗಳು, ವಿಚಾರವಾದಿಗಳು, ಸಾಹಿತಿಗಳು ಈ ಆರೋಪವನ್ನು ಕುರಿತು ವಿವರವಾಗಿ ಸ್ಪಷ್ಟೀಕರಿಸಬೇಕು.

ಈ ಕೃತಿಯ ವಿರುದ್ಧ ಆರೇಳು ತಿಂಗಳಿನಿಂದ ಹೋರಾಟ ನಡೆದು ಬಂದಿದ್ದು ಈ ಹೋರಾಟದ ಫಲವಾಗಿ ಕರ್ನಾಟಕ ಸರ್ಕಾರ ಹಾಗೂ ಕರ್ನಾಟಕ ರಾಜ್ಯದ ರಾಜ್ಯಪಾಲರು ಕುವೆಂಪು ಹಾಗೂ ಗುಲಬರ್ಗ ವಿಶ್ವವಿದ್ಯಾಲಯಂಗಳಲ್ಲಿ, ಪಠ್ಯಪುಸ್ತಕವಾಗಿರುವುದನ್ನು 1994–95 ನೇ ಸಾಲಿನಿಂದಲೇ ತಮ್ಮ ಆಜ್ಞೆಯ ಮೂಲಕ ರದ್ದುಗೊಳಿಸಿದ್ದಾರೆ, ರಾಜ್ಯಪಾಲರ ಈ ಆಜ್ಞೆಯು ಅವರ ಅಂತಿಮ ನಿರ್ಧಾರವೆಂದು, ತದ್ವಾರಾ ಸರ್ಕಾರದ ಅಂತಿಮ ನಿರ್ಧಾರವೆಂದು, ಕರ್ನಾಟಕ ರಾಜ್ಯದ ಮುಖ್ಯಮಂತ್ರಿಗಳಾದ ಶ್ರೀ ಹೆಚ್. ಡಿ. ದೇವೇಗೌಡರು ಸ್ಪಷ್ಟಗೊಳಿಸಿದ್ದಾರೆ. ಹೀಗಿದ್ದೂ ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ, ವಿಧಾನಸಭಾಧ್ಯಕ್ಷರಾದ ಶ್ರೀ ರಮೇಶರವರು, ಕರ್ನಾಟಕ ಸರ್ಕಾರದ ಕೆಲವು ಮಂತ್ರಿಗಳು; ಈ ಕೃತಿಯನ್ನು ಸಮರ್ಥಿಸುವ–ವಿಚಾರವಾದಿಗಳು, ಸಾಹಿತಿಗಳು, ಲೇಖಕರು, ರಂಗಭೂಮಿ ಕಲಾವಿದರು, ಭಾರತ ವಿದ್ಯಾರ್ಥಿ ಫೆಡರೇಷನ್‌–ದವರು, ರಾಜ್ಯಪಾಲರ ಹಾಗೂ ಸರ್ಕಾರದ ಈ ಆಜ್ಞೆಯನ್ನು ಪ್ರಶ್ನಿಸುತ್ತಲೂ ಮತ್ತು ಪ್ರತಿಭಟಿಸುತ್ತಲೂ ಇದ್ದಾರೆ.

ಅಭಿಪ್ರಾಯ ಹಾಗೂ ಸೃಜನಶೀಲತೆಯ ಸೋಗಿನಲ್ಲಿ ಈ ಕೃತಿಯನ್ನು ಈ ಜನ ಸಮರ್ಥಿಸಿಕೊಳ್ಳುತ್ತಿದ್ದಾರೆ. ಈ ಕೃತಿಯನ್ನು ಕುರಿತು ಈ ಕೆಳಗಿನ ನಮ್ಮ ಕೆಲವು ಸಂದೇಹಗಳನ್ನು ಹಾಗೂ ಕೃತಿಯಲ್ಲಿರುವ ನಿರ್ದಿಷ್ಟ ವಿರೋಧಾಭಾಸಗಳನ್ನು ಕುರಿತು ವಿವರವಾದ ಸ್ಪಷ್ಟೀಕರಣವನ್ನು ಇವರು ನೀಡಬೇಕಾಗಿ ವಿನಂತಿ.

1] ಈ ಕೃತಿಯ ಲೇಖಕರಾದ ಶ್ರೀ ಹೆಚ್. ಎಸ್. ಶಿವಪ್ರಕಾಶರವರು ಸಂಯುಕ್ತ ಕರ್ನಾಟಕ, ಪ್ರಜಾವಾಣಿ, ಕನ್ನಡಪ್ರಭ ಮುಂತಾದ ಪತ್ರಿಕೆಗಳು ಹಾಗೂ ದಾವಣಗೆರೆಯ ಜನತಾವಾಣಿ ಪತ್ರಿಕೆಯ ಸಂದರ್ಶನದ ಮೂಲಕ ತಮ್ಮ ಕೃತಿಯನ್ನು ಸಮರ್ಥಿಸಿಕೊಂಡಿದ್ದಾರೆ. ಈ ಲೇಖಕರು 26–2–95 ರ ಜನತಾವಾಣಿ ಸಂದರ್ಶನದ ಮೂಲಕ ಈ ಕೆಳಗಿನ ಮಾತುಗಳನ್ನು ಹೇಳುತ್ತಾರೆ.

ಅ) ಸೃಜನಶೀಲತೆ ಇತಿಹಾಸದ ಯಥಾವತ್ ನಕಲಲ್ಲ. ಚರಿತ್ರೆಯ ಮರು ನಿರ್ಮಾಣದ ಪ್ರವೃತ್ತಿ.

ಆ) ನಾಟಕದ ಸಂಘರ್ಷದ ಸನ್ನಿವೇಶದಲ್ಲಿ ಉಭಯ ಪಕ್ಷಗಳಿಗೂ ನ್ಯಾಯ ದೊರಕಿಸುವುದು ನಾಟಕಕಾರನ ಗುರಿ.

ಇ) ಅಪವಿತ್ರ ಮನದವರಿಗೆ ಪವಿತ್ರವಾದುದು ಹೊಲಸಾಗಿಯೇ ಕಾಣುತ್ತದೆ, ಎಂದು ಇನ್ನು ಮುಂತಾಗಿ ಮಾತಾಡಿದ್ದಾರೆ. ಈ ಕೃತಿಯು ಇವರ ಈ ಅಭಿಪ್ರಾಯವನ್ನು ಸಮರ್ಥಿಸುತ್ತಿದೆಯೇ ? ಸ್ಪಷ್ಟೀಕರಿಸಬೇಕು.

2] ಮೈಸೂರಿನಲ್ಲಿ ಮಾರ್ಚ್ 12 ರಂದು "ಲಂಕೇಶ–60 ಹಾಗೂ ಕನ್ನಡ ಸಾಹಿತ್ಯ ಸಂಸ್ಕೃತಿಯ ಆಯಾಮಗಳು" ಎಂಬ ವಿಚಾರ ಸಂಕಿರಣದ ವೇದಿಕೆಯ ಮೇಲೆ ಡಾ॥ ಜಿ. ಎಸ್. ಶಿವರುದ್ರಪ್ಪನವರು ಈ ಕೆಳಗಿನಂತೆ ಮಾತನಾಡಿದ್ದಾರೆ.

1] "ಮಹಾಚೈತ್ರದ ವಾಪಸಾತಿ ಕ್ರಮ ದುರದೃಷ್ಟಕರ, ಕಳೆದ ಹತ್ತು ವರ್ಷಗಳಲ್ಲಿ ಮೈಸೂರು ಬೆಂಗಳೂರು ವಿಶ್ವವಿದ್ಯಾಲಯಂಗಳಲ್ಲಿ ಪಠ್ಯಪುಸ್ತಕವಾದಾಗ ಪ್ರತಿ–ಭಟನೆ ವ್ಯಕ್ತವಾಗಲಿಲ್ಲ ಈಗೇಕೆ ಈ ಪ್ರತಿಭಟನೆಯೆಂದು" ಕೇಳಿದ್ದಾರೆ! ಈ ಹಿಂದೆ ಈ ಕೃತಿಯನ್ನು ಕುರಿತು ಶಹಪುರದ 'ಅಗ್ನಿ ಅಂಕುರ' ಪತ್ರಿಕೆಯು ಖಂಡಿಸಿದೆ. ಉಳಿದವರಿಗೆ ಈಗ ಈ ಕೃತಿ ಗಮನಕ್ಕೆ ಬಂದಿದೆ. ಹೀಗಾಗಿ ಈಗ ವಿರೋಧಿಸುತ್ತಿದ್ದಾರೆ. ಹಿಂದಿನ ಶ್ರೀ ವೀರಪ್ಪಮೊಯಿಲಿಯವರ ಸರ್ಕಾರವು ವಾಪಸಾತಿ ಆದೇಶವಿತ್ತಾಗ, ಸುಮ್ಮನಿದ್ದ ಕೆಲವು ಸಾಹಿತಿಗಳು ಮತ್ತು ರಾಜಕಾರಣಿಗಳು ಆಗ ಪ್ರತಿಭಟಿಸದೆ ಈಗೇಕೆ ಪ್ರತಿಭಟಿಸುತ್ತಿದ್ದಾರೆ ? ಆಗ ಶ್ರೀ ಮೊಯಿಲಿ ಸರ್ಕಾರವು ಆದೇಶವಿತ್ತಾಗ ಕುವೆಂಪು ವಿ. ವಿ. ರವರು ಈ ಕೃತಿಯನ್ನು ಪಠ್ಯಕ್ರಮದಿಂದ ರದ್ದುಪಡಿಸಲು ನಿರಾಕರಿಸಿದರು. ಬೇಕಾದರೆ ಸರಕಾರವು ಈ ಕೃತಿಯನ್ನು ನಿಷೇಧಗೊಳಿಸಲಿ (Ban) ಎಂದು ಸರಕಾರದ ಅಧಿಕಾರವನ್ನು ಕುವೆಂಪು ವಿಶ್ವವಿದ್ಯಾನಿಲಯದ ಅಧಿಕಾರಿಗಳು ಒಪ್ಪಿಕೊಂಡಿದ್ದರು. ಸರಕಾರದ ಅಧಿಕಾರವನ್ನು ಒಪ್ಪಿಕೊಳ್ಳುವ ವಿಶ್ವವಿದ್ಯಾನಿಲಯದ ಈ ನಿಲುವಿನ ಬಗ್ಗೆ ಆಗ ಪ್ರತಿಭಟಿಸದ ಈ ಜನ, ಈ ರಾಜಕಾರಣಿಗಳು ಈಗೇಕೆ ಪ್ರತಿಭಟಿಸುತ್ತಿದ್ದಾರೆಂಬುದನ್ನು ವಿವರಿಸಲಿ.

2] ಡಾ॥ ಜಿ. ಎಸ್. ಎಸ್. ರವರು ಮಾರ್ಚ್–12 ರಂದು ಮುಂದುವರೆದು ಮಾತನಾಡುತ್ತಾ, ವಿವಿ ಅಕಾಡಮಿಕ್ ಕೌನ್ಸಿಲನ ಒಪ್ಪಿಗೆ ಪಡೆದೇ ಈ ಕೃತಿಯು ಪಠ್ಯಪುಸ್ತಕವಾಗಿತ್ತು. ಅದನ್ನು ಹಿಂತೆಗೆದುಕೊಂಡಿರುವದು ಶೈಕ್ಷಣಿಕವಾಗಿ ದುಸ್ಥಿತಿಗೆ ಎಡೆ ಮಾಡಿಕೊಟ್ಟಿದೆ ಎಂದಿದ್ದಾರೆ.

ಈ ವಿಷಯುವನ್ನು ಕುರಿತು ಡಾ॥ ಎಂ. ಚಿದಾನಂದಮೂರ್ತಿಯುವರು ಜನವರಿ 10ನೇ ತಾರೀಖಿನಂದು ಬೆಂಗಳೂರಿನಲ್ಲಿ ಮಿಥಿಕ್ ಸೊಸೈಟಿ ಹಾಗೂ ಭಾರತ ವಿದ್ಯಾರ್ಥಿ ಫೆಡರೇಷನ್‌ರವರು ಏರ್ಪಡಿಸಿದ ವಿಚಾರಸಂಕಿರಣದಲ್ಲಿ ಮಾತನಾಡುತ್ತಾ

ಅ] ಈ ಕೃತಿಯು ಕೆಲವು ಅಸಂಗತ ಐತಿಹಾಸಿಕ ದೋಷಗಳನ್ನು ಹೊಂದಿದೆ.

ಆ] ಪಠ್ಯಪುಸ್ತಕ ಆಯ್ಕೆ ಸಮಿತಿಯ ಕೆಲವು ಸದಸ್ಯರು ಭ್ರಷ್ಟಾಚಾರ, ಆಮಿಷ, ಒತ್ತಡಗಳಿಗೆ ಸಿಲುಕಿ ಈ ರೀತಿ ವಿವಾದಗಳಿಗೆ ಕಾರಣಕರ್ತರಾಗುತ್ತಿದ್ದಾರೆ.

ಇ] ಆಯ್ಕೆ ಸಮಿತಿಯ ಎಷ್ಟೋ ಸದಸ್ಯರು ಪುಸ್ತಕಗಳನ್ನು ಓದದೇ ಪಠ್ಯವನ್ನಾಗಿ ಮಾಡುತ್ತಾರೆ.

ಈ] ಮಹಾಚೈತ್ರದ ಪರವಾಗಿ ಮಾತನಾಡುವವರು, ಬುದ್ಧಿಜೀವಿಗಳು, ಪ್ರಗತಿ-ಪರರೆಂದು ಭಾವಿಸುವದಾಗಲಿ, ಅದರ ವಿರುದ್ಧ ಪ್ರತಿಭಟಿಸುವವರು ಸಂಪ್ರ-ದಾಯವಾದಿಗಳೆಂದು ವ್ಯಾಖ್ಯಾನಿಸುವದಾಗಲಿ ತಪ್ಪು.

ಉ] ಪ್ರಗತಿಪರರೆಂದು ಪುಸ್ತಕ-ಲೇಖನ ಬರೆಯುವ, ಅನೇಕ ಲೇಖಕರ ಒಳಗಿನ ನಡವಳಿಕೆ ಹಾಗಿರುವುದಿಲ್ಲವೆಂದು-ಟೀಕಿಸುತ್ತ. ವಿಷಾದ, ಅತೃಪ್ತಿ ವ್ಯಕ್ತಪಡಿಸಿ-ದ್ದಾರೆ.

ಊ] ಇದೇ ವಿಚಾರ ಸಂಕಿರಣದ ವೇದಿಕೆಯ ಮೇಲೆ ಶಿಕ್ಷಣ ತಜ್ಞರಾದ ಡಾ॥ ಜಿ. ರಾಮಕೃಷ್ಣರವರು ಮಾತನಾಡುತ್ತಾ ಆಯ್ಕೆ ಸಮಿತಿಯಲ್ಲಿ ಜವಾ-ಬ್ದಾರಿ ಹೊತ್ತವರು ಬೇಕಾಬಿಟ್ಟಿ ಕೆಲಸ ಮಾಡುತ್ತಿದ್ದಾರೆ ಎಂದು ವಿಷಾದ ವ್ಯಕ್ತಪಡಿಸಿದ್ದಾರೆ. ಇವರೀರ್ವರ ಅಭಿಪ್ರಾಯಗಳಿಗೆ ಡಾ॥ ಜಿ. ಎಸ್. ಶಿವ ರುದ್ರಪ್ಪನವರು ಏನೆನ್ನುತ್ತಾರೆ ?

3. ಡಾ॥ ಜಿ. ಎಸ್. ಎಸ್. ರವರು ಮಾರ್ಚ್-12 ರಂದು ಮುಂದುವರೆದು ಮಾತನಾಡುತ್ತಾ ಮಠಾಧಿಪತಿಗಳು ಪ್ರತಿಭಟನೆ ಮಾಡುವ ಬಾಯಿಯನ್ನು ತಯಾರು ಮಾಡಿದರು. ಆದರೆ ವಿಚಾರ ಮಾಡುವ ತಲೆಯನ್ನು ತಯಾರು-ಮಾಡಲಿಲ್ಲ ಎಂದು ಮಾತನಾಡಿದ್ದಾರೆ. ಈ ವಿಷಯದಲ್ಲಿ ಇವರು ಯಾವ ಯಾವ ಮಠಾಧಿಪತಿಗಳನ್ನು ಹಾಗೂ ಯಾವ ಯಾವ ವ್ಯಕ್ತಿಗಳನ್ನು ಕುರಿತು ಮಾತನಾಡಿದ್ದಾರೆಂಬುದನ್ನು ನಿರ್ಧಿಷ್ಟವಾಗಿ ಹೆಸರಿಸಿ, ವಿವರಿಸಬೇಕಾಗಿ ವಿನಂತಿ. ಇವರ ತಲೆ ಇಂತಹದೇ ಮಠಾಧೀಶರಿಂದ ತಯಾರಾಗಿದೆ ಎಂದು ಕೇಳಿದ್ದೇನೆ. ಅದನ್ನು ಒಪ್ಪುವ ಕೃತಜ್ಞತೆಯನ್ನಾದರೂ ಇವರು ವ್ಯಕ್ತಪಡಿಸು-ವರೇ?

4. ಮಾರ್ಚ್-1 ರಂದು ಬೆಂಗಳೂರಿನಲ್ಲಿ ಡಾ॥ ಯು. ಆರ್. ಅನಂತಮೂರ್ತಿ ಯುವರು ತಮ್ಮ ಸನ್ಮಾನ ಸಮಾರಂಭದಲ್ಲಿ ಮಾತನಾಡುತ್ತಾ 'ಸಮಾಜದ ಕೆಲವು

ದುಷ್ಟ ಶಕ್ತಿಗಳಿಂದ ವೈಚಾರಿಕ ಅಸಹನೆ ಪ್ರಕಟವಾಗುತ್ತಿದ್ದು ಬರಹಗಾರರು ಭಯಭೀತರಾಗುವ ವಾತಾವರಣ ರಾಜ್ಯದಲ್ಲಿ ಉಂಟಾಗಿದೆ ಎಂದಿದ್ದಾರೆ. ಈ ದುಷ್ಟ ಶಕ್ತಿಗಳು ಯಾವುವು? ಇವರ ದುಷ್ಟತನವೇನೆಂಬುದನ್ನು ಶ್ರೀಯುತರು ವಿವರಿಸಬೇಕಾಗಿ ವಿನಂತಿ.

5. ವಿಧಾನಸಭ್ಯಾಧ್ಯಕ್ಷರಾದ ಶ್ರೀ ರಮೇಶರವರು ಮಾರ್ಚ್-12 ರಂದು ಜರುಗಿದ ವಿಚಾರ ಸಂಕೀರಣದ ವೇದಿಕೆಯ ಮೇಲೆ ಮಾತನಾಡುತ್ತಾ, ಸರ್ಕಾರದ ಹಾಗೂ ರಾಜ್ಯಪಾಲರ ವಾಪಸಾತಿಯ ಆಜ್ಞೆಯ ಬಗ್ಗೆ ಹಾಗೂ ಮಹಾಚೈತ್ರವನ್ನು ವಿರೋಧಿಸುವವರ ಮೇಲೆ ಉಗ್ರವಾಗಿ ಮಾತನಾಡಿ ದಿನಾಂಕ 15-3-95 ರಂದು ಬೆಂಗಳೂರಿನಿಂದ ಪತ್ರಿಕಾ ಹೇಳಿಕೆ ನೀಡುತ್ತಾ ವಿರೋಧಿಸುವವರನ್ನು, "ಮೂಲಭೂತವಾದಿಗಳೆಂದು" ಟೀಕಿಸಿದ್ದಾರೆ. ಮುಂದುವರೆದು "ಜನಾಂದೋ-ಲನ ಅಥವಾ ಸಾಮಾಜಿಕ ಪ್ರತಿಭಟನೆ ಯಾವುದೆ ವೈಚಾರಿಕ ಚರ್ಚೆ ಅಥವಾ ವಿಚಾರಮಂಥನಗಳಿಗೆ ಆಸ್ಪದ ನೀಡದೆ ಸಮೂಹ ಸನ್ನಿಯ ಸ್ವರೂಪತಾಳಿ, ಚುನಾಯಿತ ಸರ್ಕಾರದ ನೀತಿಯ ಬದಲಾವಣೆಗೆ ಒತ್ತಡ ತರುವದು, ಆರೋಗ್ಯ ಕರ ನಡವಳಿಕೆಯಲ್ಲ" ಎಂದಿದ್ದಾರೆ. ಮಹಾಚೈತ್ರದ ಸಮರ್ಥಕರಿಗೆ, ಈ ಕೃತ್ಯವನ್ನು ವಿರೋಧಿಸುವವರು, ಬರವಣಿಗೆಯ ಮೂಲಕ ಚಿಂತನಾ ವೇದಿಕೆಗೆ ಆಹ್ವಾನಿಸುವುದರ ಮೂಲಕ, ಸಾಕಷ್ಟು ಅವಕಾಶ ನೀಡಿದ್ದಾರೆ. ಅಂತಿಮ-ವಾಗಿ ಪ್ರತಿಭಟನಾ ಸ್ವಾತಂತ್ರದ ಆಮರಣ ಸತ್ಯಾಗ್ರಹಕ್ಕೆ ಅನಿವಾರ್ಯವಾಗಿ ಇಳಿದಿದ್ದಾರೆ. ಒಂದು ವೇಳೆ ಆಂದೋಲನವು ಸಮೂಹ ಸನ್ನಿಯ ಸ್ವರೂಪ ತಾಳಿದ್ದರೆ ಅದನ್ನು ನಾನೂ ಒಪ್ಪುವುದಿಲ್ಲ. ಹಾಗೆ ಆಗುವ ಹಾಗೆ, ಅವಕಾಶ ಕೊಟ್ಟವರಾರು ? ಎಂಬುದನ್ನು ಇವರು ವಿವರಿಸಲಿ. ಹಾಗೆಯೇ ವಿರೋಧಿ-ಸುವವರಲ್ಲಿ ಮೂಲಭೂತವಾದುದಕ್ಕೆ ಯಾವ ಲಕ್ಷಣಗಳಿವೆ ಎಂಬುದನ್ನು ಶ್ರೀ ರಮೇಶರವರು ವಿವರಿಸಬೇಕಾಗಿ ವಿನಂತಿ.

3] ಈ ಕೃತಿಯನ್ನು ಕುರಿತು ನಮ್ಮ ಸಂದೇಹಗಳನ್ನು ಲೇಖಕರಾದಿಯಾಗಿ ಮೇಲೆ ಉಲ್ಲೇಖಿಸಿದ ಎಲ್ಲರ ಗಮನಕ್ಕೆ ತರಬಯಸುತ್ತೇನೆ.

ಅ] ಈ ಕೃತಿಯಲ್ಲಿ ಲೇಖಕರು ಬಸವಣ್ಣನವರ ಜನನವನ್ನು ಕುರಿತು ವಿರೋಧಿ ಪಾತ್ರಗಳ ಮೂಲಕ 'ಸಂದುಗೊಯ್ಯಲು' ಅಥವ 'ಹಾದರದ ಜನನವೆಂಬಂತೆ' ಮಾತನಾಡಿಸಿದ್ದಾರೆ. ಬಸವಣ್ಣನವರ ಜನನವನ್ನು ಕುರಿತು ಈ ಕೆಳಗಿನಂತೆ ನಾಲ್ಕು ಪ್ರಕಾರದ ಸ್ಪಷ್ಟವಾದ ಉಲ್ಲೇಖಗಳು ದೊರೆಯುತ್ತವೆ.

ಆ. 1] 1260 ರ ಅರ್ಜುನವಾಡ ಶಿಲಾಶಾಸನದಲ್ಲಿ ಬಸವಣ್ಣನವರು ಮಾದಿರಾಜರ ಮಗನೆಂದು, ಸ್ಪಷ್ಟವಾಗಿ ಉಲ್ಲೇಖಿತವಾಗಿದೆ.

2] ಬಸವಣ್ಣನವರು ತಮ್ಮದೇ ಆದ "ಅಣ್ಣ-ತಮ್ಮ-ಹೆತ್ತಣ್ಣ ಗೋತ್ರವಾದೋಡೇನು.... ನಂಟು ಭಕ್ತಿ ನಾಯಕ ನರಕ ಕೂಡಲ ಸಂಗಮದೇವ" ಎಂಬ ವಚನದಲ್ಲಿ ಅಪ್ರತ್ಯಕ್ಷವಾಗಿ ತಾವು ಮಾದಿರಾಜರ ಹಾಗೂ ಅವರ ಗೋತ್ರಕ್ಕೆ ಸೆರಿದವರೆಂದು ಸ್ಪಷ್ಟಪಡಿಸಿದ್ದಾರೆ.

3] ಅನೇಕ ಕಾವ್ಯಗಳಲ್ಲಿ ಬಸವಣ್ಣನವರು ಮಾದಿರಾಜ-ಮಾದಲಾಂಬಿಕೆಯವರ ಮಗನೆಂದು ಉಲ್ಲೇಖಿತರಾಗಿದ್ದಾರೆ.

4] "ಅನು ಹಾರುವನೆಂದಡೆ ಕೂಡಲ ಸಂಗಮದೇವ ನಗುವನಯ್ಯಾ" ಎಂಬ ಅವರ ಮಾತಿನಲ್ಲಿ ತಾವು ಬ್ರಾಹ್ಮಣರೆಂದು ಅಪ್ರತ್ಯಕ್ಷವಾಗಿ ಪ್ರತಿಪಾದಿಸಿದ್ದಾರೆ.

ಹೀಗೆ ಬಸವಣ್ಣನವರ ಜನನವನ್ನು ಕುರಿತು ಐತಿಹಾಸಿಕವಾದ, ಶಾಸನೋಕ್ತವಾದ, ಅವರದೇ ವಚನಗಳ ಉಲ್ಲೇಖಗಳಾದ ಹಾಗೂ ಕಾವ್ಯಗಳ ಉಲ್ಲೇಖಗಳ ಮೂಲಕ ದೃಢವಾದ ಆಕರಗಳು ದೊರೆಯುತ್ತಿದ್ದಾಗ್ಯೂ ವಿರೋಧಿ ಪಾತ್ರಗಳ ಮೂಲಕ ಅವರನ್ನು ಅನೌರಸ ಪುತ್ರನೆಂದು ಹೇಳಿಸಿದ ನಂತರ "ಪರ" ಪಾತ್ರಗಳ ಮೂಲಕ ಬಸವಣ್ಣನವರು ಮಾದಿರಾಜ-ಮಾದಲಾಂಬಿಕೆಯವರ ಔರಸುಪುತ್ರನೆಂದು (Legitimateson) ಸಂವಾದಿಯಾಗಿ ಈ ಲೇಖಕರು ಏಕೆ ಹೇಳಿಸಲಿಲ್ಲ.

ಆ] ಈ ಲೇಖಕರು ವಿರೋಧಿ ಪಾತ್ರಗಳ ಮೂಲಕ ಅಕ್ಕನಾಗಮ್ಮನನ್ನು ಕುರಿತು "ನೀತಿಗೆಟ್ಟ ಸ್ತ್ರೀ" ಎಂದು ಹೇಳಿಸಿದ್ದಾರೆ. ಆದರೆ ಅಕ್ಕನಾಗಮ್ಮನಿಗೆ ಶಿವಸ್ವಾಮಿ ಎಂಬ ಗಂಡನಿದ್ದ ಎಂಬ ಉಲ್ಲೇಖ ಸಿಂಗಿರಾಜ ಪುರಾಣದಲ್ಲಿದೆ ಹಾಗೂ ಬಸವಣ್ಣನವರ ಮನೆತನದ ವಂಶಾವಳಿ ಪತ್ರಿಕೆಯಲ್ಲಿ ಈ ಮಾತು ದೃಢಪಟ್ಟಿದೆ, ಅಕ್ಕನಾಗಮ್ಮನ ಪ್ರಕರಣದಲ್ಲಿ ಡಾ|| ಎಂ. ಎಂ. ಕಲ್ಬುರ್ಗಿಯವರು ಸಹ ಈ ಮಾತನ್ನು ಒಪ್ಪಿಕೊಂಡಿದ್ದಾರೆ. ಹೀಗೆ ಅಕ್ಕನಾಗಮ್ಮನವರು ನೀತಿಯುತ ಶರಣೆ ಎಂಬುದು ಸಿದ್ಧವಾಗುತ್ತಿರುವಾಗ, ಲೇಖಕರು ಸಂವಾದಿಯಾಗಿ ಪರಪಾತ್ರಗಳ ಮೂಲಕ ಇದನ್ನು ಏಕೆ ಸಮರ್ಥಿಸಲಿಲ್ಲ.

ಇ] ಈ ಕೃತಿಯಲ್ಲಿ ಅಕ್ಕಮಹಾದೇವಿಯನ್ನು ಕುರಿತು ಬತ್ತಲೆಯಾಗಿ, ಕಲ್ಯಾಣದ ಬೀದಿಯಲ್ಲಿ ಅಡ್ಡಾಡಿದಳು ಎಂದು ಹೇಳಿಸಿದ್ದಾರೆ. ಇದಕ್ಕೆ ಸಂವಾದಿಯಾಗಿ ಅಕ್ಕನನ್ನು ಕುರಿತು "ಅಂಗಕ್ಕೆ ಕೇಶವೆಂಬ ಸೀರೆ ಮರೆ ಮಾಚಿತ್ತು" ಎಂಬ ಪ್ರಭುದೇವರ ವಚನದ ದೃಢವಾದ ಸಾಕ್ಷಿಯನ್ನು ಪರ ಪಾತ್ರಗಳ ಮೂಲಕ ಲೇಖಕರು ಏಕೆ ಪ್ರತಿಪಾದಿಸಲಿಲ್ಲ. ?

ಬಸವಣ್ಣನವರ ಜನನ, ಅಕ್ಕನಾಗಮ್ಮ ಹಾಗು ಅಕ್ಕಮಹಾದೇವಿಯವರನ್ನು ಕುರಿತು ಲೇಖಕರು ಆಡಿಸಿರುವ ಮಾತುಗಳು ಕೃತಿ ಹಾಗೂ ಲೇಖಕರ ಅಂತಿಮ

ನಿರ್ಧಾರಗಳಂತೆ ಒಡಮೂಡಿವೆ, ಇದು ಮುಕ್ತ ಲೈಂಗಿಕತೆಯ ಪ್ರತಿಪಾದನೆಯಲ್ಲವೆ.? ಇದನ್ನು ಲೇಖಕರು ಸ್ಪಷ್ಟೀಕರಿಸಬೇಕು.

ಈ) ಬಸವಣ್ಣನವರು ಬಿಜ್ಜಳನ ಭಂಡಾರವನ್ನು ದೋಚಿದ ಆರೋಪವನ್ನು ಕುರಿತು ಬಸವಣ್ಣನವರು ಇದನ್ನು ಒಪ್ಪಿಕೊಳ್ಳಲೂ ಇಲ್ಲ. ತಮ್ಮನ್ನು ಕುರಿತು ಸಮರ್ಥಿಸಿಕೊಳ್ಳಲಿಲ್ಲವೆಂಬ ವಿರೋಧಾಭಾಸದ ಮಾತುಗಳನ್ನು ಆಡಿಸಿದ್ದಾರೆ.

1] "ಊರಮುಂದೆ ಹಾಲಹಳ್ಳ ಹರಿಯುತ್ತಿರಲು .... ಬಿಜ್ಜಳನ ಭಂಡಾರ ಎನಗೇಕಯ್ಯಾ ?

2] ಹೊಲೆ-ಹೊಲೆಯಲು ಮನೆಯ ಸಲೆ ಕೈ ಕೂಲಿ ಮಾಡಿಯಾದರೂ ನಿಮ್ಮ ನಿಲುಂಗೆ ಸಲುವೆನಲ್ಲದೆ, ಹೆಂಡಿರು ಮಕ್ಕಳಿಗೆಂದು ಕುದಿದೆನಾದಡೆ" ಎಂಬ ಮುಂತಾದ ಬಸವಣ್ಣನವರ ವಚನಗಳು ಇರುವಾಗ, ಹಾಗೆಯೆ, ಕಾಯಕವೇ ಕೈಲಾಸವೆಂಬ ಮಂತ್ರವನ್ನು ಬಸವಣ್ಣನವರು ತಮ್ಮ ಸಮಗ್ರ ಅನುಯಾಯಿ ಶರಣ-ಶರಣೆಯರ ಜೀವನದಲ್ಲಿ, ಆಚರಣೆಯಲ್ಲಿ, ಅಳವಡಿಸಿದ ಕ್ರಾಂತಿಯ ಐತಿಹಾಸಿಕ ಸಾಕ್ಷಿಯಿರುವಾಗ, ಬಸವಣ್ಣನವರು ಬಿಜ್ಜಳನ ಭಂಡಾರವನ್ನು ದೋಚಲಿಲ್ಲ ಎಂಬುದಕ್ಕೆ ಅನೇಕ ಕಾವ್ಯ ಪುರಾಣಗಳ ಆಧಾರವಿರುವಾಗ ಈ ಉಲ್ಲೇಖಗಳನ್ನು ಯಾವುದೇ ಪರಪಾತ್ರಗಳ ಮೂಲಕ ಸಂವಾದಿಯಾಗಿ ಲೇಖಕರು ಪ್ರತಿಪಾದಿಸಲಿಲ್ಲವೇಕೆ ?

5. ಬಸವಣ್ಣನವರ ಲಿಂಗೈಕ್ಯವನ್ನು ಕುರಿತು ಈ ಲೇಖಕರು ಒಂದು ಕಡೆ ಚೌಡಯ್ಯ ಕಲಕೇತಯ್ಯ ಮಡಿವಾಳ ಮಾಚರಸರು, ಮುಂತಾದ ಪಾತ್ರಗಳ ಮೂಲಕ ಬಸವಣ್ಣನವರು ಲಿಂಗೈಕ್ಯರಾದರೆಂದು, ಬಯಲಾದರೆಂದು ಅವರ ಸಹಜ ಮರಣವನ್ನು ಕುರಿತು ಮಾತನಾಡಿಸುತ್ತಾರೆ. ಮತ್ತೊಂದೆಡೆ ಚೌಡಯ್ಯನ ಪಾತ್ರದ ಮೂಲಕ "ಬಸವಣ್ಣನವರ ದೇಹ, ಬೆಸ್ತರು, ಬಲೆ ಬೀಸಿದಾಗ ಸಿಕ್ಕಿತು, ನೀರು ಕುಡಿದು ಬಿಟ್ಟಿತ್ತು, ಗುರ್ತೇ ಇರಲಿಲ್ಲ" ಎಂದು ಹೇಳಿಸುತ್ತಾರೆ. ಒಂದು ಕಡೆ ನೀಲಾಂಬಿಕೆಯವರ ಮೂಲಕ ಬಸವರಸರು ಹುಟ್ಟು ಸಾವುಗಳನ್ನು ಮೆಟ್ಟಿದವರು" ಎಂದು ಹೇಳಿಸುತ್ತಾ ಮತ್ತೊಂದೆಡೆ ಅದೇ ನೀಲಾಂಬಿಕೆಯವರ ಮೂಲಕ ಬಿಜ್ಜಳನೊಂದಿಗೆ ಮಾತನಾಡುತ್ತಾ "ನೀವಲ್ಲದೆ ಯಾರು ಚಕ್ರವರ್ತಿಗಳಾಗಿದ್ದರೂ ಬಸವರಸರ ಕಥೆ ನೀರಿನಲ್ಲಿಯೇ ಮುಗಿಯುತ್ತಿತ್ತು" ಎಂದು ದ್ವಂದ್ವವಾಗಿ ಹೇಳಿಸಿದ್ದಾರೆ. ಚೌಡಯ್ಯನವರು ಹೇಳುವಂತೆ ಬಸವಣ್ಣನವರ "ಕಾಯ ನೀರ ಪಾಲಾಗಿತ್ತು" ಹಾಗೂ ನೀಲಾಂಬಿಕೆಯವರು ಹೇಳುವ "ಯಾರು ಚಕ್ರವರ್ತಿಗಳಾಗಿದ್ದರು ಬಸವರಸರ ಕಥೆ ನೀರಿನಲ್ಲಿಯೇ ಮುಗಿಯುತ್ತಿತ್ತು" ಎಂಬ ಮಾತುಗಳ ದ್ವಂದ್ವ ಹಾಗೂ ವಿರೋಧಾಭಾಸಗಳನ್ನು ಲೇಖಕರು ಸ್ಪಷ್ಟೀಕರಿಸಬೇಕು. ಬಸವಣ್ಣನವರ ಐಕ್ಯವನ್ನು ಕುರಿತು ಲಿಂಗೈಕ್ಯರಾದರೆಂದು ಹೇಳುವ ಇನ್ನುಳಿದ ಅನೇಕ

ಶರಣರ ಶರಣೆಯರ ವಚನಗಳಿದ್ದಾಗ್ಯೂ ಅವು ಸ್ಪಷ್ಟವಿಲ್ಲವೆಂದು ಹೇಳುತ್ತಾ ಬಸವಣ್ಣನವರು ಸಹಜ ಐಕ್ಯವನ್ನು ಏಕೆ ಸಂದೇಹಿಸುತ್ತಾರೆಂಬುದನ್ನು ಲೇಖಕರು ಸ್ಪಷ್ಟೀಕರಿಸಬೇಕು.

6. ಬಿಜ್ಜಳನ ಕೊಲೆ ಕುರಿತು 19 ಮತ್ತು 20 ನೇ ಶತಮಾನಗಳಲ್ಲಿ ಬಸವಣ್ಣನವರ ವ್ಯಕ್ತಿತ್ವಕ್ಕೆ ತೇಜೋವಧೆ ಮಾಡಿಸಲೋಸುಗ ಕೆಲವು ಪುರೋಹಿತಶಾಹಿ ಹಿತಾಸಕ್ತಿಗಳು, ಬಸವಣ್ಣನವರು ಬಿಜ್ಜಳನ ಕೊಲೆ ಮಾಡಿಸಿದರು ಎಂಬ ಕೃತ್ರಿಮ ಹಾಗೂ ಪ್ರಕ್ಷಿಪ್ತ ಅಂಶಗಳನ್ನು, ಕೃತಿಗಳನ್ನು ಸಂಸ್ಕೃತ ಬಸವ ಪುರಾಣ, ಬಿಜ್ಜಳರಾಯಚರಿತೆ, ಭೀಮ ಕವಿಯ ಬಸವ ಪುರಾಣ, ಶೂನ್ಯ ಸಂಪಾದನೆಗಳು ಮುಂತಾದಗ್ರಂಥಗಳು ಹಾಗೂ ವಚನ ಶಾಸ್ತ್ರದ ಪರಿಕರಗಳಲ್ಲಿ ಇವುಗಳನ್ನು ಕೂಡಿಸಿದರು ಹಾಗೂ ರಚಿಸಿದರು. ಇವುಗಳನ್ನು ಕುರಿತು ಆಳವಾದ ಚಿಂತನೆ ಹಾಗೂ ನೈಜವಾದ ಸಂಶೋಧನೆ ನಡೆಯಬೇಕಾಗಿದೆ. ಈ ಕೃತ್ರಿಮ ಆಕರಗಳ ನಂಬಿಗೆಯನ್ನು ವಾದಕ್ಕಾಗಿ ಆಧಾರವಾಗಿಟ್ಟುಕೊಂಡರೂ ಇವುಗಳಲ್ಲಿ ಬಿಜ್ಜಳನ ಕೊಲೆ, ಜಗದೇವ–ಮಲ್ಲಬೊಮ್ಮರಿಂದ ಆಗಿದೆಯೆಂದು ಉಲ್ಲೇಖವಿದೆ. ಈ ಲೇಖಕರು ಸಾಂಕೇತಿಕ ಪಾತ್ರಗಳ ಮೂಲಕ ಹೇಳಿಸುವಂತೆ, ಬಹುರೂಪಿ ಚೌಡಯ್ಯ ಹಾಗೂ ಕಲಿಕೇತಯ್ಯಗಳಲ್ಲ. ಲೇಖಕರು ಈ ಕೃತಿಯಲ್ಲಿ ಮಡಿವಾಳ ಮಾಚಿ ತಂದೆ, ಹಡಪದಪ್ಪಣ್ಣ ಮುಂತಾದ ಶರಣರನ್ನು ಕೊಲೆಯ ಪ್ರೇರಕರೆಂದು ಚಿತ್ರಿಸಿದ್ದಾರೆ. ಹೀಗೆ ಬಿಜ್ಜಳನ ಕೊಲೆ ಹಾಗೂ ಕೊಲೆ ಪ್ರೇರಕ ಶಕ್ತಿಗಳನ್ನಾಗಿ "ಹಿಂದುಳಿದವರ ಮೂಲದಿಂದ ಬಂದ ಶರಣರನ್ನು ಹೊಣೆಗಾರರನ್ನಾಗಿ ಮಾಡಿದ್ದಾರೆ. ಇದು ಐತಿಹಾಸಿಕ ಸತ್ಯವಲ್ಲ. ಇದನ್ನು ಕುರಿತು ಸಮರ್ಥಿಸಿ ವಿವರಣೆ ನೀಡಬೇಕು. 1172 ರ ಹರಸೂರ ಶಿಲಾಶಾಸನದಲ್ಲಿ ಬಿಜ್ಜಳನ ತಮ್ಮನಾದ ಕರ್ಣದೇವನ ಕೊಲೆಯು ಪ್ರಸ್ತಾಪ ಬರುತ್ತದೆ. 1168 ರ ಶಿಲಾಶಾಸನಗಳಲ್ಲಿ ಬಿಜ್ಜಳನು ತನ್ನ ಮಗನಾದ ಸೋವಿದೇವನಿಗೆ ಆಡಳಿತದ ಅಧಿಕಾರವನ್ನು (Power of Civil Administration) ನೀಡಿದ ಉಲ್ಲೇಖವಿದೆ. ರಾಜಕೀಯ ಒಳತೋಟಿಯಲ್ಲಿ ಸೋವಿದೇವ ಹಾಗೂ ಕರ್ಣದೇವನ ನಡುವೆ ಅಧಿಕಾರದ ಒಳಗುದ್ದಾಟವಿರಬೇಕು. ಆದ್ದರಿಂದಲೇ ಬಿಜ್ಜಳನು ತನ್ನ ಮಗನಿಗೆ ಕೇವಲ ಆಡಳಿತಾಧಿಕಾರವನ್ನು ಮಾತ್ರ ನೀಡಿ, ಸಂಪೂರ್ಣವಾದ ಉತ್ತರಾಧಿಕಾರವನ್ನು ನೀಡಿರಲಿಕ್ಕಿಲ್ಲ. ಈ ಮಾತನ್ನು 1168 ರ ಶಾಸನವು ಸಮರ್ಥಿಸುತ್ತದೆ. ಮುಂದೆ ಬಿಜ್ಜಳನು ಒಂದೆರಡು ವರ್ಷಗಳಲ್ಲಿ ನಿಧನವಾಗಿರಬೇಕು. ನಂತರ ಕಸಪಯ್ಯನವರ ಬೆಂಬಲದಿಂದ ಕರ್ಣದೇವ ಉತ್ತರಾಧಿಯಾಗಿರಲಿಕ್ಕೇ ಸಾಕು. ಆಗ ಕರ್ಣದೇವನು ಸಿದ್ಧರಾಮೇಶ್ವರರ ಆಶೀರ್ವಾದವನ್ನು ಕೋರುತ್ತಾನೆ. ಆಗ ಬಸವಣ್ಣನವರು ಬದುಕಿ ಉಳಿದಿದ್ದಾರೆ, ಬಸವಣ್ಣನವರ ಆಶೀರ್ವಾದವನ್ನೇ ಕೋರುತ್ತಿದ್ದ. ಹೀಗಾಗಿ ಬಸವಣ್ಣನವರು ಕರ್ಣದೇವನ ಕಾಲಕ್ಕೆ ಮುಂಚೆಯೇ ಐಕ್ಯವಾಗಿರಲು ಸಾಕು. ಕರ್ಣದೇವ ಉತ್ತರಾಧಿಕಾರಿಯಾಗಿ ಬಂದ ನಂತರ, ಸೋವಿದೇವನು ತನ್ನ ಆಡಳಿತವನ್ನು ತಾತ್ಕಾಲಿಕವಾಗಿ ಮಾಂಡಲೀಕನಾಗಿ, ಮಂಗಳವಾಡಕ್ಕೆ ಬದಲಾಯಿಸಿರಬೇಕು. ಹರಸೂರು ಶಿಲಾಶಾಸನ ಪ್ರಕಾರ 1172 ರಲ್ಲಿ ಸೋವಿದೇವನು ತನ್ನ ಮಾಧವ ದಂಡನಾಯಕನಿಂದ ಕರ್ಣದೇವನನ್ನು ಕೊಲೆ ಮಾಡಿಸಿ, ಕಲ್ಯಾಣದ ಉತ್ತರಾಧಿಕಾರಿಯಾದನು. ಕಲ್ಯಾಣದ ರಕ್ತಕ್ರಾಂತಿ ಬಿಜ್ಜಳನ ಕಾಲಕ್ಕೆ ನಡೆಯದೆ ಸೋವಿದೇವನ ಕಾಲಕ್ಕೆ ನಡೆದಿರಬೇಕು. ಏಕೆಂದರೆ ಕ್ರಾಂತಿಯ ನಂತರ ಶರಣರನ್ನು ಬಿಜ್ಜಳನ ಸೈನ್ಯ ಬೆನ್ನಟ್ಟದೆ ಸೋವಿದೇವನ ಸೈನ್ಯ ಬೆನ್ನಟ್ಟಿತು. ಕ್ರಾಂತಿಯ ನಂತರ ಶರಣರು ಸೊಲ್ಲಾಪುರ ಹಾಗೂ ಉಳುವಿಗೆ ಹೋದರು. ಒಂದು ವೇಳೆ ಆಗ ಬಸವಣ್ಣನವರು ಜೀವಂತವಾಗಿದ್ದಿದ್ದರೆ ಉಳುವಿ ಹಾಗೂ ಸೊಲ್ಲಾಪುರಕ್ಕೆ ಹೋಗದೆ ಕೂಡಲ ಸಂಗಮದ ಕಡೆಗೆ ಹೋಗುತ್ತಿದ್ದರು. ಇದರ ಐತಿಹ್ಯವೇನೆಂದರೆ ಆಗ ಬಸವಣ್ಣನವರು ಬದುಕಿರಲಿಲ್ಲ. ಹೀಗಿರುವಾಗ ಬಸವಣ್ಣನವರು ಬಿಜ್ಜಳನನ್ನು ಕೊಲ್ಲಿಸಿದ ಎಂಬ ಆಕರಗಳು ಹಾಗೂ ಕಾವ್ಯದ ಉಕ್ತಿಗಳು ತರ್ಕದ ಒರೆಗಲ್ಲಿಗೆ ನಿಲ್ಲುವುದಿಲ್ಲ. 1168 ಹಾಗೂ 1172 ರ ಶಾಸನಗಳೇ ಸರಿಯಾದ ಸಾಕ್ಷಿಗಳಾಗಿ ನಿಲ್ಲುತ್ತವೆ. ಇದನ್ನು ವೈಚಾರಿಕತೆ, ಇತಿಹಾಸ ಹಾಗೂ ಅನುಭವದ ಮೂಲಕ ಚಿಂತನೆ ಮಾಡಿ ನಿರ್ಧರಿಸಬೇಕಾಗಿದೆ. ಈ ಕುರಿತು ಲೇಖಕರು ಹಾಗೂ ಈ ಕೃತಿಯನ್ನು ಸಮರ್ಥಿಸುವವರು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಲಿ.

ಬಿಜ್ಜಳನು ತನ್ನ ಕೊಲೆಯಾದ ಅಂತಿಮಕ್ಷಣದಲ್ಲಿ "ನೀಲಾ ನಿನ್ನ ಗಂಡ ಕೊಲೆಗಾರ, ನನ್ನನ್ನು ಕೊಲ್ಲಿಸಿದ" ಎಂದು ಉದ್ಗಾರಗೈಯ್ಯುತ್ತಾನೆ. ಇದಕ್ಕೆ ಪ್ರತಿಯಾಗಿ ಗರ್ಭನಾಟಕದ ಶರಣಪಾತ್ರಗಳ ಮೂಲಕ ಬಸವಣ್ಣನವರು ಕೊಲೆ ಮಾಡಿಸಲಿಲ್ಲವೆಂಬುದನ್ನು ಲೇಖಕರು ಏಕೆ ಹೇಳಿಸಲಿಲ್ಲ ? ಈ ಸಂದೇಹವನ್ನು ಏಕೆ ಉಳಿಸಿಕೊಂಡರು ಎಂಬುದನ್ನು ಸ್ಪಷ್ಟೀಕರಿಸಲಿ.

ಕಳಬೇಡ, ಕೊಲಬೇಡ ಎಂಬ ಬಸವಣ್ಣನು, ಸಕಲ ಜೀವರಾಶಿಗೆ ಲೇಸನೇ ಬಯಸುವ, ಬಸವ ಸಿದ್ಧಾಂತದ ಶರಣರು ಹಿಂಸೆಗೆ ಕೊಲೆಗೆ, ಕೈಹಾಕುವವರಲ್ಲ. ಅಂತಹ ಹಿಂಸೆಯ ಪ್ರತಿಪಾದನೆಯನ್ನು (Advocacy of Crime) ಬಸವಾದಿ ಶರಣರ ಮೂಲಕ ಇವರು ಮಾಡಿಸಿದ್ದಾರೆ. ಇದು ಒಪ್ಪಿತವಾಗುವ ವಿಷಯವಲ್ಲ. ಇದು ನಿಜವಾದ ವೈಚಾರಿಕತೆಯ ತರ್ಕಕ್ಕೆ ನಿಲ್ಲುವುದಿಲ್ಲ.

ವಿಶ್ವದ ಸಾಹಿತ್ಯ ರಂಗಮಂಚದಲ್ಲಿ 19–20 ನೇ ಶತಮಾನದಲ್ಲಿ ಆದರ್ಶವಾದ (Idealism) ಕಮ್ಯೂನಿಜಂ, ಸೋಷಿಯಾಲಿಜಂ, ವಾಸ್ತವವಾದ (Realism) ಅಸ್ತಿತ್ವವಾದ (Existentialism) ವಿಚಾರವಾದ (Rationalism) ಮುಂತಾದ

ವಾದಗಳು, ಈ ವಾದಗಳನ್ನು ಸಮರ್ಥಿಸುವ ಸಾಹಿತ್ಯಗಳು ನಿರ್ಮಾಣವಾದವು. ಈ ಪರಂಪರೆಯಲ್ಲಿ ಕಮ್ಯೂನಿಷ್ಟರಲ್ಲಿ ಹಾಗೂ ಬಂಡಾಯಗಾರರಲ್ಲಿ ಎರಡು ವರ್ಗದ ಲೇಖಕರು ಕಂಡುಬರುತ್ತಾರೆ, ಒಂದು ವರ್ಗದವರು "ನೈತಿಕ ಮೌಲ್ಯ ಹಾಗೂ ವೈಚಾರಿಕತೆಯ ತಳಹದಿಯ ಮೇಲೆ" ಸಮಾನತೆ ಹಾಗೂ ಸಮಾಜವಾದವನ್ನು ತರಬಯಸುತ್ತಾರೆ.

ಇನ್ನೊಂದು ವರ್ಗದವರು, ಹಣ, ಹೆಂಡ, ಹೆಣ್ಣು ಮತ್ತು ಹಿಂಸೆಯನ್ನು (Advocacy of Wealth, Wine, Woman and Crime) ಪ್ರತಿಪಾದಿಸುತ್ತಾರೆ. ಅಭಿಪ್ರಾಯ ಸ್ವಾತಂತ್ರ್ಯ, ವೈಚಾರಿಕತೆ, ಸೃಜನಶೀಲತೆಯ ಮುಖವಾಡದಲ್ಲಿ ಇವುಗಳನ್ನು ಪ್ರತಿಪಾದಿಸುತ್ತಾರೆ. ಈ ಲೇಖಕರು ಹಾಗೂ ಈ ಸಮರ್ಥಕರು ನಮ್ಮ ಮೇಲಿನ ಎಲ್ಲಾ ಸಂದೇಹಗಳಿಗೆ ಸರಿಯಾದ ಸ್ಪಷ್ಟೀಕರಣ ಹಾಗೂ ಸಮಾಧಾನ ನೀಡದಿದ್ದರೆ ಇವರನ್ನು ಮುಕ್ತ ಲೈಂಗಿಕತೆ ಹಾಗೂ ಹಿಂಸೆಯ [Free Sex & Crime] ವರ್ಗಕ್ಕೆ ಸೇರಿಸಬೇಕಾಗುತ್ತದೆ ಎಂಬುದನ್ನು ಇವರ ಗಮನಕ್ಕೆ ತರಬಯಸುತ್ತೇನೆ.

ಲೇಖಕರು ತಮ್ಮ ಕೃತಿಯಲ್ಲಿ ಭೂತ–ವರ್ತಮಾನ–ಭವಿಷ್ಯವನ್ನು ಹಾಗೂ ಚಾರಿತ್ರಿಕ, ಪೌರಾಣಿಕ, ವೈಚಾರಿಕ, ಕಾಲ್ಪನಿಕ, ವಿಷಯಗಳಲ್ಲಿ ಸಮನ್ವಯ ಹಾಗೂ ಸಮನ್ಯಾಯಗೊಳಿಸಿಲ್ಲ; ವಿರೋಧಿ ಪಾತ್ರಗಳಿಂದ ಹೇಳಿಸಿದ ವಿಷಯಕ್ಕೆ ಸಂವಾದಿಯಾಗಿ 'ಪರ' ಪಾತ್ರಗಳ ಮೂಲಕ ನೈಜಾಂಶಗಳನ್ನು ಹೇಳಿಸುವ ಸಾಮಾಜಿಕ ಹೊಣೆಗಾರಿಕೆಯನ್ನು ಹಾಗೂ ವೈಚಾರಿಕ ಹೊಣೆಗಾರಿಕೆಯನ್ನು ಉದ್ದೇಶಪೂರ್ವಕವಾಗಿ ಕೈಬಿಟ್ಟಿದ್ದಾರೆಂದು ಹೇಳದೆ ವಿಧಿಯಿಲ್ಲ. ಇಂತಹ ಕೃತಿಯನ್ನು ಕುರಿತು ಡಾ॥ ಜಿ. ಎಸ್. ಎಸ್. ರವರು ಬಸವಣ್ಣನವರನ್ನು ಕುರಿತು ಇತ್ತೀಚಿನ ನಾಟಕಗಳಲ್ಲಿ ಇದು ಅತ್ಯುತ್ತಮ ಕೃತಿಯೆಂದು, ಡಾ॥ ಎಂ. ಚಿದಾನಂದಮೂರ್ತಿಯವರು "ಇದರಲ್ಲಿ ಬಸವಣ್ಣನವರಿಗೆ ಅಪಚಾರವಾಗಿಲ್ಲವೆಂದು, ಹೇಳಿಕೆ ನೀಡಿದ್ದಾರೆ. ಹೀಗೆ ಹೇಳಿಕೆ ನೀಡುವಂತಹ ಜನ, ನಮ್ಮ ಮೇಲಿನ ಸಂದೇಹಗಳನ್ನಾಧರಿಸಿ ವಿವರವಾದ ಸ್ಪಷ್ಟೀಕರಣ ನೀಡಬೇಕಾಗಿ ವಿನಂತಿ.

4) ಮಹಾಚೈತ್ರವನ್ನು ವಿರೋಧಿಸುವವರು ಬರಹದ ಮೂಲಕ, ಚಿಂತನವೇದಿಕೆಗೆ ಆಹ್ವಾನಿಸುವ ಮೂಲಕ, ವಿಶ್ವವಿದ್ಯಾಲಯಗಳ ಬಾಗಿಲನ್ನು ತಟ್ಟುವುದರ ಮೂಲಕ, ನ್ಯಾಯಾಲಯದ ಹೆಬ್ಬಾಗಿಲನ್ನು ಏರುವ ಮೂಲಕ ವಿಫಲವಾದ ಮೇಲೆ ಅಂತಿಮವಾಗಿ ಆಮರಣ ಪರ್ಯಂತ ಅನ್ನ ಸತ್ಯಾಗ್ರಹಕ್ಕೆ ಮೊರೆ ಹೋಗಬೇಕಾಯಿತು. ಈ ವಿಚಾರವಾದಿಗಳು ಇಂತಹವರನ್ನು ಕುರಿತು ದುಷ್ಟಶಕ್ತಿಗಳು, ತಲೆಯಿಲ್ಲದವರು, ಮೂಲಭೂತವಾದಿಗಳು, ಫಾಸಿಷ್ಟರೆಂದು ಕರೆಯುತ್ತಿದ್ದಾರೆ. ಹೀಗೆ ಕರೆಯುವುದು

ವೈಚಾರಿಕತೆಯೇ ? ಎಂಬುದನ್ನು ವಿವರಿಸಲಿ.

5] ಈ ವಿಷಯವನ್ನು ಕುರಿತು ನಾನು "ಮಹಾಚೈತ್ರ" ದವರು ಉತ್ತರಿಸುವರೇ ? ಎಂಬ ನನ್ನ ಲೇಖನವನ್ನು ಈ ವರ್ಷದ ಜನವರಿ ತಿಂಗಳಲ್ಲಿ ಲೇಖಕರಾದಿಯಾಗಿ ಸಾಹಿತಿಗಳು, ಪತ್ರಿಕೆಗಳು, ಮಠಾಧೀಶರು, ರಾಜಕಾರಣಿಗಳು ಹಾಗೂ ಶಿಕ್ಷಣಾಧಿಕಾರಿಗಳಿಗೆ 30ರಿಂದ 40 ಜನರಿಗೆ ಕಳಿಸಲಾಗಿತ್ತು. ಈವರೆಗೂ ಇವರಾರಿಂದಲೂ ಉತ್ತರ ಬಂದಿಲ್ಲವೆಂಬುದನ್ನು ಹೇಳಬಯಸುತ್ತೇನೆ. ಈಗಲಾದರೂ ಮಹಾಚೈತ್ರವನ್ನು ಸಮರ್ಥಿಸುವವರು ಒಪ್ಪಿ ಚಿಂತನಾವೇದಿಕೆಗೆ ಬರುವದಾದಲ್ಲಿ **ದಾವಣಗೆರೆಯಲ್ಲಿ** ಏರ್ಪಡಿಸುತ್ತೇವೆ. ಒಂದು ವೇಳೆ ಲೇಖಕರಾದಿಯಾಗಿ ಮಹಾಚೈತ್ರವನ್ನು ಸಮರ್ಥಿಸುವವರು ಬರಹದ ಮೂಲಕವಾಗಲಿ ಇಲ್ಲವೆ ಚಿಂತನಾವೇದಿಕೆಗೆ ಬರದಾಗಲಿ ಸಮರ್ಥಿಸಿಕೊಳ್ಳದೇ ಹೋದಲ್ಲಿ ಇವರ ವಾದವನ್ನು ನಾವು ಒಪ್ಪುವದಿಲ್ಲ ಹಾಗೂ ಸರ್ವರೀತಿಯಿಂದ ಪ್ರತಿಭಟಿಸುತ್ತೇವೆಂಬುದನ್ನು ಈ ಮೂಲಕ ದಾಖಲಿಸುತ್ತಿದ್ದೇವೆ.

ರಾಣೇಬೆನ್ನೂರು
ದಿನಾಂಕ : 20–3–95

ಅ. ಪ್ರೊ॥ ವಿ. ವಿ. ಸಂಗಮದ
ಆದಿಶಕ್ತಿ ಕಾಲೋನಿ
ರಾಣೇಬೆನ್ನೂರು–581115

ಶರಣ ಕಾರ್ಯಕರ್ತರಿಗೆ ಬಿರುದು

'ಗಣಾಚಾರ' ಒಂದು ಶ್ರೇಷ್ಠವಾದ ಆಚಾರ. ಒಳ್ಳೆಯ ಮೌಲ್ಯಗಳನ್ನು ತಾನು ವೈಯಕ್ತಿಕವಾಗಿ ಅಳವಡಿಸಿಕೊಂಡರೆ ಸಾಲದು, ಅವುಗಳನ್ನು ಸಂರಕ್ಷಿಸುವುದೂ ಅಷ್ಟೇ ಅತ್ಯಗತ್ಯ. ಆದ್ದರಿಂದಲೇ ಬಸವಾದಿ ಪ್ರಮಥರು ಸೇವಾಭಾವನೆಯನ್ನು ಒತ್ತಿ ಒತ್ತಿ ಹೇಳುವ ಭೃತ್ಯಾಚಾರದೊಡನೆ, ಧರ್ಮರಕ್ಷಣೆಗಾಗಿ ಗಣಾಚಾರವನ್ನೂ ಒತ್ತಿ ಒತ್ತಿ ಹೇಳಿದರು. ಗಣಾಚಾರ ಎಂದರೆ ಕ್ರೌರ್ಯವಲ್ಲ, ಶೌರ್ಯ; ಅಹಿಂಸಾತ್ಮಕವಾಗಿ ಆತ್ಮರಕ್ಷಣೆಗಾಗಿ ಹೋರಾಡುವುದು. ಗಣಾಚಾರದ ಉದ್ದೇಶ ಆತ್ಮರಕ್ಷಣೆಯೇ ವಿನಾ ಆಕ್ರಮಣವಲ್ಲ.

ಮಹಾಚೈತ್ರ ಎಂಬ ಕುಪತ್ಯಪುಸ್ತಕದ ರದ್ದತಿಗಾಗಿ ಅನೇಕ ಶರಣ ಕಾರ್ಯಕರ್ತರು ತುಂಬಾ ಶ್ರಮಿಸಿದ್ದಾರೆ. ಪತ್ರಿಕಾ ಸಮೂಹವನ್ನು ಸಾಧನವಾಗಿ, ಬೃಹತ್ ಸಾಹಿತಿಗಳ ಕೂಟವನ್ನೇ ಅಂಗರಕ್ಷಕ ಪಡೆಯನ್ನಾಗಿ ಹೊಂದಿರುವ ಲೇಖಕ ಶಿವಪ್ರಕಾಶ್ ಮತ್ತು ಮಹಾಚೈತ್ರಗಳ ವಿರುದ್ಧದ ಚಳುವಳಿ ಸಾಮಾನ್ಯವಲ್ಲ. ಏಕೆಂದರೆ ಶರಣಬಂಧುಗಳಿಗೆ ಬೆರಳಮೇಲೆಣಿಸುವಷ್ಟು ಪತ್ರಿಕೆಗಳನ್ನು ಬಿಟ್ಟರೆ ದೊಡ್ಡಪತ್ರಿಕೆಗಳ ಬೆಂಬಲವೇ ಇರಲಿಲ್ಲ. ಶರಣ ಬಂಧುಗಳ ಧರ್ಮಗುರು ನಿಷ್ಠೆ, ಸಮರ್ಪಣ ಮನೋಭಾವ, ಶ್ರದ್ಧೆ ಕಳಕಳಿಗಳೇ ಹೋರಾಟದ ಸಚೇತಕ ಶಕ್ತಿಗಳು. ಬಸವಾದಿ ಪ್ರಮಥರ ನಿಂದೆಯನ್ನು

ಕಂಡೂ, ಕೇಳಿ, ಮೌನವಾಗಿ ರೋದಿಸುತ್ತಲೇ ಇರುವ ನಿಸ್ಸಹಾಯಕ ಪರಿಸ್ಥಿತಿಯೇ ಶತಃಸಿದ್ಧವೇನೋ ಎನ್ನುವಾಗ ಕೆಲವು ಪೂಜ್ಯ ಮಠಾಧೀಶರು ಮತ್ತು ಶರಣರು ಆಮರಣ ಉಪವಾಸ ಸತ್ಯಾಗ್ರಹ ಕೈಗೊಂಡುದು, ರಾಸ್ತಾ ರೋಕೋ, ರೇಲ್ ರೋಕೋಗಳನ್ನು ತೀವ್ರವಾಗಿ ಮತ್ತು ನಿರಂತರವಾಗಿ ಮಾಡಿದುದು ಸರ್ಕಾರದ ನಿದ್ರಾಭಂಗಕ್ಕೆ ಕಾರಣವಾಯಿತು. ಸರ್ಕಾರದ ನೇತಾರರು ಕುಂಭಕರ್ಣ ನಿದ್ರೆಯಿಂದ ಏಳಲು ನೆರವಾಯಿತು. ಆದ್ದರಿಂದ ಈ ದಿಶೆಯಲ್ಲಿ ಚಳುವಳಿಗಾರರ ನಿಷ್ಠೆ ಮೆಚ್ಚುವಂತ ಹುದು. ನಿಷ್ಠಾವಂತ ಕಾರ್ಯಕರ್ತರಿಗೆ ಏನಾದರೂ ಬಿರುದು ಕೊಟ್ಟು ಗೌರವಿಸುವು-ದಾದಲ್ಲಿ ಹೀಗೆ ಕೊಡಬಹುದು.

೧. **ವೀರ ಗಣಾಚಾರಿ :** ವೈಯಕ್ತಿಕವಾಗಿ ಚಳುವಳಿಯಲ್ಲಿ ಪರಿಶ್ರಮಪಟ್ಟ ಶರಣ ಕಾರ್ಯಕರ್ತ/ಕಾರ್ಯಕರ್ತೆ.

೨. **ಗಣವೀರ :** ತನ್ನೊಡನೆ ಇನ್ನಿತರ ಅನೇಕರನ್ನು ಪ್ರೇರೇಪಿಸಿ, ಸಮುದಾಯ ವನ್ನು ತನ್ನೊಡನೆ ಕರೆದುಕೊಂಡು ಚಳುವಳಿ ಮಾಡಿದ ಶರಣ/ಶರಣೆ.

೩. **ಶರಣ ವೀರ :** ಬೃಹತ್ ಪ್ರಮಾಣದಲ್ಲಿ ಸಂಘಟನಾ ಸಾಮರ್ಥ್ಯ ಪ್ರದರ್ಶಿಸಿ, ದಿಟ್ಟತನದಿಂದ ಚಳುವಳಿಯನ್ನು ಕ್ರೋಢೀಕರಿಸಿದವರು.

ಸರಿಯಾಗಿ ವ್ಯಕ್ತಿಗಳ ಪರಿಶ್ರಮ ಗುರುತಿಸಿ, ಬಿರುದು ಉಳ್ಳ ಮಾನ್ಯತಾ ಪತ್ರ ಕೊಡಬೇಕೆಂದು, ಈ ಉದಾತ್ತ ಬಿರುದುಗಳು ಮೌಲ್ಯಹೀನವಾಗದಂತೆ ನೋಡಿಕೊಳ್ಳಬೇಕೆಂದು ಸೂಚಿಸುವೆವು.

ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ
ಕಾರ್ಯಾಧ್ಯಕ್ಷೆ, ರಾಷ್ಟ್ರೀಯ ಬಸವ ದಳ.

ವಸತಿ ಮತ್ತು ಪ್ರಸಾದದ ವ್ಯವಸ್ಥೆ

ಬಸವ ಮಹಾಮನೆ ಸಭಾಮಂಟಪ : ಸಮ್ಮೇಳನ ನಡೆಯುವ ಸ್ಥಳ ಮಲ್ಲೇಶ್ವರಂ [ಪಶ್ಚಿಮ] ಬಡಾವಣೆಯ ಮಹಾನಗರ ಪಾಲಿಕೆಯ ಕ್ರೀಡಾಂಗಣ ಕೆ. ಸಿ. ಜನರಲ್ ಆಸ್ಪತ್ರೆ, ಮಲ್ಲೇಶ್ವರಂ ಪೋಲೀಸ್ ಠಾಣೆಯ ಎದುರಿನಲ್ಲಿ ಮೈದಾನವಿದೆ.

ಶೌಚ ವ್ಯವಸ್ಥೆ : ಕೇವಲ ಎರಡು ಶೌಚಾಲಯ, ಸ್ನಾನದ ಕೋಣೆ ಕ್ರೀಡಾಂಗಣದ ಬಯಲು ರಂಗಮಂದಿರದಲ್ಲಿವೆ, ಕಾರ್ಯಕ್ರಮ ನಡೆದ ಸಮಯದಲ್ಲಿ ಅಗತ್ಯವೆನಿಸಿ-ದಾಗ ಬಳಸಲು ಸಾಧ್ಯವಿದೆ.

ಸುಲಭ ಶೌಚಾಲಯ : ಅತ್ಯಂತ ಅಚ್ಚುಕಟ್ಟಾದ, "ಸುಲಭ ಶೌಚಾಲಯ" ವ್ಯವಸ್ಥೆಯ ಶೌಚಗೃಹ–ಸ್ನಾನ ಗೃಹಗಳ ನಿಗದಿತ ಅಲ್ಪ ಶುಲ್ಕದೊಡನೆ ಕ್ರೀಡಾಂಗಣದ ಅತ್ಯಂತ ಸಮೀಪದಲ್ಲಿ ದೊರೆಯುತ್ತವೆ, ಮೈದಾನದಿಂದ ಕೇವಲ ಇಪ್ಪತ್ತು ಹೆಜ್ಜೆಯ ದೂರದಲ್ಲಿವೆ.

ವಸತಿ : ಮಲ್ಲೇಶ್ವರಂ ಕ್ರೀಡಾಂಗಣಕ್ಕೆ ಅತ್ಯಂತ ಹತ್ತಿರದಲ್ಲಿರುವ ಶ್ರೀರಾಮ ಕಲ್ಯಾಣ ಮಂದಿರ, ಸೀತಾ ಸಮುದಾಯ ಭವನಗಳು, ತೆಂಗಿನ ಮರದ ರಸ್ತೆ, 7 ನೆಯ ಕ್ರಾಸ್, ಗೀತಾಂಜಲಿ ಟಾಕೀಸ್, ಬೆಂಗಳೂರು–560006, ಇಲ್ಲಿ ಇವೆ. ಇಲ್ಲಿ ಶರಣ ಬಂಧುಗಳಿಗೆ ವಸತಿ–ಊಟಗಳ ವ್ಯವಸ್ಥೆ ಮಾಡಲಾಗಿದೆ.

ಪ್ರಸಾದ : ಸಮ್ಮೇಳನ ಸ್ಥಳಕ್ಕೆ ತೀರಾ ಹತ್ತಿರದಲ್ಲಿ ಈ ಕಲ್ಯಾಣ ಮಂಟಪಗಳು ಇರುವುದರಿಂದ ಅಡಿಗೆಯ ಸಿದ್ಧತೆ ಮತ್ತು ಪ್ರಸಾದ ವಿತರಣೆಯನ್ನು ಈ ಕಲ್ಯಾಣ ಮಂಟಪಗಳಲ್ಲೇ ಮಾಡಲಾಗಿದೆ.

ಬಸವ ಗಂಗೋತ್ರಿ : ವಿಶ್ವಕಲ್ಯಾಣ ಮಿಷನ್ ಒಡೆತನದ ಬಸವ ಗಂಗೋತ್ರಿಯು ಬೆಂಗಳೂರು–ಮೈಸೂರು ಹೆದ್ದಾರಿಯ ಮೇಲೆ 21 ನೇ ಕಿಲೋಮೀಟರ್ ಬಳಿ ಇದ್ದು, ರಾಮೋಹಳ್ಳಿ ಕ್ರಾಸ್ (ದೊಡ್ಡಆಲದ ಮರದ ಕ್ರಾಸ್) ಮತ್ತು ಕುಂಬಳಗೋಡು ಮಧ್ಯದಲ್ಲಿದೆ. ಇಲ್ಲಿ ಶ್ರೀ ಬಸವೇಶ್ವರ ಕಲ್ಯಾಣ ಮಂಟಪ ಮತ್ತು ಶ್ರೀ ರುದ್ರಾನಂದ ಕಲ್ಯಾಣ ಮಂಟಪಗಳು ಮತ್ತು ಸಾಕಷ್ಟು ಕೋಣೆಗಳು ಲಭ್ಯವಿರುವುದರಿಂದ ಮೈಸೂರು ಕಡೆಯಿಂದ, ನೀಲಗಿರಿ ಕಡೆಯಿಂದ ಸ್ವತಂತ್ರ ವಾಹನಗಳಲ್ಲಿ ಬರುವವರಿಗೆ ಇಲ್ಲಿಯೇ ವ್ಯವಸ್ಥೆ ಮಾಡಲಾಗುವುದು. ಬೆಂಗಳೂರಿನಲ್ಲಿ ನಿಗದಿ ಪಡಿಸಿರುವ ಕಲ್ಯಾಣ ಮಂದಿರಗಳು ಭರ್ತಿಯಾದ ಮೇಲೆ ಸ್ವತಂತ್ರ ವಾಹನ ಉಳ್ಳವರನ್ನು ಬಸವ–ಗಂಗೋತ್ರಿಗೆ ಕಳಿಸಲಾಗುವುದು.

ವಿ.ಸೂ :–ಉಪಾಹಾರ–ಊಟದ ವ್ಯವಸ್ಥೆ ಮಾತ್ರ ಸಮ್ಮೇಳನ ಮೈದಾನಕ್ಕೆ ಸಮೀಪ ವಿರುವ ಕಲ್ಯಾಣ ಮಂಟಪಗಳಲ್ಲಿ ಇರುವುದು. ಉಳಿದ ವಾಸ್ತವ್ಯ ಇರುವ ಕಡೆ ಸ್ನಾನ ಪೂಜೆ ಪೂರೈಸಿಕೊಂಡು ಸಮ್ಮೇಳನ ಸ್ಥಳಕ್ಕೆ ಬಂದ ಬಳಿಕ ಬೆಳಗಿನ ಉಪಾಹಾರ, ಮಧ್ಯಾಹ್ನ ರಾತ್ರಿಯ ಊಟಗಳು ಸಮ್ಮೇಳನ ನಡೆಯುವ ಸ್ಥಳದ ಹತ್ತಿರದಲ್ಲಿ ಇರು–ವುದು. ಯಾರಾದರೂ ಪ್ರತಿನಿಧಿಗಳು ವಿಶೇಷವಾದ ಲಾಡ್ಜಿಂಗ್ ವ್ಯವಸ್ಥೆಗೆ ಬೇಡಿಕೆ ಸಲ್ಲಿಸಿದರೆ, ಅವರ ಪರವಾಗಿ ಬುಕ್ಕಿಂಗ್ ಮಾಡಿಡಲು ನೆರವು ನೀಡಲಾಗುವುದು. ಆಸಕ್ತರು ಮೊದಲೇ ತಿಳಿಸಬೇಕು.

ಸಾಂಸ್ಕೃತಿಕ ಕಾರ್ಯಕ್ರಮ

ಶರಣ ಮೇಳದಲ್ಲಿ ಎಲ್ಲರೂ ಒಂದೇ ಕಡೆ ಉಳಿಯುವುದರಿಂದ ರಾತ್ರಿ ತಡವಾಗಿ ಸಾಂಸ್ಕೃತಿಕ ಕಾರ್ಯಕ್ರಮ ಇಟ್ಟರೂ ಜನರು ನೋಡಿ ಹರ್ಷಿಸುವರು. ಬೆಂಗಳೂರು ನಗರದ ಸ್ಥಳೀಯರು ರಾತ್ರಿ ದೂರದೂರದ ಸ್ಥಳಗಳಿಗೆ ಹೋಗುವ ಆತುರದಲ್ಲಿ ಇರುವರು. ಆದ್ದರಿಂದ ರಾತ್ರಿ ಊಟವಾದ ಮೇಲೆ ಬೀಡುಬಿಟ್ಟ ಸ್ಥಳಗಳಲ್ಲೇ ರಾಷ್ಟ್ರೀಯ ಬಸವ ದಳಗಳವರು ಬೇರೆ ಬೇರೆ ಸಾಂಸ್ಕೃತಿಕ ಚಟುವಟಿಕೆ, ಭಜನೆ, ವಚನ ಗಾಯನ ಮುಂತಾದುವನ್ನು ನಡೆಸಲು ಸಿದ್ಧತೆ ಮಾಡಿಕೊಳ್ಳಬಹುದು.

ಇತಿಹಾಸಕ್ಕೆ ಅಪಚಾರವೆಸಗಿದ, ಶರಣರಿಗೆ ಅನ್ಯಾಯ ಬಗೆದ ಎರಡು ಪ್ರಸಂಗ

ಚನ್ನಬಸವಣ್ಣ ಹಾದರಕ್ಕೆ ಹುಟ್ಟಿದನೆಂದು ಕಲ್ಬುರ್ಗಿ ಬರೆದರೆ ಬಸವಣ್ಣ ಬೀದಿ ಬಿಕಾರಿಗೆ ಹುಟ್ಟಿದ ಎಂದು ಶಿವಪ್ರಕಾಶ್ ಬರೆಯುತ್ತಾರೆ

ನಾನು ಹಿಮಾಲಯ ಸದೃಶತಪ್ಪ ಮಾಡಿದ್ದೇನೆ ಎಂದು ಒಪ್ಪಿಕೊಳ್ಳಲು 'ಮಹಾಚೈತ್ರ'ದ ಶಿವಪ್ರಕಾಶರೇನು ಮಹಾತ್ಮಗಾಂಧಿಯೆ ?

—ಡಾ|| ಪಾಟೀಲ ಪುಟ್ಟಪ್ಪ

ಜ್ಞಾನ ಪೀಠ ಪ್ರಶಸ್ತಿ ವಿಜೇತ ಡಾ|| ಯು. ಆರ್. ಅನಂತಮೂರ್ತಿಯವರನ್ನು ಕನ್ನಡ ಸಂಸ್ಕೃತಿ ಇಲಾಖೆ ಸತ್ಕರಿಸಿತು. ಆಗ ಅವರು ಬರಹಗಾರನ ಸ್ವಾತಂತ್ರ್ಯದ ಬಗೆಗೆ ಪ್ರಸ್ತಾಪಿಸಿದರು. ಕುವೆಂಪು, ಕಾರಂತ ಮತ್ತು ಗೋಕಾಕರು ಸಾಹಿತ್ಯ ಸಿದ್ಧಿಯ ಶಿಖರವನ್ನು ಏರುವುದಕ್ಕೆ ಅವರು, ಸಮಾಜದಲ್ಲಿದ್ದ ಅಂಧಶ್ರದ್ಧೆ, ಅಜ್ಞಾನ ಹಾಗೂ ಅನಾಗರೀಕ ವರ್ತನೆಗಳನ್ನು ಧೈರ್ಯದಿಂದ ಎದುರಿಸಿ ನಿಂತರೆನ್ನುವುದೇ ಕಾರಣವೆಂದು ಅವರು ಹೇಳಿದರು.

'ಆದರೆ, ಆ ಕಾಲಕ್ಕಿಂತ ಪರಿಸ್ಥಿತಿ ಈಗ ತುಂಬ ಭಿನ್ನವಾಗಿದೆ' ಎಂದು ವ್ಯಸನ ವ್ಯಕ್ತಪಡಿಸುತ್ತ 'ಬಸವ ತತ್ವಜ್ಞಾನವನ್ನು ಕುರಿತ' ಪಠ್ಯ ಪುಸ್ತಕ 'ಮಹಾಚೈತ್ರದ ವಿರುದ್ಧ ಎದ್ದಿರುವ ಕೂಗು ಕೋಲಾಹಲಗಳ ಕಡೆಗೆ ಸಭಿಕರ ಗಮನವನ್ನು ಸೆಳೆದರು. ಇನ್ನೊಂದು ಕಾಲದ ಒಬ್ಬ ವೈಚಾರಿಕನ ಬಗೆಗೆ, ಒಬ್ಬ ಲೇಖಕನು ಅರ್ಥ ಹಚ್ಚುವುದಕ್ಕೆ ಅವನನ್ನು ಬಿಟ್ಟು ತನ್ನ ತೀರ್ಮಾನಕ್ಕೆ ಬರಲು ಅವನಿಗೆ ಅವಕಾಶ ಕೊಡದೇ ಹೋದರೆ, ಸಾಹಿತ್ಯ ಎಂದು ಹೂ ಬಿಡುವುದಿಲ್ಲ' ಎಂದು ಅವರು ತಿಳಿಸಿದರು.

ಅವರು ಹೇಳುವಂತೆ ತನಗೆ ಅನಿಸಿದುದನ್ನು ಹೇಳುವ ಸ್ವಾತಂತ್ರ್ಯ ಬರಹಗಾರನಿಗೆ ಇರಬೇಕು. ಮನುಷ್ಯನಿಗೆ ತಿಳಿಯುವ, ವಿಚಾರ ಮಾಡುವ, ನಂಬುವ ಹಾಗೂ ತನಗೆ ತಿಳಿದುದನ್ನು ಮುಕ್ತ ರೀತಿಯಿಂದ ವ್ಯಕ್ತಪಡಿಸುವ ಸ್ವಾತಂತ್ರ್ಯ

ಗಳಿಂಗಿತಲೂ ಹೆಚ್ಚಿನದೆಂದು ವಿಲ್ಕಿನ್ ಹೇಳಿದ್ದಾನೆ. ತನಗೆ ಅಂಥ ಸ್ವಾತಂತ್ರ್ಯವೇ ಇರಲೆಂದು ಕೇಳಿದ್ದಾನೆ. ಆದರೆ, ಈ ಸ್ವಾತಂತ್ರ್ಯಕ್ಕೆ ಸತ್ಯದ, ಸಭ್ಯತೆಯ ಇತಿಮಿತಿಗಳಿವೆ. ಆ ದೃಷ್ಟಿಯಿಂದ ಅದು ಅನಿರ್ಬಂಧಿತವಾದುದಲ್ಲ. ತನ್ನ ಕಲ್ಪನೆಯಿಂದ ಸೃಷ್ಟಿಸಿದ ವ್ಯಕ್ತಿಗಳ ಬಗೆಗೆ ಲೇಖಕನು ಏನು ಬೇಕಾದರೂ ಹೇಳಿಕೊಂಡು ಹೋಗಬಹುದು. ಆದರೆ ಇದೇ ರಿಯಾಯಿತಿ ಅವನಿಗೆ ಐತಿಹಾಸಿಕ ವ್ಯಕ್ತಿಗಳನ್ನು ಕುರಿತು ಬರೆಯುವಾಗ ಇರಲಾರದು. ಅವನು ಸಮಯ ಪ್ರಜ್ಞೆಯಿಂದ ಕೂಡಿರಬೇಕು. ಮೊದಲು ಯಾವುದು, ನಂತರ ಯಾವುದು ಎನ್ನುವುದನ್ನು ತಿಳಿದಿರಬೇಕು. ಅವನು ವಿವರಿಸು– ವುದರಲ್ಲಿ ಕಾರ್ಯ ಕಾರಣಗಳ ಸಂಬಂಧ ಇರಬೇಕು. ನಡೆದ ಘಟನೆಗಳಲ್ಲಿ ವಾಸ್ತವ ಹೊಂದಾಣಿಕೆ ಇರಬೇಕು. ಆ ಐತಿಹಾಸಿಕ ವ್ಯಕ್ತಿಗಳು ಆಡಿದ ಮಾತುಗಳಿಂದ ನಡೆದ ಪ್ರಸಂಗಗಳಿಂದ, ಅವರ ವ್ಯಕ್ತಿತ್ವವನ್ನು ರೂಪಿಸಬೇಕಲ್ಲದೇ ವ್ಯತಿರಿಕ್ತವಾದುದನ್ನು ಹೇಳಿ ಅವರನ್ನು ವಿರೂಪಗೊಳಿಸಿ ವಿಪರೀತವಾಗಿ ಕಾಣುವಂತೆ ಮಾಡಬಹುದು.

ಇರುವುದನ್ನು ಬಿಟ್ಟು ಇನ್ನೊಂದನ್ನು ತೋರಿಸುವುದು ಬರಹಗಾರನ ಸ್ವಾತಂತ್ರ್ಯವೆನಿಸುವುದಿಲ್ಲ. ಅದು ಅವನ ಸ್ಥೈರ್ಯವೆನಿಸುತ್ತದೆ. ನಡೆದ ಸಂಗತಿಗಳನ್ನು ತಿರುಚಿ ಹೇಳುವುದು ಸೃಜನಶೀಲತೆ ಎನಿಸುವುದಿಲ್ಲ. ಆ ರೀತಿ ಮಾಡುವುದು ಬ್ಯಾಂಕಿನಲ್ಲಿ ಹಣ ಇಲ್ಲದೆ ಚೆಕ್ ಬರೆದು ಕೊಟ್ಟಂತೆ ಎಂದು ಸ್ಪೇನದ ಲೇಖಕ ಜಾರ್ಜ ಸಂತಾಯನ ಲೇವಡಿ ಮಾಡಿದ್ದಾನೆ. ಈ 'ಮಹಾಚೈತ್ರ' ದ ಬಗೆಗೆ ಏನನ್ನಾದರೂ ಹೇಳಬೇಕೆನ್ನುವವರು ಬಸವಕಾಲದ ಬೋಧೆ ಹಾಗೂ ಘಟನಗಳನ್ನು ತಿಳಿದಿರಬೇಕಾಗುತ್ತದೆ. 'ಮಹಾಚೈತ್ರ' ದ ಲೇಖಕರು ಏನು ಬರೆದಿದ್ದಾರೆ ಎನ್ನುವುದನ್ನು ನೋಡಬೇಕಾಗುತ್ತದೆ. 'ಮಹಾಚೈತ್ರ'ದ ಪರವಾಗಿ ಅಭಿಪ್ರಾಯ ವ್ಯಕ್ತಪಡಿಸಿದ ಬಹುತೇಕ ಜನ ಅಕಾಡೆಮಿಕ್ ಪಂಡಿತರು, ಆ ಪುಸ್ತಕವನ್ನು ಓದಿರಲಾರರು. ಇಲ್ಲದಿದ್ದರೆ ಅದರೊಳಗಿನ ಅಸಂಗತಿಗಳನ್ನು ಅವರು ಕ್ಷಮಿಸಿಕೊಂಡು ಸಹಿಸಿಕೊಂಡು ಹೋಗುತ್ತಿರಲಿಲ್ಲ.

ಬಂಡವಾಳಗಾರರಲ್ಲಿ ವರ್ಗ ಪ್ರಜ್ಞೆ ಇರುವಂತೆ ನಮ್ಮ ವಿಶ್ವವಿದ್ಯಾಲಯಗಳಲ್ಲಿ ಓದಿಸುತ್ತಿರುವ ಅಕಾಡೆಮಿಕ್ ಪಂಡಿತರಲ್ಲಿಯೂ ವರ್ಗ ಪ್ರಜ್ಞೆ ಇದೆ. ಸತ್ಯಕ್ಕೆ, ನಡೆದ ಸಂಗತಿಗಳಿಗೆ ಅಪಚಾರವಾದರೂ ಚಿಂತೆ ಇಲ್ಲ, 'ನನ್ನ ಬೆನ್ನು ನೀನು ಕೆರೆ, ನಿನ್ನ ಬೆನ್ನನ್ನು ನಾನು ಕೆರೆಯುತ್ತೇನೆ' ಎಂಬಂತೆ ಅವರು ಪರಸ್ಪರ ಪ್ರಶಂಸಾ ಸಂಘ– ಮ್ಯೂಚುವಲ್ ಅಡ್ಮಿರೇಶನ್ ಸೊಸೈಟಿ ಎಂದು ಕೆಲಸ ಮಾಡುತ್ತಾರೆ. ಯಾವ ವ್ಯಕ್ತಿತ್ವ ಹನನವಾದರೂ ಚಿಂತೆಯಿಲ್ಲ. ಅವರು ತಮ್ಮನ್ನು ಸುರಕ್ಷಿತರಾಗಿ ಇರಿಸಿಕೊಳ್ಳಬೇಕೆನ್ನುತ್ತಾರೆ. ಈ ಹಿಂದೆ, ಈಗ ನಡೆದಂತೆಯೇ ನಡೆಯಿತು. ಬರಹಗಾರನ ಅಭಿ ವ್ಯಕ್ತಿ ಸ್ವಾತಂತ್ರ್ಯಕ್ಕೆ ಧಕ್ಕೆ ಬಂದಿದೆಯೆಂದು ಅವರು ಆಕಾಶ ಹರಿದು ಬೀಳುವಂತೆ ಹುಯಿಲು ಎಬ್ಬಿಸಿದರು. ಪ್ರೊಫೆಸರ್ ಎಂ.ಎಂ. ಕಲಬುರ್ಗಿಯವರು ಚೆನ್ನಬಸವಣ್ಣ

ನವರು ಅಕ್ಕ ನಾಗಮ್ಮ ಹಾಗೂ ಕಕ್ಕಯ್ಯನವರ ಅನೌರಸ ಸಂತಾನ ಎಂದು ಬರೆದಿದ್ದರು. ಅವರ ಲೇಖನ 'ಪ್ರಪಂಚ'ದಲ್ಲಿಯೇ ಪ್ರಕಟವಾಗಿದ್ದಿತು. ಅದಕ್ಕೆ 'ನಾನು ಕಕ್ಕಯ್ಯನವರಪ್ರಸಾದದಿಂದ ಹುಟ್ಟಿದೆನು'ಎನ್ನುವ ಚೆನ್ನಬಸವಣ್ಣನ ಮಾತೊಂದನ್ನು ಬಿಟ್ಟರೆ ಬೇರೆ ಆಧಾರಗಳೇನೂ ಇರಲಿಲ್ಲ. ಆಗ ನಾನು ಕಲಬುರ್ಗಿಯವರಿಗೆ ಹೇಳಿದ್ದೆ 'ಹೀಗೆ ತಳಬುಡವಿಲ್ಲದ ಆಧಾರ ರಹಿತ ಸಂಗತಿಯನ್ನು ಬರೆದರೆ ಯಾರಾದರೂ ಹುಚ್ಚು ಎಂದು ಹೇಳಿಯಾರು " ವೀರಶೈವ ಪರಿಭಾಷೆಯ ಅರ್ಥ ತಿಳಿಯದವರು, ಕಲಬುರ್ಗಿಯವರಂತೆ ಅಪಾರ್ಥ ಕಲ್ಪಿಸಿ, ಹೀಗೆ ತಪ್ಪು ಮಾಡುತ್ತಾರೆ. ಗುರುಗಳ ಅನುಗ್ರಹದಿಂದ ಮಗುವಾಯಿತು ಎಂದು ಹೇಳಿದರೆ, ಯಾರಾದರೂ ಹೆಂಡತಿಯ ಶೀಲವನ್ನು, ಗುರುಗಳ ಪ್ರಾಮಾಣಿಕತೆಯನ್ನು ಸಂದೇಹಿಸುವರೇನು ?

ಎನಗಿಂತ ಕಿರಿಯರಿಲ್ಲವೆಂದ ಬಸವಣ್ಣನವರು, ತಾನು ಚೆನ್ನಯ್ಯನವರ ಮಗ; ಹರಳಯ್ಯನವರ ಮಗಳು ಚೆರಣಿ ಆರಿಸಲು ಹೋದಾಗ ಅವರ ಹಾದರಕ್ಕೆ ಹುಟ್ಟಿದವನೆಂದು ಹೇಳಿಕೊಂಡರು. ಅವರ ಈ ಮಾತಿಗೆ ಶಬ್ದಶಃ ಅರ್ಥ ಹಚ್ಚಿ ಅವರನ್ನು ವ್ಯಭಿಚಾರೀ ಸಂತಾನವೆಂದು ತಿಳಿಯಬಹುದೇ ?

ಅಕ್ಕನಾಗಮ್ಮ ಬ್ರಾಹ್ಮಣರ ಹುಡುಗಿ, ಕಕ್ಕಯ್ಯ ಪರಿಶಿಷ್ಟರ ಹುಡುಗ, ಅವರು ಬಾಗೇವಾಡಿಯಲ್ಲಿದ್ದರು. ಅವರಿಬ್ಬರಲ್ಲಿ ಪ್ರೇಮ ಅಂಕುರಿಸಿತು. ಚೆನ್ನ ಬಸವಣ್ಣ ಅವರ ಪ್ರೇಮದ ಫಲ ಎಂದು ಹೇಳಿದರೆ ಯಾರಿಗಾದರೂ ಅರ್ಥವಾಗುವ ಸಂಗತಿ.

ಆದರೆ ಕಕ್ಕಯ್ಯ ಮಾಳವ ದೇಶದವನು. ಕಲ್ಯಾಣದಲ್ಲಿ ಅನುಭವ ಮಂಟಪ ಆಗಿದೆಯೆಂದು ಕೇಳಿ ಕಕ್ಕಯ್ಯ ಕಲ್ಯಾಣಕ್ಕೆ ಬಂದ. ಆ ಅನುಭವ ಮಂಟಪಕ್ಕೆ ಚೆನ್ನಬಸವಣ್ಣ ನಿಯಂತ್ರಕನಾಗಿದ್ದ. ಹಾಗಾದರೆ, ಚೆನ್ನಬಸವಣ್ಣ ಯಾವಾಗ ಹುಟ್ಟಿದ ?

ಪ್ರೊ॥ ಕಲಬುರ್ಗಿ ಸಾಧಿಸುವಂತೆ, ಚನ್ನಬಸವಣ್ಣ, ಕಕ್ಕಯ್ಯ, ಅಕ್ಕನಾಗಮ್ಮನ ಪ್ರೇಮ ಸಂಜಾತನೇ ಆಗಿದ್ದರೆ, ಚೆನ್ನಬಸವಣ್ಣ ಬೆಳೆದು ದೊಡ್ಡವನಾಗಿದ್ದಾನೆ. ಕಕ್ಕಯ್ಯ-ಅಕ್ಕನಾಗಮ್ಮ ಬದುಕಿ ಉಳಿದಿದ್ದಾರೆ ಎಂದರೆ, ಸಮಾಜವು ಅವರ ವರ್ಣ ಸಂಕರ ಸಂಬಂಧವನ್ನು ಒಪ್ಪಿದೆ, ಸಹಿಸಿಕೊಂಡಿದೆ ಎಂದು ಅರ್ಥವಾಗುತ್ತದೆ.

ಈ ವಾದವನು ಒಪ್ಪುವುದಾದರೆ, ಹರಳಯ್ಯನ ಮಗ, ಮಧುವರಸನ ಮಗಳ ವಿವಾಹ ನಡೆಯಬೇಕೆಂದಾಗ ವರ್ಣಸಂಕರ ಸಂಬಂಧವೆಂದು ಕಲ್ಯಾಣದಲ್ಲಿ ಕ್ರಾಂತಿ, ಅದೇಕೆ ಆಯಿತು ? ವಚನದ ಆಧಾರ, ಸಮಕಾಲೀನರ ಆಧಾರ, ಶಿಲಾಶಾಸನದ ಆಧಾರ ಯಾವುದೂ ಇಲ್ಲದಿರುವ ಇಂಥ ಸ್ವಕಪೋಲ ಕಲ್ಪಿತ ಸಂಗತಿಯನ್ನು ಕಲ್ಬುರ್ಗಿಯವರು ಬರೆದದ್ದೆಂದು, ಅಭಿವ್ಯಕ್ತಿ ಸ್ವಾತಂತ್ರ್ಯದ ಹೆಸರಿನಲ್ಲಿ ನಮ್ಮ ಅಕಾಡೆಮಿಕ್ ಪಂಡಿತರೆಲ್ಲರೂ ಸಮರ್ಥಿಸಿದರು. ಅವರಿಗೆ ಕಲ್ಬುರ್ಗಿಯವರಿಗೆ ಅನ್ಯಾಯವಾದುದು

ಕಾಣಿಸಿತು. ಆದರೆ, ಕಲ್ಬುರ್ಗಿಯವರಿಂದ ಸತ್ಯಕ್ಕೆ-ಚೆನ್ನಬಸವಣ್ಣನಿಗೆ, ಕಕ್ಕಯ್ಯಗೆ ಅಕ್ಕ ನಾಗಮ್ಮನಿಗೆ ಅನ್ಯಾಯವಾದುದು ಕಾಣಲಿಲ್ಲ.

ಒಬ್ಬ ಹುಡುಗ ಒಬ್ಬ ಹುಡುಗಿಯನ್ನು ಪ್ರೀತಿಸುತ್ತಾನೆ. ಆ ಹುಡುಗಿಯ ಬಗೆಗೆ ಅಲ್ಲವಾದ ಮಾತನ್ನು ಯಾರಾದರೂ ಆಡಿದರೆ, ಆವನ ತಲೆಯೇ ಕೆಡುತ್ತದೆ. ಲಕ್ಷಾಂತರ ಜನರು ಚೆನ್ನಬಸವಣ್ಣನನ್ನು ಪೂಜಿಸುತ್ತಾರೆ. ಅವರ ಬಗೆಗೆ ಇಲ್ಲದುದೊಂದನ್ನು ಬರೆದರೆ, ಅವರ ತಲೆ ಕೆಡುವುದಿಲ್ಲವೇನು ? ಈ ಅಕಾಡೆಮಿಕ್ ಜನರಲ್ಲಿ ಬೌದ್ಧಿಕ ಪ್ರಾಮಾಣಿಕತೆ ಇದ್ದಿದ್ದರೆ ಅವರು ಕಲ್ಬುರ್ಗಿ ಮಂಡಿಸಿದ ಸಿದ್ಧಾಂತವನ್ನು ಸಾಕ್ಷಾಧಾರಗಳಿಂದ ಸಮರ್ಥಿಸುತ್ತಿದ್ದರು. ಅವರು ಬಾಯಿ ಮುಚ್ಚಿಕೊಂಡು ಕುಳಿತುಕೊಳ್ಳದೆ ಇನ್ನಾದರೂ ಆ ಕೆಲಸ ಮಾಡಬೇಕು.

* * *

'ಮಹಾಚೈತ್ರ'ದ ಲೇಖಕರು ಸೃಜನಶೀಲ ಬರಹಗಾರರು, ಇಲ್ಲಿ ಆ ಪ್ರಶ್ನೆ ಮುಖ್ಯವಲ್ಲ. ಈ ನಾಟಕದಲ್ಲಿ ಅವರ ಕಲ್ಪನೆ ಕೆಲಸ ಮಾಡಿದೆ. ಆದರೆ ಇಲ್ಲಿ ಬಂದಿರುವ ವ್ಯಕ್ತಿಗಳು ಕಾಲ್ಪನಿಕ ವ್ಯಕ್ತಿಗಳಲ್ಲ. ಚೆನ್ನಬಸವಣ್ಣ, ಮಡಿವಾಳ ಮಾಚಯ್ಯ, ನೀಲಾಂಬಿಕೆ ಮೊದಲಾದವರು ವಾಸ್ತವ ವ್ಯಕ್ತಿಗಳಾದುದರಿಂದ ಅವರ ಬಗೆಗೆ ಏನು ಬೇಕಾದರೂ ಬರೆಯುವುದಕ್ಕೆ ಆಗುವುದಿಲ್ಲ. ಅವರು ಕಾಲ್ಪನಿಕ ವ್ಯಕ್ತಿಗಳಾಗದಿದ್ದರೆ ಲೇಖಕರಿಗೆ ತಮ್ಮ ಮನಸ್ಸಿಗೆ ಬಂದುದನ್ನು ಬರೆಯುವ ಸ್ವಾತಂತ್ರ್ಯ ಇದ್ದಿತು.

ಆದರೆ, ಈ ವ್ಯಕ್ತಿಗಳು ತಾವು ಏನೆನ್ನುವುದನ್ನು ತಮ್ಮ ವಚನಗಳಲ್ಲಿ ತೋರಿಸಿಕೊಟ್ಟಿದ್ದಾರೆ. ಅವರ ಬಗೆಗೆ ವ್ಯತಿರಿಕ್ತವಾದುದನ್ನು ಊಹಿಸಿ ಬರೆದು, ಅಭಿವ್ಯಕ್ತಿ ಸ್ವಾತಂತ್ರ್ಯದ ಹಿಂದೆ ರಕ್ಷಣೆ ಪಡೆಯಬೇಕೆನ್ನುವುದು ನ್ಯಾಯವೆನಿಸಲಾರದು. ಇನ್ನೊಬ್ಬರ ಮೇಲೆ ಕೈ ಎತ್ತುವವರು ಹೊಡೆತ ತಿನ್ನಲೂ ಸಿದ್ಧವಾಗಿರಬೇಕಾಗುತ್ತದೆ. ಹೂವು ಬೇಕೆನ್ನುವವರು ಹೂವಿನೊಂದಿಗೆ ಇರುವ ಮುಳ್ಳನ್ನೂ ಸ್ವೀಕರಿಸಬೇಕು.

ಲೇಖಕ ಶಿವಪ್ರಕಾಶರು ಬಸವಣ್ಣನ ಕಾಲದಲ್ಲಿ ನಡೆದ ಸಂಗತಿಗಳನ್ನು ಕಾಲ ಗೌರವವನ್ನು ಗಮನಿಸದೆ, ಹಿಂದು ಮುಂದಾಗಿ ಹೆಣೆದಿದ್ದಾರೆ. ಹರಳಯ್ಯನ ಮಗನ ಮದುವೆ ಮಧುವರಸನ ಮಗಳೊಂದಿಗೆ ನಡೆಯಬೇಕೆಂದಾಗ ಅವರ ಕಣ್ಣು ಕೀಳಿಸಿ ಎಳಹೊಟೆ ಕಟ್ಟಿ ಎಳೆಸಿದರು. ಆಗ ಬಸವಣ್ಣನವರು, ಆ ಘೋರ ಅನ್ಯಾಯಕ್ಕೆ ನೊಂದುಕೊಂಡು ಕಲ್ಯಾಣ ಬಿಟ್ಟು ನಿರ್ಗಮಿಸಿದರು.

ಈ ಘಟನೆಯನ್ನು ಬಸವಣ್ಣನವರು ಕಲ್ಯಾಣದಿಂದ ನಿರ್ಗಮಿಸಿದ ಅನಂತರದಲ್ಲಿ ಆದುದೆಂಬಂತೆ ಶಿವಪ್ರಕಾಶರು ಚಿತ್ರಿಸಿದ್ದಾರೆ. ಬಸವಣ್ಣನವರು ಕಲ್ಯಾಣ ಬಿಡುವುದಕ್ಕೆ, ಬೊಕ್ಕಸದ ಹಣವನ್ನು ದೋಚಿದ್ದುದೇ ಕಾರಣವಾಯಿತೆಂದು ಅವರು ತಮ್ಮ ಕೃತಿಯಲ್ಲಿ ತೋರಿಸಿದ್ದಾರೆ.

ನಾಗಶೆಟ್ಟಿ : ಬಸವಣ್ಣೋರು ಸಮರ್ಥಿಸಿಕೊಳ್ಳಲಿಲ್ಲವೇನು ?

ಚಂದ್ರಶೆಟ್ಟಿ : ಅದೇ ಆಶ್ಚರ್ಯ, ಸಮರ್ಥಿಸಿಕೊಳ್ಳಲೇ ಇಲ್ಲ.

ನಾಗಶೆಟ್ಟಿ : ಆಪಾದನೆ ಒಪ್ಪಿಕೊಂಡೇ ಬಿಟ್ರೇನು ?

ಚಂದ್ರಶೆಟ್ಟಿ : ಅದೂ ಇಲ್ಲ. ಮಹಾಪ್ರಭುಗಳಿಗೆ ವಿಶ್ವಾಸ ಇಲ್ಲದ ಮೇಲೆ ಈ ಪದವೀನೇ ಬೇಡ ಅಂದ್ರು.

ಈ 'ಮಹಾಚೈತ್ರ'ದ ತೆರೆ ಏಳುವ ಮುಂಚೆ ಬರೆದ ತಮ್ಮ ನಾಂದಿಸ್ವರೂಪದ ಮಾತುಗಳಲ್ಲಿ ಶಿವಪ್ರಕಾಶರು, ವರ್ತಮಾನದ ವಿಶಿಷ್ಟ ಚೌಕಟ್ಟಿನಲ್ಲಿ ಹಿಂದಿನದನ್ನು ತಂದಿಡುವಾಗ, ಹಿಂದಿನ ವೈಶಿಷ್ಟ್ಯಗಳನ್ನು ಮರೆಯಲಿಕ್ಕಾಗುವುದಿಲ್ಲ. ಹಾಗೆ ಮಾಡಿದಾಗ ಚರಿತ್ರೆಯನ್ನೇ ನಿರಾಕರಿಸಿದಂತೆ ಎಂದು ಬರೆದಿದ್ದಾರೆ. ಆದರೆ ನಾಟಕ ಬರೆಯುವ ಭರದಲ್ಲಿ ಅವರು ಹಿಂದಿನ ಚರಿತ್ರೆಯನ್ನೇ ನಿರಾಕರಿಸಿದ್ದಾರೆ.

ಅಭಿವ್ಯಕ್ತಿ ಸ್ವಾತಂತ್ರ್ಯದ ಹೆಸರಿನಲ್ಲಿ ಬರುವ ಎಲ್ಲ ಸರಕನ್ನೂ ಸೃಜನಶೀಲವೆಂದು ಸ್ವೀಕರಿಸಬೇಕೆಂದು ಆಗುವುದಿಲ್ಲ. ಅದನ್ನು ಸ್ವೀಕರಿಸಬೇಕೆಂದು ಜ್ಞಾನಪೀಠ ಪ್ರಶಸ್ತಿ ವಿಜೇತನು ಹೇಳಿದರೂ ಅದು ಆಗದಂಥ ಮಾತು. ಒಬ್ಬ ಪಂಡಿತ ಒಂದು ಹೋರಿಯ ಮೂಗಿನ ಹೊರಳಿಯಲ್ಲಿ ತನ್ನ ಬೆರಳನ್ನು ಇರಿಸಿದ, ಅಲ್ಲಿ ನುಸುಳಿ ಕೊಂಡಿದ್ದ ಚೇಳು ಅವನಿಗೆ ಕುಟುಕಿತು. ಹೋರಿಯ ಮೂಗಿನ ಹೊರಳೆ ಹೇಗಿದೆಯೆಂದು ಕೇಳಿದರೆ ಅವನು ತಣ್ಣಗಿದೆ ಎಂದ. ಮತ್ತೊಬ್ಬ ಇನ್ನೊಬ್ಬ ಬೇರೊಬ್ಬ ಬೆರಳು ಇರಿಸಿ ಚೇಳಿನಿಂದ ಕಡಿಸಿಕೊಂಡರೂ 'ತಣ್ಣನೆ'ಯೆಂದೇ ಹೇಳುತ್ತ ಹೋದರು. ಮಡಿವಾಳ ಮಾಚಯ್ಯ ಬಹುದೊಡ್ಡ ಶಿವಶರಣ, ಬಸವಣ್ಣನ ಬಗೆಗೆ ಆತನಲ್ಲಿ ಭಾರೀ ಪೂಜ್ಯ ಭಾವನೆ. ಬಸವಣ್ಣನನ್ನು ಅವನು ಲಿಂಗಾಕಾರದಲ್ಲಿಯೇ ಕಾಣುವವನು. ಆ ಅರ್ಥದ ಒಂದು ವಚನ ಇದೆ. ಬಸವಣ್ಣ ನಿರ್ಮಿಸಿದ ಕಲ್ಯಾಣದಲ್ಲಿ ಹಿಂಸಾಚಾರ ಮಾಡುವುದು ಬಸವೋಕ್ತಿಯ ಉಲ್ಲಂಘನೆ ಆಗುತ್ತದೆ ಎಂದು ಚೆನ್ನಬಸವಣ್ಣ ಈ ನಾಟಕದಲ್ಲಿ ಮಾಚಯ್ಯನಿಗೆ ಹೇಳಿದರೆ ಅವನಿಂದ ಮಾತು, ಮಾಚಯ್ಯನ ವ್ಯಕ್ತಿತ್ವಕ್ಕೆ ಮಸಿ ಬಳಿಯುವಂತೆ ಇದೆ. "ನಾವು ಬಸವಣ್ಣನವರ ಬಿಟ್ಟಿ ಆಳುಗಳಲ್ಲ". ಆಗ ಚೆನ್ನಬಸವಣ್ಣ 'ಬಸವಣ್ಣನೋರು ನಮ್ಮ ಅಗ್ರನಾಯಕರು' ಎಂದು ಪ್ರತಿಕ್ರಿಯಿಸಿದಾಗ, ಮಾಚಯ್ಯ ನಮಗೆ ಅದು ಮುಖ್ಯವಲ್ಲ ಎಂದು ಹೇಳುತ್ತಾನೆ. ಅವರು ನಮ್ಮನ್ನು ನಡು ನೀರಿನ ತನಕ ಬಿಟ್ಟು ಹೋಗಿದ್ದಾರೆ ಎಂದೂ ಉದ್ಗಾರ ತೆಗೆಯುತ್ತಾನೆ.

ಚೆನ್ನಬಸವಣ್ಣ ಜ್ಞಾನಯೋಗಿ, ಷಟ್‌ಸ್ಥಲ, ಚಕ್ರವರ್ತಿ. ಅನುಭವ ಮಂಟಪದಲ್ಲಿ ಅವರದು ಬಹು ಹಿರಿಯ ಸ್ಥಾನ. ಅಂಥ ಚೆನ್ನಬಸವಣ್ಣನ ಬಗೆಗೆ, ಮಡಿವಾಳ ಮಾಚಯ್ಯ ಹೇಳುವ ಮಾತನ್ನು ನೆನೆದರೆ, ಆತ ಜವಾಬ್ದಾರಿ ಇಲ್ಲದ ಮನುಷ್ಯ

ಎನ್ನುವ ಭಾವನೆ ಬರುತ್ತದೆ. 'ಹೊಣೆಗಾರಿಕೆ ಇರೋ ಶರಣರು ನಮ್ಮ ಜೊತೆ, ಹೊಣೆಗಾರಿಕೆ ಇಲ್ಲದೋರು ಚೆನ್ನಬಸವಣ್ಣನೋರ ಬಳಿ ಹೋಗಬಹುದು. ಇದು ನಾಟಕದಲ್ಲಿನ ಮಾತು.

ಈ ಶಿವಪ್ರಕಾಶರು ಬಸವಣ್ಣನ ಮೂಲವನ್ನೇ ಸಂದೇಹಿಸುವಂಥ ಒಂದು ಮಾತನ್ನು ಮುಕುಂದಭಟ್ಟ ಎಂಬ ಒಂದು ಪಾತ್ರದ ಬಾಯಲ್ಲಿ ಹಾಕಿದ್ದಾರೆ; 'ನಮ್ಮ ಪಿಂಡಾನೇ ಎಂದು ನಾವು ಉದಾಸೀನ ಮಾಡಿದೆವು. ಆ ಮೇಲೆ ಗೊತ್ತಾಯ್ತು ಅವನ ತಾಯಿಗೆ ಬಹಳ ದಿನ ಪುತ್ರ ಫಲ ಇರಲ್ಲ ಎನ್ನುತ್ತಾನೆ. ಆ ಮೇಲೆ ಅವನ ಮಾತು ಮುಗಿಯುವಷ್ಟರಲ್ಲಿ ಆದಿನಾಥಯ್ಯ ಕೇಳುತ್ತಾನೆ. 'ಅಂದರೆ ಸಂದುಗೊಯ್ಯಲು (ಅಂದರೆ ಬೀದಿಯಲ್ಲಿ ಯಾರಿಗೋ ಹುಟ್ಟಿದವನು) ಅನ್ನಿ. ಆಶ್ಚರ್ಯ, "ನಿಮ್ಮ ಕುಲದಲ್ಲಿ ಹೀಗೆಲ್ಲಾ ಉಂಟಾ ?"

ಅಕ್ಕಮಹಾದೇವಿಯ ಬಗೆಗೆ ಬರುವ ಪ್ರಸ್ತಾಪ ಈ ರೀತಿ ಇದೆ.

ಆದಿನಾಥಯ್ಯ : ಒಬ್ಬ ಬತ್ತಲೆ ಹೆಂಗಸು ಕಲ್ಯಾಣದ ಬೀದಿ ಬೀದಿಗಳಲ್ಲಿ ಶಿವನೇ ಗಂಡ, ಶಿವನೇ ಗಂಡಾ ಅಂತಾ ಆಡ್ಡಾಡಿದಳು.

ಮುಕುಂದ ಭಟ್ಟ : ಏನೇ ಹೇಳಿ, ಕೈ ತೊಳೆದು ಮುಟ್ಟಬೇಕಲ್ಲ ಹಾಗಿದ್ದಳು.

ಆದಿನಾಥಯ್ಯ : ಕಲ್ಯಾಣದ ಮರ್ಯಾದಸ್ತ ಹೆಣ್ಣು ಮಕ್ಕಳು ಸೆರಗಲ್ಲಿ ಮುಖ ಮುಚ್ಚಿ ಕೊಳ್ಳೋ ಹಾಗಾಯಿತು.

ಅಲ್ಲಮ ಪ್ರಭುವಿನ ಬಗ್ಗೆ ಮಂಗಳಗುಪ್ತ ಎಂಬ ಒಂದು ಪಾತ್ರದ ಬಾಯಿಂದ ಬರೆದ ಈ ಮಾತು ನೋಡಿ 'ಒಬ್ಬ ಕೆದರು ತಲೆ, ಮೈಯೆಲ್ಲಾ ಕೂರೆ. ನಾರ್‍ತಾ ಇರೋ ಚಿಂದಿ ಬಟ್ಟೆ - ಅಂಥವನನ್ನು ಶೂನ್ಯ ಸಿಂಹಾಸನದ ಚಕ್ರವರ್ತಿ ಅಂತ, ಅರಮನೆ, ಮುಂದೆ, ದೇವಾಲಯಗಳ ಮುಂದೆ, ಅಗ್ರಹಾರಗಳ ಮುಂದೆ, ಮಠಗಳ ಮುಂದೆ ಮೆರವಣಗೆ ಮಾಡ್ಸಿದ್ರು..,

ಇವೆಲ್ಲ ಪಾತ್ರದ ಬಾಯಲ್ಲಿ ಬಂದ ಮಾತುಗಳು, ತನ್ನ ಮಾತು ಅಲ್ಲ ಎಂದು ನಾಟಕಕಾರ ಸಾಧಿಸಬಹುದು. ಆದರೆ ಆ ಮಾತುಗಳನ್ನು ಅಲ್ಲಗಳೆಯುವ ಮಾತು ಬೇರೆ ಪಾತ್ರಗಳ ಬಾಯಿಂದ ಬಂದಿದ್ದರೆ, ಆ ಶಿವಶರಣರ ಬಗೆಗೆ ಅಪಾರ್ಥದ ಭಾವನೆ ಉಂಟಾಗುತ್ತಿರಲಿಲ್ಲ. ಬಸವಣ್ಣನವರ ಅಂತ್ಯ ಹೇಗಾಯಿತನ್ನುವುದನ್ನು ಯಾರೂ ಅರಿಯರು, ಆದರೆ ಅದನ್ನು ಶಿವಪ್ರಕಾಶರು ಅರಿತಿದ್ದಾರೆ. ಹೂಬಾ ಹೂಬು ಕಂಡವರಂತೆ ಅವರು ಹೇಳುತ್ತಾರೆ. ಬಹುರೂಪಿ ಚೌಡಯ್ಯನ ಬಾಯಲ್ಲಿ ಈ ಮಾತು ಹಾಕಿದ್ದಾರೆ. ಮೂರನೆಯ ದಿನ ನದಿ ದಂಡೆಯಲ್ಲಿ ಬಸವಣ್ಣನವರ ಕಾಯ ಇರಲಿಲ್ಲ. ಸಂಜೆಯ ಹೊತ್ತಿಗೆ ಬೆಸ್ತರೋನು ಬಲೆ ಬೀಸಿದಾಗ ಸಿಕ್ಕಿತು. ನೀರು ಕುಡಿದಿತ್ತು. ಗುರುತೇ ಸಿಗಲಿಲ್ಲ. ನದೀ ಹರಿತಾ ಇತ್ತು. (ಮನುಷ್ಯ ನೀರು ಕುಡಿದು ಸತ್ತಿದ್ದರೆ

ಹೆಣ ತೇಲುತ್ತದೆ. ಹರಿಯುವ ಪ್ರವಾಹದಲ್ಲಿ ತೇಲಿಸಿಕೊಂಡು ಹೋಗುತ್ತದೆ. ಬಸವಣ್ಣನವರು ಅಂತ್ಯಗೊಂಡರೆಂದು ಸಾಂತ್ವನ ಹೇಳಲು ಬಂದ ಅಣ್ಣ ಬಿಜ್ಜಳನಿಗೆ ತಂಗಿ ನೀಲಾಂಬಿಕೆ ಹೇಳಿದ ಮಾತನ್ನು ಗಮನಿಸಬೇಕು 'ನೀವಿಲ್ಲದೆ ಯಾರು ಚಕ್ರವರ್ತಿ ಆಗಿದ್ದರೂ ಬಸವರಸರ ಕಥೆ ನೀರಿನಲ್ಲೇ ಮುಗಿಯುತ್ತಿತ್ತು. ನೀಲಾಂಬಿಕೆ ಈ ಮಾತನ್ನು ಹೇಳುವುದು ಸಾಧ್ಯವೇ? ಶಿವಪ್ರಕಾಶರ ಕಲ್ಪ ಕತೆ ಬಹು ಹುಲುಸಾಗಿದೆ.

ಮಧುವರಸ ಹರಳಯ್ಯ ಹಾಗೂ ಹರಳಯ್ಯನ ಮಗ ಶೀಲವಂತ, ಈ ಮೂವರನ್ನೂ ಕುದುರೆಯ ಕಾಲಿಗೆ ಕಟ್ಟಿ ಕುದುರೆಯನ್ನು ಊರ ಬೀದಿಗಳಲ್ಲಿ ಓಡಿಸಿ ಎಳೆಹೂಟೆ ಮಾಡಿದರು. ಅವರ ಶಿರಚ್ಛೇದನ ಕೂಲುದಾಣದಲ್ಲಿ ಆಗಬೇಕು. ಊರಲೆಲ್ಲ ಎಳೆಹೂಟೆಗೊಂಡು ಸತ್ತು ಹೆಣವಾದ ಶೀಲವಂತನೊಂದಿಗೆ ಮಧುವರಸರ ಮಗಳು ಮಾಡಿದ ಸಂವಾದವನ್ನು ಶಿವಪ್ರಕಾಶರು ಈ ನಾಟಕದಲ್ಲಿ ಕೊಟ್ಟಿದ್ದಾರೆ. ಅದು ಅವರ ಕಲ್ಪನೆಯಲ್ಲಿ ಮಾತ್ರ ಸಾಧ್ಯ.

ಇಷ್ಟೆಲ್ಲ ಅಸಂಗತಿಗಳನ್ನು ಇರಿಸಿಕೊಂಡೂ ಶಿವಪ್ರಕಾಶರು ತಮ್ಮಿಂದ ಏನೂ ಅಪಚಾರವಾಗಿಲ್ಲ ಎಂದು ಸಮರ್ಥಿಸಿಕೊಳ್ಳುತ್ತಾರೆ. 'ನಾನು ಹಿಮಾಲಯ ಸದೃಶ ತಪ್ಪು ಮಾಡಿದ್ದೇನೆ'ಎಂದು ಒಪ್ಪಿಕೊಳ್ಳಲು ಅವರೇನು ಮಹಾತ್ಮಗಾಂಧಿಯೇ ?

[ಕೃಪೆ : ಜನತಾವಾಣಿ, 12 ಮಾರ್ಚ್-1995] ★

'ಮಹಾಚೈತ್ರ' ಇತಿಹಾಸಕ್ಕೆ ಅಪಚಾರ

(ಸಂಯುಕ್ತ ಕರ್ನಾಟಕ 28-3-95)

"ಮಹಾಚೈತ್ರ" ನಾಟಕವು ಪಠ್ಯಗ್ರಂಥವಾಗಿ ಏಳಿಸಿರುವ ವಿವಾದಗಳನ್ನು ಅವು ಅಹಿತಕರ ಆಯಾಮವನ್ನು ಪಡೆಯುತ್ತಿರುವುದನ್ನು ನಾನು ವಿಷಾದದಿಂದ ಗಮನಿಸುತ್ತಿದ್ದೇನೆ. ಈ ಬಗ್ಗೆ ನನ್ನನ್ನು ಅನೇಕರು ಸಹಜವಾಗಿಯೇ ಪ್ರಶ್ನಿಸುತ್ತಿದ್ದಾರೆ. ಪದವಿ ತರಗತಿಗಳಿಗೆ ಪಾಠ ಹೇಳಿ, ಹಲವು ಪಠ್ಯಪುಸ್ತಕ ಸಮಿತಿಗಳಲ್ಲಿ ಸದಸ್ಯನಾಗಿದ್ದು, ಬಸವಣ್ಣನವರ ಬಗ್ಗೆ ತಕ್ಕಮಟ್ಟಿಗೆ ಕೆಲಸ ಮಾಡಿರುವ ನಾನು ಆ ಕೃತಿಯ ಬಗ್ಗೆ ನನ್ನ ಅಭಿಪ್ರಾಯಗಳನ್ನು ವ್ಯಕ್ತಪಡಿಸುವುದು ನನ್ನ ಸಾಮಾಜಿಕ ಕರ್ತವ್ಯವೆಂದು ಭಾವಿಸಿದ್ದೇನೆ.

ಸಾಹಿತ್ಯವನ್ನು ಸೃಷ್ಟಿಸುವವರಿಗೆ ಹೇಗೋ ಹಾಗೆಯೇ ಓದುಗರಿಗೂ ಒಂದು ಸ್ವಾತಂತ್ರ್ಯ ಇರುತ್ತದೆ. ಒಂದು ಕೃತಿ ಪಠ್ಯಗ್ರಂಥವಾದಾಗ ಓದುಗರ ಸ್ವಾತಂತ್ರ್ಯ ಅಷ್ಟರಮಟ್ಟಿಗೆ ನಿರ್ಬಂಧಿತವಾಗುತ್ತದೆ. ಪಠ್ಯಗ್ರಂಥವು ಅಧ್ಯಾಪಕನ ವಿದ್ಯಾರ್ಥಿಗಳ ಮಧ್ಯದ ಚಟುವಟಿಕೆ : ಅಧ್ಯಾಪಕ ತರಗತಿಯಲ್ಲಿ ಆ ಗ್ರಂಥದ ಪ್ರತಿ ಸಾಲನ್ನೂ ಓದಿ ವಿವರಿಸಬೇಕಾಗುತ್ತದೆ ; ವಿದ್ಯಾರ್ಥಿಗಳ ಪ್ರಶ್ನೆ ಸಂದೇಹಗಳಿಗೆ ಉತ್ತರಿಸಬೇಕಾಗುತ್ತದೆ, ಒಂದು ಕೃತಿ ಸಾಹಿತ್ಯಕವಾಗಿ, ವೈಚಾರಿಕವಾಗಿ ಶ್ರೇಷ್ಠವೇ ಅಲ್ಲವೇ ಎಂಬಷ್ಟೇ ಮುಖ್ಯ. ಅದು ತರಗತಿಯ ಪಠ್ಯಗ್ರಂಥವಾಗಬಲ್ಲುದೆ ಎಂಬುದು.

"ಮಹಾಚೈತ್ರ" ನಾಟಕದ ವಸ್ತು ಐತಿಹಾಸಿಕ-ಧಾರ್ಮಿಕ ಪುರುಷ ಬಸವಣ್ಣ ಹಾಗೂ ಅವರ ಸಾಮಾಜಿಕ ಆಂದೋಲನ. ಆ ಸಂಬಂಧಿಯಾದ ವಸ್ತುವಿನ ಕೆಲವು ಅಂಶಗಳು ಇಲ್ಲಿ ಬಳಕೆಯಾಗಿರುವ ರೀತಿಯನ್ನು ಗಮನಿಸಬಹುದು. (೧) ಬಸವಣ್ಣನವರ ಹುಟ್ಟಿನ ಬಗ್ಗೆ ಯಾವುದೇ ಭಿನ್ನಾಭಿಪ್ರಾಯಗಳೂ ಇಲ್ಲ ಆದರೂ ನಾಟಕದಲ್ಲಿ ಅವರು ಅಕ್ರಮ ಸಂಬಂಧದಿಂದ ಹುಟ್ಟಿದವರು ಎಂಬ ಗುಮಾನಿಯನ್ನು ಪಾತ್ರಗಳ ಬಾಯಲ್ಲಿ ಆಡಿಸಿರುವುದು ಒಳ್ಳೆಯ ಅಭಿರುಚಿ ಅಲ್ಲ. ಆ ಪಾತ್ರಗಳು ಬಸವಣ್ಣನವರ ವಿರೋಧಿಗಳೇ ಆಗಿರಬಹುದು. ಆ ಪಾತ್ರದ ಪ್ರಕಾರ ಬಸವಣ್ಣ ಒಂದು 'ಸಂದು ಗೋಯ್ಯಲು' (೨) ಬಸವಣ್ಣನವರ ಪತ್ನಿ ನೀಲಲೋಚನೆ ಬಿಜ್ಜಳನ ತಂಗಿಯೆಂದು ಚಿತ್ರಿಸಿರುವುದೂ ಅಸಮರ್ಥನೀಯ. ರಾಜನ ತಂಗಿಯ ಗಂಡ ಅರಮನೆಯಲ್ಲಿ ಮತ್ತು ಹೊರಗಡೆ ಪ್ರಭಾವಶಾಲಿಯಾಗುತ್ತಾನೆ. ಇಲ್ಲ ಚಿತ್ರಿಸಿರುವಂತೆ ಬಸವಣ್ಣ ಬಿಜ್ಜಳನಿಗೆ ದೊಡ್ಡ ಆದರ್ಶ ಸಾಮ್ರಾಜ್ಯವನ್ನು ಕಟ್ಟಬೇಕು ಎಂದು ಸಲಹೆ ಮಾಡುತ್ತಾನೆ ಮತ್ತು ಹಾಗೆ ಕಟ್ಟುವುದರಲ್ಲಿ ಸಹಾಯಕನಾಗಿದ್ದಂತೆಯೂ ಚಿತ್ರಿಸಲಾಗಿದೆ. ಬ್ರಾಹ್ಮಣ್ಯವನ್ನೂ ಅಂತೆಯೇ ಜನಿವಾರವನ್ನೂ ತ್ಯಜಿಸಿ ಅನಾಥನಂತೆ ಬಂದ ಬಸವಣ್ಣನಿಗೆ ವರ್ಣಾಶ್ರಮ ಪರಿಪಾಲಕನೆಂದು ಜನ ನಂಬಿದ್ದ ಕ್ಷತ್ರಿಯ ಬಿಜ್ಜಳನು (ಇವನೂ ಜನಿವಾರ ಧರಿಸಿದವನೇ) ತನ್ನ ಸ್ಫುರದ್ರೂಪಿಯಾದ ತಂಗಿಯನ್ನು ಮದುವೆ ಮಾಡಿಕೊಟ್ಟಿದು. ತೀರಾ ಅಸಂಭವನೀಯ. ವಾಸ್ತವವೆಂದರೆ ಅವಳೂ ಬಸವಣ್ಣನವರ ಇನ್ನೊಬ್ಬ ಪತ್ನಿ ಗಂಗಾಂಬಿಕೆಯೂ ಬಿಜ್ಜಳನ ಅಧಿಕಾರಿಗಳ ಮಕ್ಕಳು. ಚಾಲುಕ್ಯ ಚಕ್ರವರ್ತಿಯನ್ನು ಕೊಂದು ಅಕ್ರಮವಾಗಿ ಪಟ್ಟಕ್ಕೆ ಬಂದ ಬಿಜ್ಜಳನ ರಾಜಕೀಯ ವಹಿವಾಟಿನಿಂದ ಬಸವಣ್ಣನವರು ಉದ್ದಕ್ಕೂ ಹೊರಗುಳಿದರು. 'ಭವಿ' ಬಿಜ್ಜಳನ ಕೈಕೆಳಗೆ ಕೇವಲ ವೃತ್ತಿಯೆಂದು ಕೆಲಸ ಮಾಡುತ್ತಿರುವುದಾಗಿ ಬಸವಣ್ಣನವರೇ ಹೇಳಿಕೊಂಡಿದ್ದಾರೆ. ಅರಮನೆ ಪ್ರಭುತ್ವ ಇವುಗಳ ಬಗ್ಗೆ ಬಸವಣ್ಣನವರದು ಅನಾದರದ ಧೋರಣೆಯಾಗಿತ್ತೆಂಬುದು ಅವರ ಮಾತುಗಳಲ್ಲೇ ಸ್ಪಷ್ಟವಾಗಿದೆ. (೩) ಬಿಜ್ಜಳನು ಕೊಟ್ಟ ದಾನದತ್ತಿಗಳಿಂದ ಬಸವಣ್ಣನವರ "ಮಹಾಮನೆ"ಯು ನಡೆಯುತ್ತಿತ್ತೆಂಬ ಕಲ್ಪನೆಯೂ ಅಷ್ಟೇ ಅರ್ಥಹೀನವಾದುದು. ಬಿಜ್ಜಳನ ದತ್ತಿಗಳಿಂದ ಅಲ್ಲ. ಬಸವಣ್ಣನವರ ದುಡಿಮೆಯಿಂದ ಅದು ನಡೆಯುತ್ತಿತ್ತು. ಅಂದಿನ ಶರಣರು ಶೈವ ಮಠಾಧೀಶರಂತೆ, ವೈದಿಕರಂತೆ ರಾಜರ ದತ್ತಿಗಳನ್ನು ನಿರೀಕ್ಷಿಸುತ್ತಿರಲಿಲ್ಲ. (೪) ಬ್ರಾಹ್ಮಣ-ದಲಿತರ ವಿವಾಹ ಸಂಬಂಧಕ್ಕೆ ಚನ್ನಬಸವಣ್ಣ ಸೇರಿದಂತೆ ಹಲವರ ಒಪ್ಪಿಗೆ ಇರಲಿಲ್ಲವೆಂದೂ, ಆ ವಿವಾಹಕ್ಕೆ ಬಸವಣ್ಣ ಒಪ್ಪಿಗೆ ಕೊಟ್ಟುದು ಆತುರದ ನಿರ್ಧಾರವೆಂಬುದು ಅವರ ಅಭಿಮತವಾಗಿತ್ತೆಂದೂ ಸೂಚಿಸಿರುವುದು ನಿರಾಧಾರವಾದುದು. "ವಿಪ್ರ ಮೊದಲು ಅಂತ್ಯಜ ಕಡೆಯಾಗಿ ಕೊಡುವುದು ಕೊಂಬುದು ಸದಾಚಾರ, ಉಳಿದುದೆಲ್ಲ ಅನಾಚಾರ" ಎಂದು ಅತ್ಯಂತ

ಧೈರ್ಯದಿಂದ ಘೋಷಿಸಿದ ಚನ್ನಬಸವಣ್ಣನವರಾದಿಯಾಗಿ ಅಂದಿನ ವೀರಶೈವ ಸಮಾಜ ಮನಃಪೂರ್ವಕವಾಗಿ ಆ ಅಂತರಜಾತೀಯ ವಿವಾಹಕ್ಕೆ ಒಪ್ಪಿಗೆ ನೀಡಿ, ಅದು ನಡೆಯಲೇಬೇಕೆಂದು ದೃಢ ನಿರ್ಧಾರ ಕೈಗೊಂಡಿತ್ತೆಂಬುದು ಒಂದು ಐತಿಹಾಸಿಕ ಸತ್ಯ. (೫) 'ಜಂಗಮ'ರನ್ನು ಸಾರಾಸಗಟಾಗಿ ವಿದೂಷಕರ, ಹೊಟ್ಟೆಬಾಕರ ಮಟ್ಟಕ್ಕೆ ಇಳಿಸಿ, ಚಿತ್ರಿಸಿರುವುದು ಅನುಚಿತ, ಇಂದಿನ 'ಜಂಗಮ' ಹುಟ್ಟಿನಿಂದ ಪುರೋಹಿತ ವರ್ಗಕ್ಕೆ ಸೇರಿದ ವೀರಶೈವ. ಆದರೆ ಹನ್ನೆರಡನೆಯ ಶತಮಾನದ 'ಜಂಗಮ' ನಿಶ್ಚಿತವಾಗಿಯೂ ಬೇರೆ. ಒಬ್ಬ ವ್ಯಕ್ತಿ ಯಾವುದೇ ಜಾತಿಯಿಂದ ಬಂದವನಾಗಿದ್ದರೂ ಸರಿಯೇ ತನ್ನ ಮನೋಧರ್ಮ ಮತ್ತು ಕ್ರಿಯೆಗಳಿಂದ ಜಂಗಮನೆಂದು ಕರೆಯಿಸಿಕೊಳ್ಳುತ್ತಿದ್ದ; ಶೂದ್ರರಿರಬಹುದು. ದಲಿತರಿರಬಹುದು. ಅವರು ಕೇವಲ ಅರ್ಹತೆಯಿಂದ, ಸಾಧನೆಯಿಂದ (ಹುಟ್ಟಿನಿಂದ ಅಲ್ಲ) ಜಂಗಮ ಸ್ಥಾನಕ್ಕೆ ಏರಬಹುದಿತ್ತು. ಶೂದ್ರನಾಗಿದ್ದ ಅಲ್ಲಮಪ್ರಭು, ದಲಿತನಾಗಿದ್ದ ಉರಿಲಿಂಗ ಪೆದ್ದಿ ಜಂಗಮರಲ್ಲದೆ ಮತ್ತೇನು ? ಬಸವಣ್ಣನವರು ಕಲ್ಯಾಣವನ್ನು ಬಿಟ್ಟಮೇಲೆ ಅವರ ಮಹಾಮನೆಯಲ್ಲಿ ಬಿಟ್ಟಿ ಪುಷ್ಕಳ ಊಟ ದೊರೆಯುತ್ತಿದ್ದುದು ತಪ್ಪಿತೆಂದು ಕೋಪಗೊಂಡು ಜಂಗಮರೆಲ್ಲ ಶೈವ ಗುರುಗಳ ಜೊತೆ, ಬ್ರಾಹ್ಮಣರ ಜೊತೆ ಸೇರಿ ಬಸವಣ್ಣನವರನ್ನು ದೂಷಿಸಲಾರಂಭಿಸಿದರೆಂದು ಕಲ್ಪಿಸಿರುವುದು ಸಾಧುವಲ್ಲ. (೬) ಬಸವಣ್ಣನವರು ಕೂಡಲ ಸಂಗಮದಲ್ಲಿ ನದಿಯಲ್ಲಿ ಮುಳುಗಿ ತಮ್ಮ ಕೊನೆಯನ್ನು ಕಂಡುಕೊಂಡರೆಂಬುದೂ ಅಸಮರ್ಥನೀಯವಾಗಿದೆ. ಮಾನಸಿಕ ಯಾತನೆ, ವೃದ್ಧಾಪ್ಯಗಳಿಂದ ಬಳಲಿದ್ದ ಅವರದು ಒಂದು ಸ್ವಾಭಾವಿಕ ಸಾವು. ತಮ್ಮ ಸಾವಿಗೆ ಮುನ್ನ ನೀಲಲೋಚನೆಯನ್ನು ಕಲ್ಯಾಣದಿಂದ ಕರೆತರಲು ಅವರು ಆಪ್ತನೊಬ್ಬನನ್ನು ಕಳಿಸಿದ್ದರು. ಇದು ಆತ್ಮಹತ್ಯೆ ಮಾಡಿಕೊಳ್ಳುವವರ ನಡವಳಿಕೆ ಅಲ್ಲ.

ನಾನು ಇಲ್ಲಿ ಇತಿಹಾಸವನ್ನು ನಾಟಕವನ್ನಾಗಿ ಪರಿವರ್ತಿಸಲು ಬಳಸಿರುವ ತಂತ್ರವನ್ನಾಗಲಿ ನಾಟಕದ ಕಲಾತ್ಮಕತೆಯನ್ನಾಗಲಿ ಪ್ರಸ್ತಾಪಿಸಿಲ್ಲ. ಸಾಹಿತ್ಯ ಕೃತಿ ಬೇರೆ, ಚರಿತ್ರೆ ಬೇರೆ ಎಂಬುದು ಎಲ್ಲರಿಗೂ ತಿಳಿದ ವಿಷಯವಾದರೂ ಚರಿತ್ರೆಯನ್ನು ಬಳಸಲು ಸಾಹಿತಿಗೆ ಅನಿಬಂಧಿತ ಸಾತಂತ್ರ್ಯವಿದೆಯೆಂದು ನಾನು ತಿಳಿದಿಲ್ಲ. ಆ ನಾಟಕ ಬಸವಣ್ಣನವರಿಗೆ ಅವರ ಸಾಮಾಜಿಕ ಚಳವಳಿಗೆ, ಇತಿಹಾಸಕ್ಕೆ (ಸತ್ಯಕ್ಕೆ) ನ್ಯಾಯವನ್ನು ಒದಗಿಸಿಲ್ಲವೆಂದೂ ಬಸವಣ್ಣನವರ ವ್ಯಕ್ತಿತ್ವವನ್ನು ಅವರ ಕಾರ್ಯವನ್ನು ಸರಿಯಾಗಿ ಚಿತ್ರಿಸುವಲ್ಲಿ ವಿಫಲವಾಗಿದೆಯೆಂದೂ ಕೆಲವೆಡೆ ವಾಸ್ತವಕ್ಕೆ ಅಪಚಾರವಾಗಿದೆಯೆಂದೂ ನಾನು ಹೇಳಲೇಬೇಕಾಗಿದೆ. ಕಲೆ ಮತ್ತು ಸತ್ಯ ಎರಡೂ ದೊಡ್ಡ ಮೌಲ್ಯಗಳೇ ಆದರೂ, ಅನಿವಾರ್ಯವಾದಲ್ಲಿ ನಾನು ಸತ್ಯದ ಕಡೆಯಿರುವವನು ಎಂದು ಹೇಳುತ್ತ ಹಿಂದೊಮ್ಮೆ ನಾನು ಆ ನಾಟಕವನ್ನು ಹೇಳಿದ್ದುಂಟು ಎಂದು ಒಪ್ಪಿಕೊಂಡು ಈ ಪತ್ರವನ್ನು ಮುಗಿಸುತ್ತೇನೆ.

—ಎಂ. ಚಿದಾನಂದಮೂರ್ತಿ

ಕಾನೂನು ದೃಷ್ಟಿಯಲ್ಲಿ ಸೋಲುವ ಮಹಾಚೈತ್ರ

ಮಹಾಚೈತ್ರ ಎಂಬ ಹೆಚ್. ಎಸ್. ಶಿವಪ್ರಕಾಶ್ ಬರೆದ ಒಂದು ನಾಟಕ ಕೃತಿ ಕಲಬುರ್ಗಿ ಮತ್ತು ಕುವೆಂಪು ವಿಶ್ವವಿದ್ಯಾಲಯಗಳ ಬಿ. ಎ. ಪದವಿ ತರಗತಿಗೆ ಪಠ್ಯವಾಗಿದ್ದು ಇದು ಇತಿಹಾಸಕ್ಕೆ ಹೊರತಾದ ಸಂಗತಿಗಳಿಂದ ಕೂಡಿದ್ದು ಕನ್ನಡ ನಾಡಿನ ಕುಲಪುರುಷ ವಿಶ್ವಗುರು ಬಸವಣ್ಣನವರು ಮತ್ತು ಅವರ ಸಮಕಾಲೀನ ಶರಣರನ್ನು ಕುರಿತು ಅವಹೇಳನಾತ್ಮಕವಾದ ಚಿತ್ರಣ ನೀಡಿದೆ ಎಂದು ಅಸಂಖ್ಯಾತ ಬಸವ ತತ್ತ್ವಾಭಿಮಾನಿಗಳು ಕರ್ನಾಟಕ ಮತ್ತು ಗಡಿನಾಡಿನಲ್ಲಿಯೂ ಸಹ ಪಠ್ಯಕ್ರಮದಿಂದ ಈ ಪುಸ್ತಕ ರದ್ದಾಗಬೇಕೆಂದು ಹೋರಾಟ ಮಾಡಿದುದು, ಈ ಚಳುವಳಿ ತೀವ್ರಗೊಂಡುದು, ಕರ್ನಾಟಕ ಸರ್ಕಾರವು ಜನಾಂದೋಲನದ ತೀವ್ರತೆ ಅರಿತು ಸ್ಪಂದಿಸಿದುದು ಎಲ್ಲರಿಗೂ ಚಿರಪರಿಚಿತವಾಗಿದೆ. ಪರಿಸ್ಥಿತಿಯ ಸೂಕ್ಷ್ಮತೆಯನ್ನು ಅರಿತು ಕರ್ನಾಟಕದ ಮುಖ್ಯಮಂತ್ರಿ ದೇವೇಗೌಡರು ಪಠ್ಯರದ್ದತಿಗೆ ಕುಲಾಧಿಪತಿಗಳಾದ ರಾಜ್ಯಪಾಲರಿಗೆ ಶಿಫಾರಸು ಮಾಡಿದುದು, ಸನ್ಮಾನ್ಯ ರಾಜ್ಯಪಾಲರು ಪಠ್ಯದಿಂದ ಪುಸ್ತಕವನ್ನು ವಾಪಸ್ಸು ಪಡೆಯಲು ಆದೇಶ ಹೊರಡಿಸಿದ್ದು ಬಹುಪಾಲು ಜನರ ಅಭಿನಂದನೆಗೆ ಪಾತ್ರವಾಗಿದೆ, ಇದು ಸೂಕ್ತ ಸಕಾಲಿಕ ಕ್ರಮವೆಂದು ವಿಚಾರಶೀಲ ಪ್ರಜೆಗಳು ಮೆಚ್ಚಿಕೊಂಡಿದ್ದಾರೆ. ಆದರೆ ಕೆಲವು ಜನರು ಸರ್ಕಾರದ ಈ ಸ್ತುತ್ಯರ್ಹ ನಿರ್ಧಾರವನ್ನು ವಿನಾಕಾರಣ ಟೀಕಿಸುತ್ತಿದ್ದಾರೆ. ಅಭಿವ್ಯಕ್ತಿ ಸ್ವಾತಂತ್ರ್ಯ, ಸೃಜನಶೀಲತೆ ಎಂಬ ಪದಗಳನ್ನು ಅರ್ಥರಹಿತವಾಗಿ ಬಳಸುತ್ತಿದ್ದಾರೆ.

ಬಸವ ಧರ್ಮಾನುಯಾಯಿಗಳಿಗೆ ನೋವನ್ನುಂಟು ಮಾಡುವ ಮತ್ತು ವಿವಾದಾಸ್ಪದವಾದ ಯಾವುದೇ ಪುಸ್ತಕವನ್ನು ಪಠ್ಯವನ್ನಾಗಿ ಮಾಡಬಾರದೆಂದು ನಿಯಮವನ್ನು ಉಲ್ಲಂಘಿಸಿರುವ ಮಹಾಚೈತ್ರದ ರದ್ದತಿ ಕಾನೂನು ದೃಷ್ಟಿಯಲ್ಲಿ ಸರಿ ಇರುವಾಗ ಇಂಥ ಆಕ್ಷೇಪಗಳನ್ನು ಎತ್ತಿ ಜನರಲ್ಲಿ ಅನವಶ್ಯಕ ಗೊಂದಲ ಉಂಟುಮಾಡುವುದಾಗಲೀ, ಸರ್ಕಾರಕ್ಕೆ ಕಿರಿಕಿರಿ ಉಂಟು ಮಾಡುವುದಾಗಲೀ ಬುದ್ಧಿಜೀವಿಗಳಿಗೆ ಸೂಕ್ತವಲ್ಲದ ಮಾರ್ಗ ಎಂದು ಸ್ಪಷ್ಟಪಡಿಸಬಯಸುತ್ತೇವೆ,

—ಆರ್. ಎಚ್. ಚಂದನಗೌಡರ್
ವಕೀಲರು, ಬೆಂಗಳೂರು.

ಸದಾಚಾರ ಸದ್ಭಕ್ತಿಯಿಲ್ಲದವರನೊಲ್ಲನಯ್ಯ
ಅವರಾರಾಧನೆ ದಂಡ !
ನಿಚ್ಚ ನಿಚ್ಚ ಪ್ರಾಯಶ್ಚಿತ್ತರ ನೊಲ್ಲ
ಕೂಡಲ ಸಂಗಮದೇವ, ಭೂಭಾರಕರ !

—ಮಂತ್ರಪುರುಷ ಬಸವಣ್ಣನವರು

ಮಹಾಚೈತ್ರದ ಹಿಂದು-ಮುಂದು

ಶ್ರೀ ಎಚ್. ಎಸ್. ಶಿವಪ್ರಕಾಶ್‌ರು ಬರೆದ 'ಮಹಾಚೈತ್ರ' ನಾಟಕವು 1986 ರಲ್ಲಿಯೇ ಪ್ರಕಟಗೊಂಡಿತು. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯೂ ಪ್ರಕಟಿಸಿತು. ಹವ್ಯಾಸಿ ಕಲಾವಿದರಿಂದ ನೂರಾರು ಪ್ರಯೋಗಗಳನ್ನು ಕಂಡಿತು. ಮೈಸೂರು ಮತ್ತು ಬೆಂಗಳೂರು ವಿಶ್ವವಿದ್ಯಾಲಯ ಗಳು ಪಠ್ಯಪುಸ್ತಕವನ್ನಾಗಿ ಪುರಸ್ಕರಿಸಿ ಕಾರ್ಯಗತಗೊಳಿಸಿದವು. ಇತ್ತೀಚೆಗೆ ಕುವೆಂಪು ಹಾಗೂ ಗುಲ್ಬರ್ಗಾ ವಿಶ್ವವಿದ್ಯಾಲಯಗಳೂ ಪಠ್ಯಪುಸ್ತಕವನ್ನಾಗಿ ಪುರಸ್ಕರಿಸಿ ಕಾರ್ಯಗತಗೊಳಿಸಿದಾಗ ವಿದ್ಯಾರ್ಥಿಗಳಿಂದ ಪ್ರತಿಭಟನೆ ಪ್ರಾರಂಭಗೊಂಡಿತು. ಮಠಾಧಿಪತಿಗಳು ಕೃತಿಯನ್ನು ಅವಲೋಕಿಸಿದರು. ಕೃತಿಯಲ್ಲಿಯ ದೋಷಗಳನ್ನು ಎತ್ತಿ ತೋರಿಸಿದರು ; ಖಂಡಿಸಿದರು. ಈ ಖಂಡನೆಗೆ ನಿರೀಕ್ಷಿತ ಫಲ ದೊರಕಲಿಲ್ಲ. ಮಠಾಧೀಶರು ಕುಪಿತಗೊಂಡು ಪಠ್ಯಪುಸ್ತಕವನ್ನು ಸಂಬಂಧಿಸಿದ ವಿಶ್ವವಿದ್ಯಾಲಯಗಳು ಹಿಂತೆಗೆದುಕೊಳ್ಳಬೇಕೆಂಬ ಬೇಡಿಕೆಯೊಂದಿಗೆ ಹೋರಾಟಕ್ಕಿಳಿದರು. ಮೊಯ್ಲಿ ಸರಕಾರ ಹೋರಾಟವನ್ನು ಪುರಸ್ಕರಿಸುವ ಹಂತದಲ್ಲಿಯೇ ಜಾರಿಕೊಂಡಿತು, ಹೋರಾಟ ಮುಂದುವರೆಯಿತು.

ಈ ಹಂತದಲ್ಲಿಯೇ ನೂರಾರು ಪ್ರಯೋಗಗಳೂ ಕಾರಣೀಭೂತರಾದ ಕೆಲವು ಸಾಹಿತಿಗಳು ಮಾತ್ರ ಮಠಾಧೀಶರ ಹೋರಾಟದ ವಿರುದ್ಧ ಧ್ವನಿ ಎತ್ತಿದರು. ಆದರೆ ಕೃತಿಯಲ್ಲಿರುವ ದೋಷಗಳಿಗೆ (ಮಠಾಧೀಶರು ಎತ್ತಿದ) ಯಾರೂ ಸಮಂಜಸ ಉತ್ತರ ಕೊಡಲಿಲ್ಲ. ಲೇಖಕರೂ ಪ್ರತಿಕ್ರಿಯೆ ನೀಡಲಿಲ್ಲ. ನನ್ನ ಸ್ನೇಹಿತನೊಬ್ಬ ಬೆಂಗಳೂರಲ್ಲಿ ಲೇಖಕರನ್ನು ಖಾಸಗಿಯಾಗಿ ಕಂಡಾಗ ಅವರು ತಮ್ಮ ಕೃತಿಯಲ್ಲಿರುವ ಕೆಲವು ದೋಷಗಳನ್ನು ಒಪ್ಪಿಕೊಂಡರು. ಅವರು ಮುಂದುವರಿದು 'ಅದೊಂದು ಕೈ ಜಾರಿದ ವಿಷಯ, ಹಿಂಜುವುದು ಬೇಡವೆಂದರು.'

ಆದರೆ ಸರಕಾರಿ ಇಲಾಖೆ, ವಿಶ್ವವಿದ್ಯಾಲಯಂದ ಬುದ್ಧಿಜೀವಿಗಳು ಹಾಗೂ ಸಮರ್ಥನೆಯಲ್ಲಿ ಪಾಲ್ಗೊಂಡ ಕೆಲ ಪ್ರಗತಿಪರ ಸಾಹಿತಿಗಳು ಈ ಲೇಖಕರ ಹಾಗೆ ಕೃತಿಯಲ್ಲಿಯ ದೋಷಗಳನ್ನು ಒಪ್ಪಿಕೊಳ್ಳುವಂತಿರಲಿಲ್ಲ. ಆಗಲೇ ಅವರೆಲ್ಲ ಬಹುದೂರ ಸಾಗಿಬಂದಿದ್ದರು. ಒಂದು ವೇಳೆ ಒಪ್ಪಿದರೆ, ಅವರು ಸ್ವತಃ ತಮ್ಮ ಮೌಢ್ಯತನವನ್ನು ಒಪ್ಪಿಕೊಂಡಂತಾಗುತ್ತಿತ್ತು. ಅದರಲ್ಲಿ ವಿದ್ಯಾರ್ಥಿಗಳ ಹಾಗೂ ಮಠಾಧೀಶರ ಸಮ್ಮುಖದಲ್ಲಿ ಅವರ ಮಾನ ಮರ್ಯಾದೆಗೆ ಚ್ಯುತಿ ಬರುತ್ತಿತ್ತು. ಇದೇ ವೇಳೆಗೆ ಸರಕಾರಿ ಇಲಾಖೆಯ ಪ್ರಕಟಣೆಯು ಹಿಂದೆ ಹಾಗೂ ಪಠ್ಯಪುಸ್ತಕವನ್ನಾಗಿ ಪುರಸ್ಕರಿಸಿದ

ಅಧ್ಯಯನ ಮಂಡಳಿಗಳ (ವಿಶ್ವವಿದ್ಯಾಲಯಗಳ) ಹಿಂದಿರುವ ಹಗರಣ ಹೊರಬೀಳುತ್ತಿತ್ತು. ಜೊತೆಗೆ ಕೃತಿಯನ್ನು ಸಮರ್ಥಿಸಿದ ಕೆಲವು ಸಾಹಿತಿಗಳ (ಪ್ರಗತಿ ಪರರೆಂದೆನಿಸಿದ) ಸ್ಥಿತಿ ಚಿಂತಾಜನಕವಾಗಿ ಸಾರ್ವಜನಿಕ ನಿಂದೆಗೆ ಗುರಿಯಾಗಬೇಕಾಗುತ್ತಿತ್ತು. ಈ ಎಲ್ಲ ಹಿನ್ನೆಲೆಯಲ್ಲಿ ಅವರಿಗೆ ಆ ಕೃತಿಯನ್ನು ಸಮರ್ಥಿಸುವುದು ತೀರ ಅವಶ್ಯವೆನಿಸಿತು.

ಕೃತಿಯ ಸಮರ್ಥನಾಕಾರರು ತಮ್ಮ ಬಲ ಸಂವರ್ಧನೆಗಾಗಿ ಇತರ ಸಾಹಿತಿಗಳ ಬೆಂಬಲ ಪಡೆಯಲು ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಮುಂದಿಡಬೇಕಾಯಿತು. ಪ್ರಚೋದನೆಯ ಕಾರ್ಯಕ್ಕೂ ಕೈಹಾಕಬೇಕಾಯಿತು. ಈ ಹಂತದಲ್ಲಿ ಲೇಖಕರೂ ತಮ್ಮ ಕೃತಿಯನ್ನು ಸಮರ್ಥಿಸುವ ಹೇಳಿಕೆ ನೀಡಬೇಕಾಯಿತು. ಹಾಗೆ ನೀಡಿಯೂ ಬಿಟ್ಟರು. ಈ ಕೃತಿಯನ್ನು ವಿರೋಧಿಸಿದರೆ ಸಂಪ್ರದಾಯದ ಹಣೆಪಟ್ಟಿ ಕಟ್ಟಿಕೊಳ್ಳುವ ಭಯ ಹಲವು ಬುದ್ಧಿ ಜೀವಿಗಳನ್ನು ಆವರಿಸಿತು. ಪರಸ್ಪರ ಹೊಗಳಿಕೆಯ ತಂತ್ರದಲ್ಲಿಯೇ ಗರಿಗೆದರಿದ ಕೆಲವು ಸಾಹಿತಿಗಳು ಪ್ರಗತಿ ಪರರ ಪ್ರಚೋದನೆಯ ಸುಳಿಗೆ ಸಿಕ್ಕಿಕೊಂಡರು. ಹೀಗೆ ಮಹಾಚೈತ್ರದ ಮಹಾನಾಟಕ ಮುಂದುವರಿಯಿತು.

ಕೃತಿಯ ಸಮರ್ಥನೆಯಲ್ಲಿ ಪಾಲ್ಗೊಂಡವರೆಲ್ಲರೂ ಲೇಖಕನ ಅಭಿವ್ಯಕ್ತಿ ಸ್ವಾತಂತ್ರ್ಯದ ಬಗೆಗೆ ಮಾತನಾಡಿದರು. ಆದರೆ ದುರ್ದೈವದ ಸಂಗತಿ ಎಂದರೆ, ಅವರು ಮಠಾಧೀಶರು ಎತ್ತಿ ತೋರಿಸಿದ ದೋಷಗಳನ್ನು ತಳ್ಳಿ ಹಾಕುವ ನೇರ ಉತ್ತರವನ್ನೇ ಕೊಡಲಿಲ್ಲ. ಸಮರ್ಥಿಸುವವರೆಲ್ಲರೂ ಅಪರಾಧದ ಅಳುಕು ಭಾವನೆಯಿಂದಲೇ ತುಟಿ ಬಿಚ್ಚಿದರು. ಕೆಲವರು-'ಕೃತಿಯಲ್ಲಿಯ ಒಂದೆರಡು ದೋಷಪೂರಿತ ವಾಕ್ಯಗಳನ್ನು ಕೈಬಿಟ್ಟರೆ ಸಾಕು ಉಳಿದದ್ದೆಲ್ಲ ಸರಿಯಾಗಿದೆ' ಎಂದರು. ಇನ್ನು ಕೆಲವರು ಕಣ್ಮುಚ್ಚಿ ಕೃತಿಯನ್ನು ಸಮರ್ಥಿಸುವ ಮೂಲಕ ಪ್ರಗತಿಪರರಾಗಿ ಮಿಂಚಿದರು.

ನಾಡಿನ ಹೆಸರಾಂತ ವಿಮರ್ಶಕರೊಬ್ಬರು ಇತ್ತೀಚೆಗೆ 'ಮಠಾಧೀಶರು ಜನತೆಗೆ ಪ್ರತಿಭಟನೆ ಮಾಡುವ ಬಾಯನ್ನು ತಯಾರು ಮಾಡಿದರು. ಆದರೆ ವಿಚಾರ ಮಾಡುವ ತಲೆಯನ್ನು ತಯಾರು ಮಾಡಲಿಲ್ಲ' ಎಂದು ಚುಚ್ಚಿ ನುಡಿದರು. ಆಶ್ಚರ್ಯದ ಸಂಗತಿಯೆಂದರೆ, 'ವಿಚಾರ ಮಾಡುವ ತಲೆಯನ್ನು ತಯಾರಿಸಬೇಕೆನ್ನುವ ಈ ತಲೆಯು ತನ್ನ ನಾಲಿಗೆಗೆ ಧ್ವನಿಕೊಟ್ಟಿದ್ದು (ಈ ವಿಷಯಕ್ಕೆ ಸಂಬಂಧಿಸಿದಂತೆ) ಇದೇ ಮೊದಲ ಸಲ! ಜೊತೆಗೆ ಮಠಾಧೀಶರು ಎತ್ತಿದ ಹಲವು ಪ್ರಶ್ನೆಗಳಿಗೆ ಒಂದು ಚಿಕ್ಕ ಉತ್ತರವಿಲ್ಲದಿರುವುದು ಗಮನಾರ್ಹ! ಹಾಗೆಯೇ ಅವರು ಹತ್ತು ವರ್ಷಗಳವರೆಗೆ ಸುಮ್ಮನಿದ್ದು ಈಗೇಕೆ ಪ್ರತಿಭಟನೆ ಎಂದೂ ಕೇಳಿದರು. ಇದು ಅನೇಕ ಮರು ಪ್ರಶ್ನೆಗಳನ್ನು ಸೃಷ್ಟಿಸುತ್ತದೆ. ಯಾವುದೇ ಕೃತಿಯ ದೋಷಗಳನ್ನು ಎತ್ತಿ ತೋರಿಸುವ ವೇಳೆಯ ಪರಿಮಿತಿ

ಹಾಕಿದ್ದಾರೆಯೇ? ಆಕಸ್ಮಿಕವಾಗಿ ಗಮನಿಸದಿದ್ದರೆ ಕೃತಿಯ ದೋಷವನ್ನು ಮನ್ನಿಸಬೇಕೆ ? ಇಂಥ ಕೃತಿಯ ದೋಷಗಳನ್ನು ಎತ್ತಿ ತೋರಿಸುವುದು ಕೇವಲ ಮಠಾಧಿಪತಿಗಳ ಜವಾಬ್ದಾರಿಯೆ? ಹೀಗೆಲ್ಲ ಪ್ರಶ್ನೆಗಳ ಸರಮಾಲೆ ಮುಂದುವರಿಯುತ್ತದೆ. ಇದು ಸಮರ್ಥನೆಯ ವಿಧಾನ ಅಲ್ಲವೇ ಅಲ್ಲ, ಕೇವಲ ಬಾಯಿ ಮುಚ್ಚಿಸುವ ವಿಧಾನ ಮಾತ್ರ. ಅವರು ಹಾಗೆಯೇ ಮುಂದುವರೆದು, ಕೃತಿಗೆ ತಮ್ಮ ಶಿಫಾರಸ್ಸು ನೀಡುತ್ತ ಇನ್ನೊಂದು ಸಮಸ್ಯೆಯನ್ನು ಹುಟ್ಟು ಹಾಕಲು ಪ್ರಯತ್ನಿಸಿದ್ದು ವಿಷಾದನೀಯ! ಅವರು ಹೇಳುತ್ತಾರೆ–'ಬಸವಣ್ಣನವರ ಬಗೆಗೆ ಈವರೆಗೆ ಬಂದ ಕೃತಿಗಳಲ್ಲೇ ಇದು ಶ್ರೇಷ್ಠವಾದುದು' ಇದು ಶ್ರೇಷ್ಠ ವಿಮರ್ಶಕರೊಬ್ಬರ ನುಡಿಯೇ ? ಪ್ರತಿಕ್ರಿಯೆ ನೀಡುವುದು ತುಂಬ ವ್ಯರ್ಥವಾದುದು. ಇದನ್ನು ಅವರ ಆತ್ಮ ವಿಮರ್ಶೆಗೆ ಬಿಟ್ಟು ಕೊಡುವುದೇ ಹೆಚ್ಚು ವಿಹಿತವೆನಿಸುತ್ತದೆ. ದೋಷ ಪೂರ್ಣವಾದ ಕೃತಿಯನ್ನು ಹೀಗೆ ಪ್ರಶಸ್ತಿಯ ಅಟ್ಟಕೇರಿಸುವ ದುಃಸ್ಸಾಹಸ ಸರಿಯಲ್ಲ. ಅವರು ತಮ್ಮ ಶಿಫಾರಸ್ಸನ್ನು ಹಿಂದೆಗೆದುಕೊಂಡು ವಿಮರ್ಶಕನ ಸ್ಥಾನಮಾನದ ಹಿರಿಮೆಯನ್ನು ಕಾಯ್ದುಕೊಳ್ಳುತ್ತಾರೆಂದು ಆಶಿಸುವೆ.

ಇನ್ನು ಕೃತಿಯನ್ನು ಸಮರ್ಥಿಸುವವರೆಲ್ಲರೂ ಗಮನಿಸಬೇಕಾದ ಅಂಶವೆಂದರೆ ವ್ಯಕ್ತಿ, ಸಂಸ್ಥೆ, ಸರಕಾರ ಮತ್ತು ಬುದ್ಧಿ ಜೀವಿಗಳು ಎಷ್ಟೇ ಎತ್ತರವಿದ್ದರೂ ತಪ್ಪು ಮಾಡುವುದು ಸಹಜ. ತಪ್ಪನ್ನು ಎತ್ತಿ ತೋರಿಸಿದ ವಿದ್ಯಾರ್ಥಿಗಳು ಎಷ್ಟೇ ಸಣ್ಣವರಾಗಿದ್ದರೂ, ದೊಡ್ಡವರ ತಪ್ಪನ್ನು ಆಕಸ್ಮಿಕವಾಗಿಯಾದರೂ ಗುರುತಿಸಬಲ್ಲರು. ಆಗ ದೊಡ್ಡವರು ತಮ್ಮ ತಪ್ಪನ್ನು ಒಪ್ಪಿಕೊಳ್ಳುವುದರಲ್ಲಿಯೇ ಅವರ ದೊಡ್ಡಸ್ತಿಕೆಯ ಗುಣವಿದೆ ಎಂಬುದನ್ನು ಮರೆಯಬಾರದು. ಒಂದು ಸಣ್ಣ ತಪ್ಪನ್ನು ಮುಚ್ಚಿಕೊಳ್ಳುವ ತವಕದಲ್ಲಿ ನಾಡಿನ ಬುದ್ಧಿಮತ್ತೆಯನ್ನೇ ಒತ್ತೆಯಾಗಿಡುವುದು ತೀರ ಕ್ಷುಲ್ಲಕತನವೆನಿಸುತ್ತದೆ.

ಈ ದೋಷಪೂರ್ಣ ಕೃತಿಯ ಸಮರ್ಥನೆಗಾಗಿ ದಲಿತ ಸಂಘರ್ಷ ಸಮಿತಿ, ಕನ್ನಡ ಸಾಹಿತ್ಯ ಪರಿಷತ್ತು, ಪ್ರಾಧ್ಯಾಪಕರ ಒಕ್ಕೂಟ ಹಾಗೂ ಇನ್ನಿತರ ಬುದ್ಧಿಜೀವಿಗಳನ್ನು ಪ್ರಚೋದಿಸುವುದರಲ್ಲಿ ಅರ್ಥವಿಲ್ಲ. ಹಾಗೆಯೇ ಪ್ರಚೋದನೆಗೆ ಒಳಗಾಗದವರು ಸಹ ತಮ್ಮ ಜವಾಬ್ದಾರಿಯನ್ನು ಅರಿತುಕೊಳ್ಳಬೇಕು. ಇದನ್ನೆಲ್ಲ ಕೈ ಬಿಟ್ಟು ಮಾತೆ ಮಹಾದೇವಿಯವರ ಪ್ರತಿಕೃತಿಯನ್ನು ದಹನ ಮಾಡುವ ಮಟ್ಟಕ್ಕೆ ಇಳಿಯುವುದು ಬುದ್ಧಿಜೀವಿಗಳ ಬೌದ್ಧಿಕ ಅಸಹಾಯಕತೆಯನ್ನು ಸೂಚಿಸುತ್ತದೆ. ಇಂಥ ಚಟುವಟಿಕೆಗಳು ತೀವ್ರ ಖಂಡನೀಯ. ಅಭಿವ್ಯಕ್ತಿ ಸ್ವಾತಂತ್ರ್ಯ ಬುದ್ಧಿಜೀವಿಗಳಿಗಷ್ಟೇ ಮೀಸಲಿಲ್ಲ.

ಮಹಾಚೈತ್ರವನ್ನು ಸಮರ್ಥಿಸಿದವರೆಲ್ಲರೂ ಬುದ್ಧಿಜೀವಿಗಳಲ್ಲ, ಪ್ರಗತಿಪರರಲ್ಲ. ಹಾಗೆಯೇ ವಿರೋಧಿಸಿದವರೆಲ್ಲರೂ ಸಂಪ್ರದಾಯ ವಾದಿಗಳಲ್ಲ. ಇತಿಹಾಸ

ಯಾರ ಸೊತ್ತೂ ಅಲ್ಲ. ಅದನ್ನು ತಿರುಚುವುದು ಮಾತ್ರ ಬೌದ್ಧಿಕ ವ್ಯಭಿಚಾರವೇ ಸರಿ. ಈಗಲಾದರೂ ಕಾಲ ಮಿಂಚಿಲ್ಲ. ಬುದ್ಧಿಜೀವಿಗಳು ತಮ್ಮ ಘನತೆ, ಗೌರವಗಳಿಗೆ ಕಟ್ಟುಬೀಳದೆ, ಮಹಾಚೈತ್ರ ಕೃತಿಯನ್ನು ಸರಿಯಾಗಿ ಓದಲಿ, ಮಕ್ಕಳ ಮುಂದಿರುವ ಪಠ್ಯ ಪುಸ್ತಕ ಹೇಗಿರಬೇಕು ಎಂಬುದನ್ನು ಯೋಚಿಸಲಿ, ವಿಶ್ವವಿದ್ಯಾಲಯಗಳ ಪಠ್ಯ ಪುಸ್ತಕವನ್ನು ಹಿಂದೆಗೆದುಕೊಳ್ಳುವ ಪ್ರಸಂಗ ಇದೇ ಮೊದಲಿನದೇನಲ್ಲ. ಅದಕ್ಕಾಗಿ ವಿಷಾದಿಸುವ ಅಗತ್ಯವೂ ಇಲ್ಲ.

ಪ್ರೊ. ಬಿ. ಎಂ. ಬಿರಾದಾರ
ಪ್ರಿನ್ಸಿಪಾಲರು
ಜಿ. ಪಿ. ಪೋರವಾಲ ಕಾಲೇಜು
ಸಿಂದಗಿ

ವಿಶ್ವಗುರು ಬಸವಣ್ಣನವರ ಜೀವನದ ಕೆಲವು ವಿವರಗಳು

—ಮಾತಾಜಿ

1. ಧರ್ಮಪಿತ ಬಸವಣ್ಣನವರ ಜನನ–ಆನಂದನಾಮ ಸಂವತ್ಸರ ವೈಶಾಖ ಮಾಸದ ಅಕ್ಷಯ ತೃತೀಯಾದಂದು, ರೋಹಿಣಿ ನಕ್ಷತ್ರದಲ್ಲಿ ಕ್ರಿ. ಶ. 1134.
2. ಮನೆಯಿಂದ ಬಾಲಕನ ನಿರ್ಗಮನ–ಸಂಗಮಕ್ಕೆ ಆಗಮನ. ದುಂದುಭಿ ನಾಮ ಸಂವತ್ಸರ ಕ್ರಿ.ಶ. 1142.
3. ವಿದ್ಯಾಭ್ಯಾಸ ಪೂರೈಸಿ, ಮೂರೇಳು (21) ವಯಸ್ಸಿನವರೆಗೆ ಇದ್ದು ಕೂಡಲಸಂಗಮದಿಂದ ದೇವನ ಕೃಪೆಯನ್ನು ಅವತೀರ್ಣ ಮಾಡಿಕೊಂಡು ದೇವರ ಆದೇಶವನ್ನು ಹೊತ್ತು ಮಂಗಳವಾಡಕ್ಕೆ ಹೋದುದು. ಶ್ರೀಮುಖ ಸಂವತ್ಸರದಲ್ಲಿ ಕ್ರಿ. ಶ. 1153. ಸೋದರ ಮಾವ ಬಲದೇವರಸರ ಪುತ್ರಿ ನೀಲಗಂಗಳನ್ನು ವಿವಾಹವಾಗಿ ಕರಣಿಕ ಕಾಯಕವನ್ನು ಆಗಲೇ ಕೈಗೊಂಡರು.
4. ಚಾಲುಕ್ಯ ದೊರೆ ತೈಲಪನು ಕಾಕತೀಯ ಪ್ರೋಲನಿಗೆ ಸೋತು (ಕ್ರಿ.ಶ. 1155) ತನ್ನ ಮಾಂಡಲಿಕ ಬಿಜ್ಜಳನ ನೆರವು ಪಡೆಯಲು ಆರಂಭಿಸಿದನು. ಬಿಜ್ಜಳನು ಕ್ರಿ.ಶ. 1155 ರಿಂದ ನಿಧಾನವಾಗಿ ಬಲವರ್ಧನೆ ಮಾಡಿಕೊಳ್ಳುತ್ತ, ಕಲ್ಯಾಣದಲ್ಲಿಯೇ ಇರತೊಡಗಿ ತನ್ನ ಆಡಳಿತವನ್ನೂ ಮಂಗಳವಾಡದಿಂದ ಕಲ್ಯಾಣಕ್ಕೆ ವರ್ಗಾಯಿಸತೊಡಗಿದನು.

ಧರ್ಮಕರ್ತರಾದ ಶ್ರೀ ಗುರು ಬಸವಣ್ಣನವರು ಮಂಗಳವಾಡದಿಂದ ಕಲ್ಯಾಣಕ್ಕೆ

ಬಂದುದು ಕಲಿವರ್ಷದ 4192, ವಿಕ್ರಮನಾಮ ಸಂವತ್ಸರ ಶ್ರಾವಣ ಶುದ್ಧ ಪಂಚಮಿ ಸೋಮವಾರ ದಿವಸದ, ಅರುಣೋದಯದ ಕಾಲದಲ್ಲಿ ಕಲ್ಯಾಣವನ್ನು ಪ್ರವೇಶಿಸಿದರು. ಕ್ರಿ. ಶ. 1160.

ಬಿಜ್ಜಳನು ಅಧಿಕೃತವಾಗಿ ಚಕ್ರವರ್ತಿ ಎಂದು ಘೋಷಿಸಿಕೊಂಡುದು ಕ್ರಿ. ಶ. 1162–ಚಿತ್ರಭಾನು ಸಂವತ್ಸರದಲ್ಲಿ.

5. ಧಾರ್ಮಿಕ ಚಟುವಟಿಕೆ, ಪ್ರಚಾರ ಕಾರ್ಯಕ್ರಮವನ್ನು ಶ್ರೀ ಗುರು ಬಸವ ತಂದೆಯವರು ಬೇಗನೇ ಆರಂಭಿಸಿದರೂ, ಅನುಭವ ಮಂಟಪಕ್ಕೆ ಸಾಂಸ್ಥಿಕ ರೂಪ ಬಂದು ಅದು ನಿರ್ಮಾಣವಾದುದು, ಶ್ರೀ ಗುರುವು ಕಲ್ಯಾಣಕ್ಕೆ ಆಗಮಿಸಿದ 9 ವರ್ಷಗಳ ಬಳಿಕ ಕ್ರಿ. ಶ. 1169 ಸರ್ವಧಾರಿನಾಮ ಸಂವತ್ಸರದಲ್ಲಿ.

6. ಚಿನ್ಮಯ ಜ್ಞಾನಿ ಚನ್ನಬಸವಣ್ಣನವರ ಜನನ ನಂದನ ನಾಮ ಸಂವತ್ಸರದ ವೈಶಾಖ ಮಾಸದಲ್ಲಿ, ಶುದ್ಧ ಪಾಡ್ಯ ಮಂಗಳವಾರದಂದು ಕೃತ್ತಿಕಾ ನಕ್ಷತ್ರದಲ್ಲಿ ಕ್ರಿ. ಶ. 1172.

7. ಅಲ್ಲಮ ಪ್ರಭು–ಸಿದ್ಧರಾಮರ ಆಗಮನ ಕ್ರೋಧೀ ನಾಮ ಸಂವತ್ಸರ. ಕ್ರಿ.ಶ. 1184.

8. ಅಲ್ಲಮ ಪ್ರಭುದೇವರ ಶೂನ್ಯ ಪೀಠಾರೋಹಣ ವಿಶ್ವಾವಸು ಸಂವತ್ಸರ, ಚೈತ್ರ ಶುದ್ಧ ಪಾಡ್ಯ, ಯುಗಾದಿ ದಿವಸ, ಸೋಮವಾರದಂದು, ರೇವತಿ ನಕ್ಷತ್ರದಲ್ಲಿ ಕ್ರಿ. ಶ. 1185.

9. ಚನ್ನಬಸವಣ್ಣನವರಿಗೆ ಶೂನ್ಯ ಪೀಠದ ಅಧಿಕಾರ ಹಸ್ತಾಂತರವಾದುದು ರಾಕ್ಷಸ ನಾಮ ಸಂವತ್ಸರದ ಕಾರ್ತೀಕ ಶುದ್ಧ ಪಂಚಮಿಯಂದು ಕ್ರಿ.ಶ. 1195.

10. ವರ್ಣಾಂತರ ವಿವಾಹ ನಡೆದುದು ರಾಕ್ಷಸ ನಾಮ ಸಂವತ್ಸರದ ಫಾಲ್ಗುಣ ಮಾಸದಲ್ಲಿ.

11. ವರ್ಣಾಂತರ ವಿವಾಹವನ್ನು ಮಾಡಿಸಿದ್ದಕ್ಕಾಗಿ ಧರ್ಮಪಿತ ಬಸವಣ್ಣನವರಿಗೆ ಗಡಿಪಾರು ಶಿಕ್ಷೆಯಾಗಿ ಅವರು ಕಲ್ಯಾಣದಿಂದ ನಿರ್ಗಮಿಸಿದುದು. ರಾಕ್ಷಸನಾಮ ಸಂವತ್ಸರದ ಫಾಲ್ಗುಣ ಮಾಸದ ಶುದ್ಧ ದ್ವಾದಶಿಯಂದು, ಚಂದ್ರವಾರದ ದಿವಸ. ಹರಳಯ್ಯ–ಮಧುವರಸ–ಶೀಲವಂತರ ಬಂಧನ ಮತ್ತು ಕ್ಷಿಪ್ರ ವಿಚಾರಣೆ ತ್ರಯೋದಶಿಯಂದು. ಶರಣರಿಗೆ ಎಳೆಹೂಟೆ ಶಿಕ್ಷೆಯಾದುದು ಚತುರ್ದಶಿಯಂದು. ಜನರು ಮತ್ತು ಸೈನಿಕರ ನಡುವೆ ಬೀದಿ ಬೀದಿಗಳಲ್ಲಿ ಘರ್ಷಣೆ ಆರಂಭವಾಗಿ ಬಿಜ್ಜಳನು ಜಗದೇವ ಮೊಲ್ಲೆಬೊಮ್ಮರಿಂದ

ಹತನಾದದು ಫಾಲ್ಗುಣ ಮಾಸದ ಹುಣ್ಣಿಮೆ ಅಂದರೆ ಹೋಳಿ ಹುಣ್ಣಿಮೆಯಂದು, ಸೂರ್ಯಾಸ್ತವಾದ ಮೇಲೆ ಕ್ರಿ.ಶ. 1196.

12. ಶ್ರೀ ಗುರು ಬಸವಣ್ಣನವರು ಲಿಂಗೈಕ್ಯರಾದುದು ನಳನಾಮ ಸಂವತ್ಸರದ ಶ್ರಾವಣ ಶುದ್ಧ ಪಂಚಮಿ, ಮಂಗಳವಾರ. ಇಚ್ಛಾಮರಣದ ಪ್ರಕ್ರಿಯೆ ಬೆಳಗ್ಗೆ ಆರಂಭವಾದರೂ ಅದು ಸಂಪೂರ್ಣಗೊಂಡು ಆತ್ಮವು ಬಿಡುಗಡೆಗೊಂಡುದು ಸೂರ್ಯಾಸ್ತದ ಸಮಯದಲ್ಲಿ [ಅಂದರೆ ಸೂರ್ಯೋದಯವಾದ 28 ಗಳಿಗೆಗೆ] ಸಂಜೆ ಸುಮಾರು 5-30 ಕ್ಕೆ ಕ್ರಿ. ಶ. 1196 ಆನಂದನಾಮ ಸಂವತ್ಸರದ ವೈಶಾಖ ಮಾಸದ ಅಕ್ಷಯ ತೃತೀಯಾದಂದು ಜನಿಸಿದ ಬಸವಣ್ಣನವರು [ಕ್ರಿ.ಶ. 1134] ನಳನಾಮ ಸಂವತ್ಸರದ ಶ್ರಾವಣ ಶುದ್ಧ ಪಂಚಮಿಯಂದು [ಕ್ರಿ.ಶ. 1196] ಬಯಲಾದರು. ಅವರ ಜೀವಿತಾವಧಿ 62 ವರ್ಷ 3 ತಿಂಗಳು ಎರಡು ದಿವಸ.

13. ಚನ್ನಬಸವಣ್ಣನವರು ಬಿಜ್ಜಳನ ವಧೆಯಾದ ಮರುದಿವಸವೇ ಸಾಹಿತ್ಯ ಸಂರಕ್ಷಣೆಗಾಗಿ ಕಲ್ಯಾಣದಿಂದ ಹೊರಟರು. ಅವರು ಉಳಿವೆಯನ್ನು ಬಂದು ಸೇರಿದುದು ವೈಶಾಖ ಬಹುಳ ಬಿದಿಗೆ ಬುಧವಾರ ರೋಹಿಣಿ ನಕ್ಷತ್ರದಲ್ಲಿ. ಅವರ ಜೊತೆಗೆ ಸುಮಾರು 12000 ಜಂಗಮರು ಇದ್ದರು.

14. ಮುರಗೋಡು ಯುದ್ಧದಲ್ಲಿ ಜಯಶಾಲಿಗಳಾದ ಸಂಗತಿಯನ್ನು ಬಸವಣ್ಣನವರಿಗೆ ತಿಳಿಸಲು ಹೋಗಿ, ಅವರು ಆಗಲೇ ಲಿಂಗೈಕ್ಯರಾದುದನ್ನು ತಿಳಿದು, ಕೊಂಡಾಡಿ ವಾಪಸ್ಸು ಬಂದು ಮಡಿವಾಳ ಮಾಚಿದೇವರು ಉಳವಿಯತ್ತ ಸಾಗುತ್ತಿರುವಾಗಲೇ ಲಿಂಗೈಕ್ಯರಾದುದು ಕಾರ್ತೀಕ ಶುದ್ಧ ಪೌರ್ಣಮಿ ಮಂಗಳವಾರದಂದು. ಅದೇ ಸಮಯಕ್ಕೆ ಅತ್ತ ಬಂದ ಜಗದೇವ–ಮಲ್ಲೆಬೊಮ್ಮರು ಗೊಡಚಿ ಗಿಡದ ಬಳಿ ಉತ್ತರ ದಿಕ್ಕಿನಲ್ಲಿ ಮಾಚಿದೇವರ ಸಮಾಧಿ ಕ್ರಿಯೆ ಪೂರೈಸಿ, ಉಳಿವೆಯತ್ತ ಸಾಗಿದರು. ಕ್ರಿ. ಶ. 1196.

15. ಚನ್ನಬಸವಣ್ಣನವರು ಉಳಿವೆಯಲ್ಲಿ ಲಿಂಗೈಕ್ಯರಾದುದು ಕಾರ್ತೀಕ ಶುದ್ಧ ಪೌರ್ಣಮೆಯಂದು. ಕ್ರಿ.ಶ. 1196. [ದುರ್ಗಮ ಅರಣ್ಯ ಪ್ರದೇಶವಾಗಿರುವುದರಿಂದಲೂ ಆ ಸಮಯದಲ್ಲಿ ನದಿ–ಹಳ್ಳಗಳನ್ನೂ ದಾಟುವುದು ಕಷ್ಟಸಾಧ್ಯವಿದ್ದುದರಿಂದಲೂ ಮಾಘ ಪೌರ್ಣಮೆಯಂದು ರಥೋತ್ಸವವನ್ನು ನಡೆಸಿಕೊಂಡು ಬರಲಾಗುತ್ತಿದೆ.] ಚನ್ನಬಸವಣ್ಣನವರ ಜೀವಿತಾವಧಿ 24 ವರ್ಷಗಳು.

ಬರಹ :

ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ
ಬಸವ ಧರ್ಮಪೀಠ, ಕೂಡಲ ಸಂಗಮ,

॥ ಓಂ ಶ್ರೀ ಗುರು ಬಸವಲಿಂಗಾಯ ನಮಃ ॥



ವಿಶ್ವಗುರು ಬಸವಣ್ಣನವರ
೮೬೨ ನೆಯ ಜಯಂತಿ ಉತ್ಸವದ
ಶನಿವಾರ ದಿ. 13-5-1995 ರ
ಮೆರವಣಿಗೆಯಲ್ಲಿ ಭಾಗವಹಿಸಲು ಕರೆ

ಶರಣ ಬಂಧುಗಳೇ,

ಪರಮಾತ್ಮನ ಕರುಣೆಯ ಕಂದರಾಗಿ ವಿಶ್ವಗುರು ಬಸವಣ್ಣನವರು ಆನಂದನಾಮ ಸಂವತ್ಸರದ [ಕ್ರಿ.ಶ. 1134] ವೈಶಾಖ ಮಾಸದ ಅಕ್ಷಯ ತೃತೀಯಾದಂದು ರೋಹಿಣಿ ನಕ್ಷತ್ರದಲ್ಲಿ ಜನಿಸಿದರು. 1995 ನೆಯ ಸಾಲಿನ **"ಬಸವ ಜಯಂತಿ"**ಯು ಮೇ 2 ನೇ ತಾರೀಖಿನಂದು ಒದಗಿ ಬಂದಿದೆ. ಅಂದು ಪ್ರತಿಯೊಬ್ಬರೂ ತಂತಮ್ಮ ಮನೆಗಳಲ್ಲಿ "ಬಸವ ಜಯಂತಿ"ಯ ಪೂಜೆಯನ್ನು ಮಾಡಬೇಕು. ನಡು ಮನೆಯಲ್ಲಿ ಸುಂದರ ಮಂಟಪ ಕಟ್ಟಿ ಬಸವ ಭಾವಚಿತ್ರವನ್ನಿಟ್ಟು ಅಲಂಕರಿಸಿ ಪೂಜೆಯನ್ನು ಮಾಡಬೇಕು. ಸಾಮೂಹಿಕವಾಗಿ ಬಸವ ಮಂಟಪ ಬಸವಣ್ಣನ ಗುಡಿ, ಮುಂತಾದ ಸಮುದಾಯ ಭವನಗಳಲ್ಲಿ ಬಸವ ತತ್ತ್ವಾಭಿಮಾನಿಗಳೆಲ್ಲರೂ ಒಟ್ಟಾಗಿ ಸೇರಿ ಪೂಜಾ ವ್ರತ, ತೊಟ್ಟಿಲು ಕಾರ್ಯಕ್ರಮ, ಮುಂತಾಗಿ ಮಾಡಿ ಪ್ರಸಾದ ವಿತರಣೆಯನ್ನು ಮಾಡಬೇಕು. ಬಸವ ಜಯಂತಿ ಸಭೆ–ಸಮಾರಂಭಗಳನ್ನು ಅನುಕೂಲವಾದ ವೇಳೆಯಲ್ಲಿ ಇರಿಸಿಕೊಳ್ಳಬಹುದು.

ಅಖಿಲ ಭಾರತ ಬಸವ ಧರ್ಮ ತೃತೀಯ ಸಮ್ಮೇಳನವನ್ನು 1995 ರ ಮೇ 12, 13, 14 ರಂದು ಬೆಂಗಳೂರಿನಲ್ಲಿ ಮಲ್ಲೇಶ್ವರಮ್ ಮೈದಾನದಲ್ಲಿ ಏರ್ಪಡಿಸಲಾಗಿದ್ದು, ದಿ. 13-5-1995 ರಂದು 862 ನೆಯ **"ಬಸವ ಜಯಂತಿ"** ಉತ್ಸವವು ಜರುಗಲಿದೆ. ಬೆಳಿಗ್ಗೆ 10 ಗಂಟೆಗೆ ಸಭೆಯಿದ್ದು, ಸಭೆಯ ನಂತರ ಎಲ್ಲ ಶರಣ ಬಂಧುಗಳಿಗೆ ಊಟದ ವ್ಯವಸ್ಥೆಯಿದೆ. ಮಧ್ಯಾಹ್ನದ ಪ್ರಸಾದವನ್ನು ಸ್ವೀಕರಿಸಿದ ಶರಣರು ಮೆರವಣಿಗೆಯಲ್ಲಿ ಭಾಗಿಗಳಾಗಬೇಕು.

ಬೆಂಗಳೂರಿನ ಕೇಂದ್ರ ಭಾಗವಾದ ಮೆಜೆಸ್ಟಿಕ್ [ಸುಭಾಷ್ ನಗರ]ಗೆ ಹೊಂದಿಕೊಂಡಿರುವ ಚಿಕ್ಕಲಾಲ್‌ಬಾಗ್ [ತುಳಸಿ ತೋಟ] ದಿಂದ ಮೆರವಣಿಗೆಯು ಹೊರಡುವುದು. ಮಧ್ಯಾಹ್ನ 3–30 ಕ್ಕೆ ಹೊರಡುವ ಮೆರವಣಿಗೆಯು ಆನಂದರಾವ ವೃತ್ತದ ಮೂಲ ಹಾಯ್ದು ಶಿವಾನಂದ ಸ್ಟೋರ್ಸ್, ಸ್ವಸ್ತಿಕ್ ಟಾಕೀಸ್, ಸೆಂಟ್ರಲ್-ಟಾಕೀಸ್ ಮಾರ್ಗವಾಗಿ, ಮಲ್ಲೇಶ್ವರಂ ವೃತ್ತದಲ್ಲಿ ಹಾಯ್ದು ಮೈದಾನವನ್ನು ಸೇರಬೇಕು. ಮೆರವಣಿಗೆಯ ಮಧ್ಯದಲ್ಲಿ ಕುಡಿಯುವ ತಣ್ಣೀರು, ಮಜ್ಜಿಗೆ ಮುಂತಾಗಿ ವ್ಯವಸ್ಥೆ ಮಾಡಲಾಗುವುದು.

ಬಸವ ಜಯಂತಿಯ ಈ ಮೆರವಣಿಗೆಯಲ್ಲಿ ಅತ್ಯಂತ ಹೆಚ್ಚಿನ ಸಂಖ್ಯೆಯಲ್ಲಿ ಶರಣ ಬಂಧುಗಳು ಭಾಗವಹಿಸಬೇಕೆಂದು ಕೋರುತ್ತೇವೆ.

1. ವಿವಿಧ ಸಂಘ-ಸಂಸ್ಥೆಗಳವರು ತಂತಮ್ಮ ಸಂಸ್ಥೆಯ ಹೆಸರಿನ ಬ್ಯಾನರ್, ನಾಮ ಫಲಕಗಳನ್ನು ಹಿಡಿದಿರಬೇಕು.
2. ವಿವಿಧ ರಾಷ್ಟ್ರೀಯ ಬಸವದಳಗಳವರು ತಮ್ಮ ತಮ್ಮ ಬ್ಯಾನರ್‌ಗಳನ್ನು ಹಿಡಿದಿರಬೇಕು.
3. ಎಲ್ಲರೂ ಬಿಳಿಯ ವಸ್ತ್ರಗಳನ್ನು ಧರಿಸಿ, ಕಾವಿಯ ಬಣ್ಣದ ಸ್ಕಾರ್ಫ್ ಹೆಗಲ ಮೇಲೆ ಹಾಕಿಕೊಂಡು, ಶರಣರು ತಲೆಯ ಮೇಲೆ ಬಸವಲಿಂಗ ಮುದ್ರೆಯ ಟೋಪಿ ಹಾಕಬೇಕು ಮತ್ತು ಲೋಹದ ಬ್ಯಾಡ್ಜನ್ನು ಮೇಲೆ ಮುಂಭಾಗದಲ್ಲಿ ಕಾಣುವಂತೆ ಹಾಕಬೇಕು.
4. ರಾಷ್ಟ್ರೀಯ ಬಸವ ದಳದ ಶರಣರಿಗೆ ಬಿಳಿಯ ನೆಹರೂ ಷರ್ಟ್-ಕುರ್ತಾ ಪೈಜಾಮವನ್ನು ಸಮವಸ್ತ್ರವನ್ನಾಗಿ ಮಾಡಲಾಗಿದೆ. ಆದ್ದರಿಂದ ಬಿಳಿಯ ಕುರ್ತಾ-ಪೈಜಾಮ (ನೆಹರೂ ಡ್ರೆಸ್ಸು) ಗಳನ್ನು ತೊಟ್ಟು ಕಾವಿಯ ಸ್ಕಾರ್ಫ್ ಹೊದೆಯಬೇಕು. ಈ ವೇಷದ ಅಭ್ಯಾಸ ಇಲ್ಲದವರು ಬಿಳಿಯ ಧೋತ್ರ, ಪ್ಯಾಂಟ್ ಮುಂತಾಗಿ ತೊಟ್ಟುಕೊಳ್ಳಬಹುದು. ಎಲ್ಲರಿಗೂ ಸ್ಕಾರ್ಫ್ ಕಡ್ಡಾಯ.
5. ವಿವಿಧ ಸಂಘ-ಸಂಸ್ಥೆ, ರಾಷ್ಟ್ರೀಯ ಬಸವದಳಗಳವರು ಮೆರವಣಿಗೆಯಲ್ಲಿ ಭಜನಾ ಕಾರ್ಯಕ್ರಮ, ವೀರಗಾಸೆ ಕುಣಿತ ಮುಂತಾದ ಪ್ರದರ್ಶನ ನೀಡಬಹುದು. ಸ್ತಬ್ಧ ಚಿತ್ರಗಳನ್ನು ವಾಹನಗಳ ಮೇಲೆ ಏರ್ಪಡಿಸಿಕೊಳ್ಳಬಹುದು. ವಿಶೇಷ ಕಾರ್ಯಕ್ರಮ ನೀಡುವುದಾದರೆ ಮೊದಲೇ ತಿಳಿಸಬೇಕು.

ಅತ್ಯಂತ ಶಿಸ್ತಿನಿಂದ, ಜಯ ಘೋಷಗಳನ್ನು ಕೂಗುತ್ತ, ವಚನ ವಾಕ್ಯಗಳನ್ನು ಹಾಡುತ್ತಾ ಮೆರವಣಿಗೆಯಲ್ಲಿ ಸಾಗಬೇಕು. ದ್ವಿಚಕ್ರ ವಾಹನ ಉಳ್ಳವರು ವಾಹನ ಸಹಿತವಾಗಿ ಪಥ ಸಂಚಲನದ ಇಕ್ಕೆಲ್ಲಗಳಲ್ಲಿ ಸಾಗಬೇಕು. ಆ ದ್ವಿಚಕ್ರ ವಾಹನಗಳಿಗೆ ಕಾವಿಯ ಧ್ವಜವನ್ನು ಕಟ್ಟಬೇಕು. ಧ್ವಜಗಳು ಮೆರವಣಿಗೆ ಹೊರಡುವ ಸ್ಥಳಗಳಲ್ಲಿ ಲಭ್ಯವಿರುತ್ತವೆ. ಮೆರವಣಿಗೆಯಲ್ಲಿ ಪೂಜ್ಯ ಸ್ವಾಮಿಗಳವರ ಕಾರುಗಳನ್ನು ಬಿಟ್ಟರೆ ಉಳಿದವರ ಕಾರುಗಳು ಸಂಚರಿಸಲು ಅವಕಾಶ ಸಿಕ್ಕದು. ತುಂಬಾ ಜಾಗವನ್ನು ಕಾರು

ಮತ್ತು ವಾಹನಗಳು ಆಕ್ರಮಿಸುವುದರಿಂದ ಅನಿವಾರ್ಯವಾಗಿ ಈ ನಿರ್ಧಾರ ಕೈಗೊಳ್ಳಬೇಕಾಗುವುದು.

ಮೆರವಣಿಗೆ ಮಲ್ಲೇಶ್ವರಂ ಮೈದಾನ ತಲ್ಪಿದ ಮೇಲೆ ಅಲ್ಪ ವಿರಾಮ, ಚಹಾ ಪಾನಕ್ಕೆ ವ್ಯವಸ್ಥೆ ಇರುವುದು. ನಂತರ ಮುಖ ಕೈಕಾಲು ತೊಳೆದುಕೊಂಡು ಪೂಜಾ ಸಾಮಾಗ್ರಿಗಳೊಡನೆ ಬಂದು ಕುಳಿತು ಸಂಜೆ 6-30 ರಿಂದ ಸಾಮೂಹಿಕ ಇಷ್ಟಲಿಂಗಾರ್ಚನೆಯಲ್ಲಿ ಭಾಗವಹಿಸಬೇಕು. ಕುಳಿತು ಪೂಜೆ ಮಾಡಲಾಗದವರು ಹಾಗೆಯೇ ನೋಡಿ ಕಲಿಯಬಹುದು. ಇಷ್ಟಲಿಂಗ ಪೂಜೆ ಲಿಂಗಾಯತ ಧರ್ಮದ ಜೀವಾಳ. ಅತ್ಯಂತ ಶ್ರೇಷ್ಠ ಕ್ರಿಯೆ. ದೇಹದ ಮೇಲೆ ದೇವನನ್ನು ಧರಿಸಿಕೊಂಡು ಪೂಜಿಸುವ ಮಹಾನ್ ಭಾಗ್ಯ ಧರ್ಮಗುರು ಬಸವಣ್ಣನವರ ಕೃಪೆಯಿಂದ ಲಿಂಗವಂತರಿಗೆ ಪ್ರಾಪ್ತಿಯಾಗಿದೆ. ಎಲ್ಲ ಶರಣ ಬಂಧುಗಳು ಸಂಕಲ್ಪಿಸಿ ದೇಶದ ಹಿತವನ್ನು ಬಯಸಿ ಈ ಸಾಮೂಹಿಕ ಇಷ್ಟಲಿಂಗಾರ್ಚನೆ ಮತ್ತು ಮಂತ್ರಜಪ ಮಾಡಿ ಅತ್ಯಂತ ಪ್ರಗತಿ ಪರವಾದ ಒಂದು ಆಚರಣೆಯನ್ನು ಜಗತ್ತಿಗೆ ಮತ್ತು ಬಹುಪಾಲು ಲಿಂಗವಂತ ಧರ್ಮೀಯರಿಗೆ ಮನವರಿಕೆ ಮಾಡಿಕೊಡಬೇಕಾಗಿದೆ. ಆದ್ದರಿಂದ ಎಲ್ಲರೂ ಬಟ್ಟಲು-ಲೋಟ, ಪತ್ರೆ-ಪುಷ್ಪ, ವಿಭೂತಿ, ಕಲ್ಲು ಸಕ್ಕರೆ ಮುಂತಾದ ಸಾಮಗ್ರಿಗಳೊಡನೆ ಬಂದು ಇಷ್ಟಲಿಂಗಾರ್ಚನೆಯಲ್ಲಿ ಭಾಗವಹಿಸಬೇಕು. ನೀರು, ಗಂಧ, ಅಕ್ಷತೆಗಳನ್ನು ಸಮಿತಿಯವರು ಒದಗಿಸುವರು.

ಈ ಎಲ್ಲ ಕಾರ್ಯಕ್ರಮಗಳಲ್ಲಿ ಶರಣ ಬಂಧುಗಳು ಹೆಚ್ಚಿನ ಆಸಕ್ತಿಯಿಂದ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕೆಂದು ಕೋರುತ್ತೇವೆ.

— ಶರಣರ ಬರವೆಮಗೆ ಪ್ರಾಣ ಜೀವಾಳ —

ಶರಣ ಎನ್. ಪುಟ್ಟರುದ್ರಪ್ಪ	**ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ**
ಪ್ರಧಾನ ಕಾರ್ಯದರ್ಶಿ	ಕಾರ್ಯಾಧ್ಯಕ್ಷೆ

ಕಾರ್ಯಾಲಯದ ವಿಳಾಸ :

ಅಖಿಲ ಭಾರತ ಬಸವ ಧರ್ಮ ತೃತೀಯ ಸಮ್ಮೇಳನ ಸಮಿತಿ

ಬಸವ ಮಂಟಪ, 2035, 20ನೇ ಮೇಯಿನ್, 2ನೇ ಬ್ಲಾಕು,
ರಾಜಾಜಿನಗರ, ಬೆಂಗಳೂರು-560010,
ದೂರವಾಣಿ : 3325335

'ಅಧಿಕ ಪ್ರಸಂಗ ಬೇಡ'

ಮಾನ್ಯರೇ,

ಬಸವದಳವೆಂಬುದರ ವತಿಯಿಂದ ಮಾತೆಮಹಾದೇವಿಯೆಂಬವರು ಪ್ರತಿಭಟನೆ ಯನ್ನು ಹುಟ್ಟುಹಾಕಿ ಗೊಂದಲವೆಬ್ಬಿಸಿ ಮಹಾಚೈತ್ರ ಪಠ್ಯವು ರದ್ದಾಯಿತಲ್ಲ? ಈಗ ಅವರದ್ದೊಂದು ಹೇಳಿಕೆಯೂ ಪತ್ರಿಕೆಗಳಲ್ಲಿ ಬಂದಿದೆ. ಸದರಿ ದಳವು ತಜ್ಞರ ಸಮಿತಿ ಯೊಂದನ್ನು ನೇಮಿಸಿದೆಯಂತೆ; ಸದರಿ ಸಮಿತಿಯು ಬಸವ ಮತ್ತು ಇನ್ನಿತರ ಶರಣರ ಸಾಹಿತ್ಯದಲ್ಲಿ ಯಾವಯಾವ ಭಾಗಗಳನ್ನು ಪಠ್ಯವಾಗಿ ನೇಮಿಸಬಹುದೆಂದು ತೀರ್ಮಾನಿಸಿ ವಿಶ್ವವಿದ್ಯಾನಿಲಯಗಳಿಗೆ ತಿಳಿಸುತ್ತದಂತೆ. ಈ ವರದಿಯು ನಿಜವಾಗಿದ್ದರೆ, ಇದೀಗ ಪಿತ್ತವು ಮಸ್ತಿಷ್ಕಕ್ಕೆ ಏರಿಕೊಂಡಿತು ಅಂತ ತಿಳಿಯಬಹುದು.

ತಮ್ಮ ಮಿತಿಯಾಗಲಿ ಅನ್ಯರ ಹಕ್ಕುಗಳಾಗಲಿ ತಿಳಿಯದವರಿರುತ್ತಾರೆ. ಇರಲಿ, ಸಂದರ್ಭದಲ್ಲಿ ಪ್ರತಿಯಾಗಿ ಅವರಿಗೆ ಎಚ್ಚರ ಹೇಳದಿದ್ದರೆ ಸರಿಯಲ್ಲ. ಕರ್ನಾಟಕದಲ್ಲಿರುವ ಎಲ್ಲ ವಿಶ್ವವಿದ್ಯಾನಿಲಯಗಳೂ ಕನ್ನಡ ಭಾಷೆಯಲ್ಲಿ ಬಂದಿರುವ ಎಲ್ಲಾ ವಾಙ್ಮಯವೂ ಎಲ್ಲಾ ಕನ್ನಡಿಗರ ಸೊತ್ತು.

ಯಾವುದೇ ಮತೀಯ ಆಸಕ್ತಿಯಾದರೂ ಮತೀಯ ಕಾರಣಗಳಿಂದ ನಮ್ಮ ವಿಶ್ವವಿದ್ಯಾಲಯಗಳ ಬಗ್ಗೆಯಾಗಲೀ ಕನ್ನಡ ಭಾಷಾವಾಙ್ಮಯದ ಬಗ್ಗೆಯಾಗಲೀ ತೀರ್ಮಾನಿಸುವ ನಿರ್ದೇಶಿಸುವ ಅಧಿಕಾರವನ್ನು ಕೈಗೆತೆಗೆದುಕೊಳ್ಳಲು ಹವಣಿಸಿದರೆ ಅಂಥವರಿಗೆ, ಅಧಿಕಪ್ರಸಂಗಕ್ಕೆ ಹೋಗಬೇಡಿ, ಜೋಕೆ ಅಂತ ಖಡಾಖಂಡಿತ ಹೇಳಬೇಕು. ನಾನಂತೂ ಯಾವ ಮುಲಾಜಿಲ್ಲದೆ ಹಾಗೆ ಹೇಳುತ್ತೇನೆ.

(ಕನ್ನಡ ಪ್ರಭಾ, 19-4-1995)

– ಕೆ.ವಿ. ಸುಬ್ಬಣ್ಣ,
ಹೆಗ್ಗೋಡು.

ಆಧಿಕ ಪ್ರಸಂಗವಲ್ಲ, ಆರೋಗ್ಯಕರ ವ್ಯವಸ್ಥೆ

- ಮಾತಾಜಿ

ಅಧಿಕಪ್ರಸಂಗಬೇಡ ಎಂಬ ಶೀರ್ಷಿಕೆಯ ಅಡಿಯಲ್ಲಿ ಶ್ರೀ ಕೆ.ವಿ. ಸುಬ್ಬಣ್ಣ, ಹೆಗ್ಗೋಡು ಅವರು ಕನ್ನಡ ಪ್ರಭ, ಸಂಯುಕ್ತ ಕರ್ನಾಟಕ ಪತ್ರಿಕೆಗಳಲ್ಲಿ ತಮ್ಮ ಒಂದು ಓಲೆಯನ್ನು ಪ್ರಕಟಿಸಿದ್ದಾರೆ. ಇರುವುದನ್ನು ತಿರುಚಿ ಬರೆಯುವುದೇ ಸೃಜನ ಶೀಲತೆ ಎಂದು ತಿಳಿದು ಕೊಂಡು ಮನಸ್ವೇಚ್ಛೆ ವಿಕೃತಗೊಳಿಸಿ ಬರೆದಿರುವ ಹೆಚ್.ಎಸ್. ಶಿವಪ್ರಕಾಶರಂತೆ ಹಲವಾರು ಸಾಹಿತಿಗಳು ಬರೆಯುತ್ತಿರುವ ಪರಿಸ್ಥಿತಿಯಲ್ಲಿ ಸುಬ್ಬಣ್ಣನವರ ಪತ್ರವೂ ಹಾಗೆಯೇ ತಿರುಚಿ ಬರೆದುದಾಗಿದೆ. "ಈ ಸಮಿತಿಯು ಬಸವ ಮತ್ತು ಇನ್ನಿತರ ಶರಣರ ಸಾಹಿತ್ಯದಲ್ಲಿ ಯಾವ ಯಾವ ಭಾಗಗಳನ್ನು ಪಠ್ಯವಾಗಿ ನೇಮಿಸಬಹುದೆಂದು ತೀರ್ಮಾನಿಸಿ ವಿಶ್ವವಿದ್ಯಾ ನಿಲಯಗಳಿಗೆ ತಿಳಿಸುತ್ತದಂತೆ" ಎಂದು ಬರೆದಿದ್ದಾರೆ.

ಯಾವುದನ್ನೂ ಸರಿಯಾಗಿ ಓದದೆ, ವಿವರ ತಿಳಿಯದೆ ಬರೆಯುವ ಮಾತನಾಡುವ, ಅಭಿಪ್ರಾಯ ತಟ್ಟನೆ ವ್ಯಕ್ತಪಡಿಸುವ ದುರಭ್ಯಾಸ ಅನೇಕ ಸಾಹಿತಿಗಳ ಹವ್ಯಾಸವಾದಂತೆ ತೋರುತ್ತದೆ. ಇವರು ಗೀಚಿದುದನ್ನೆಲ್ಲ ಪ್ರಕಟಿಸುವ ಸಮೂಹ ಮಾಧ್ಯಮಗಳು ಇವರ ಬೆಂಬಲಕ್ಕಿರುವುದು ಇವರಿಗೆ ಅತಿಯಾದ ಆತ್ಮವಿಶ್ವಾಸ ಹುಟ್ಟಿಸಿದಂತೆ ತೋರುತ್ತದೆ.

ವಿಶ್ವವಿದ್ಯಾಲಯಗಳ ಪಠ್ಯಪುಸ್ತಕ ಸಮಿತಿಗಳು ಆಯ್ಕೆ ಮಾಡುವ ಯಾವುದೇ ಪಠ್ಯವಿರಲಿ, ಪೂರ್ಣಪುಸ್ತಕ ವಿರಲಿ ಅಥವಾ ಭಾಗಗಳೇ ಇರಲಿ ಅವುಗಳನ್ನು ಅದರಲ್ಲೂ ಮುಖ್ಯವಾಗಿ ಧಾರ್ಮಿಕ ಸಾಹಿತ್ಯವಿರುವಾಗ ಆ ಸಾಹಿತ್ಯವನ್ನು ಆಯಾ ಕ್ಷೇತ್ರದಲ್ಲಿ ಪರಿಣತರಾದ ವಿದ್ವಾಂಸರಿಗೆ ಪರಿಶೀಲನೆಗೆ ಕೊಟ್ಟು ಅಭಿಪ್ರಾಯ ಪಡೆಯಲು ನಾವು ಮನವಿ ಮಾಡಿಕೊಂಡಿದ್ದೇವೆ. ನಾವು ಆಯ್ಕೆ ಮಾಡಿಕೊಟ್ಟುದ್ದನ್ನು ನೀವು ಪಠ್ಯಮಾಡಿರಿ ಎಂದು ಹೇಳಿಲ್ಲ. ನೀವು ಆಯ್ಕೆ ಮಾಡಿದುದನ್ನು, ವಚನ ಸಾಹಿತ್ಯ, ದಾಸ ಸಾಹಿತ್ಯ, ಜೈನ ಸಾಹಿತ್ಯ ಯಾವುದೇ ಇರಲಿ, ಆಯಾ ಕ್ಷೇತ್ರದಲ್ಲಿ ಪರಿಣತರಾದ ಧಾರ್ಮಿಕರ ಗಮನಕ್ಕೆ ತನ್ನಿ ಎಂದು ಸಲಹೆ ನೀಡಲಾಗಿದೆ. ನಾವು ವಚನ ಸಾಹಿತ್ಯಕ್ಕೆ ಗಮನವನ್ನು ಸೀಮಿತಗೊಳಿಸಿ ಕೊಂಡಿರುವುದಾಗಿ ಅದರಲ್ಲಿ ತಿಳಿಸಲಾಗಿದೆ.

ನಮ್ಮ ಪತ್ರದ ಪೂರ್ಣಪಾಠವನ್ನು ಮುದ್ರಿಸಲಾಗಿದೆ ಗಮನಿಸಿರಿ. ಧಾರ್ಮಿಕ ಮಹಾ ಪುರುಷರ, ಧಾರ್ಮಿಕ-ನೈತಿಕ-ರಾಷ್ಟ್ರೀಯ ಮೌಲ್ಯಗಳ ರಕ್ಷಣೆಗೆ ಇದೇ ಆರೋಗ್ಯಕರ ವ್ಯವಸ್ಥೆ ಎಂದು ಯಾರಿಗಾದರೂ ಅನ್ನಿಸದೆ ಇರದು ಎಂದು ನಮ್ಮ ಖಚಿತ ಅಭಿಪ್ರಾಯ.

ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ
ಬೆಂಗಳೂರು.

ಪಠ್ಯ ಪುಸ್ತಕ ನಿರ್ದೇಶಕರಿಗೆ ಕೊಟ್ಟ ಮನವಿ

ಮಾನ್ಯ ನಿರ್ದೇಶಕರು
ಪಠ್ಯಪುಸ್ತಕ ನಿರ್ದೇಶನಾಲಯ
ಬೆಂಗಳೂರು.
ಇವರಲ್ಲಿ ವಿಜ್ಞಾಪನೆಗಳು
ಮಾನ್ಯರೇ,

ವಿಷಯ : ಪಠ್ಯಪುಸ್ತಕ ಆಯ್ಕೆಯಲ್ಲಿ ಹೊಣೆಗಾರಿಕೆ ಮತ್ತು ಸೂಕ್ತ ಪರಿಶೀಲನೆಗೆ ಅವಕಾಶ.

ಕುವೆಂಪು ಮತ್ತು ಕಲಬುರ್ಗಿ ವಿಶ್ವವಿದ್ಯಾಲಯಗಳ ಪದವಿ ತರಗತಿಗಳಿಗೆ ಶ್ರೀ ಹೆಚ್.ಎಸ್. ಶಿವಪ್ರಕಾಶ್ ಎಂಬುವವರು ಬರೆದ ಒಂದು ನಾಟಕ ಕೃತಿ ಪಠ್ಯವಾಗಿದ್ದು, ಅದು ದೋಷಪೂರಿತ ಮತ್ತು ವಿವಾದಾಸ್ಪದವಾಗಿದ್ದು ವಿಶ್ವಗುರು ಬಸವಣ್ಣ ಮತ್ತವರ ಸಮಕಾಲೀನ ಶರಣರನ್ನು ಬಾಯಿಗೆ ಬಂದಂತೆ ನಿಂದಿಸಿರುವುದೇ ಅಲ್ಲದೆ, ಬಸವಾದಿ ಪ್ರಮಥರ ಬದುಕಿನ ಅನೇಕ ಐತಿಹಾಸಿಕ ಘಟನೆಗಳನ್ನು ತಿರುಚಿ, ವಿಕೃತವಾಗಿ ಚಿತ್ರಿಸಿದೆ. ಇದನ್ನು ಗಮನಿಸಿ ಬಸವ ತತ್ತ್ವಾನುಯಾಯಿಗಳು ಒಂದು ದೊಡ್ಡ ಆಂದೋಲನವನ್ನೇ ಮಾಡಬೇಕಾಯಿತು. ಪುಸ್ತಕವು ದೋಷಪೂರಿತವಿದೆ ಎಂದು ಸ್ವತಃ ಗುಲಬರ್ಗಾದ ವಿಶ್ವವಿದ್ಯಾಲಯದ ಶೈಕ್ಷಣಿಕ ಮಂಡಳಿ, ಅಷ್ಟರ ಮಟ್ಟಿಗೆ ಪ್ರಾಮಾಣಿಕತೆಯನ್ನು ಪ್ರದರ್ಶಿಸಿ ಒಪ್ಪಿಕೊಂಡಿತು. ಸರ್ಕಾರವು ಪುಸ್ತಕದೊಳಗಣ ಲೋಪ-ವಿವಾದಗಳನ್ನು ಗಮನಿಸಿ, ಜನರ ಭಾವನೆಗಳಿಗೆ ಸ್ಪಂದಿಸಿ ಅಂತೂ ಪಠ್ಯಕ್ರಮದಿಂದ ಪುಸ್ತಕವನ್ನು ವಾಪಸ್ಸು ಪಡೆದು ಬಹುಜನರ ಅಭಿನಂದನೆಗೆ ಪಾತ್ರವಾಯಿತು. ಅದರಲ್ಲಿ ಒಂದು ಗಮನಾರ್ಹ ವಿಷಯವನ್ನು ಚಿಂತಿಸಬೇಕು. ಈ ಪ್ರಜಾಪ್ರಭುತ್ವವೆಂಬ ದೊಡ್ಡಾಟದಲ್ಲಿ ಅಭಿವ್ಯಕ್ತಿ ಸ್ವಾತಂತ್ರ್ಯದ ಹೆಸರಿನಲ್ಲಿ ಯಾರು ಬೇಕಾದರೂ ಏನು ಬೇಕಾದರೂ ಬರೆಯಬಹುದು.

ನಾಡು-ನುಡಿ-ಸಂಸ್ಕೃತಿ-ಪರಂಪರೆಗಳ ಪರಿಚಯ ಮಾಡಿಕೊಡಬೇಕಾದ ಪಠ್ಯಗಳನ್ನು ವಿದ್ಯಾರ್ಥಿಗಳಿಗೆಂದು ಆಯ್ಕೆ ಮಾಡುವಾಗ ಪಠ್ಯಪುಸ್ತಕ ಆಯ್ಕೆ ಸಮಿತಿಯ ಹೊಣೆಗಾರಿಕೆ ಏನೂ ಇಲ್ಲವೆ? ಲೇಖಕ ಶಿವಪ್ರಕಾಶರ ಬರವಣಿಗೆ ದೋಷಪೂರಿತ ವಿರಬಹುದು. ಆದರೆ ಅದನ್ನು ಲಕ್ಷಕೊಟ್ಟು ಓದದೆ ಪುಸ್ತಕವನ್ನು ಪಠ್ಯವನ್ನಾಗಿ ಆಯ್ಕೆಮಾಡುವಲ್ಲಿ ಪಠ್ಯಪುಸ್ತಕ ಸಮಿತಿ ತಪ್ಪು ಮಾಡಿರುವುದು ಅತ್ಯಂತ ನಿಚ್ಚಳವಾಗಿದೆ. ಲೇಖಕ ಶಿವಪ್ರಕಾಶ್ ತಾವು ಆಳ ಅಧ್ಯಯನ, ಗಂಭೀರ ಚಿಂತನೆ, ಸೂಕ್ತ ವಚನ ಸಾಹಿತ್ಯ ವಿಶ್ಲೇಷಣೆ ಮಾಡದೆ ತಪ್ಪನ್ನು ಮಾಡಿದ್ದರೂ ಅದನ್ನು ಎತ್ತಿ ತೋರಿಸಿದಾಗ ಒಪ್ಪಿಕೊಳ್ಳುವ ಪ್ರಾಮಾಣಿಕ ಮನಸ್ಸು ಹೊಂದಿಲ್ಲ. ಅವರನ್ನು, ಅವರ ಬರಹವನ್ನು ಸಮರ್ಥಿಸುತ್ತ ಕೆಲವು ಸಾಹಿತಿಗಳು ಮತ್ತು ಪತ್ರಿಕೆಗಳವರು, ಸಾಹಿತ್ಯಕವಾಗಿ ವಿಮರ್ಶಿಸಿ ಪುಸ್ತಕದ ಲೋಪದೋಷಗಳನ್ನು ಎತ್ತಿ ತೋರಿಸಿದ ನಮ್ಮಂತ ಹವರನ್ನೇ ಮತಾಂಧರು ಎಂದೆಲ್ಲ ನಿಂದಿಸುತ್ತಲಿರುವರು.

ಬರೆದುದೆಲ್ಲ ಸಾಹಿತ್ಯವಲ್ಲ; ಓರ್ವ ಲೇಖಕ ಬರೆದುದನ್ನೆಲ್ಲ ಒಪ್ಪಿಕೊಳ್ಳ ಬೇಕೆಂದಿಲ್ಲ. ಬರೆಯುವುದು ಲೇಖಕರ ದರ್ಮ ಇರಬಹುದು. ಅದನ್ನೆಲ್ಲ ಶಾಸನ ವೆಂಬಂತೆ ತಲೆಯ ಮೇಲೆ ನಾವಾಗಲೀ, ವಿದ್ಯಾರ್ಥಿಗಳಾಗಲೀ ಹೊತ್ತು ಕೊಳ್ಳಬೇಕೆಂಬ ಕರ್ಮವೇನೂ ಇಲ್ಲ. ಲೇಖಕರಿಗೆ ಅಭಿವ್ಯಕ್ತಿ, ವಸ್ತು, ಘಟನೆ ಕುರಿತು ಬರೆಯುವಾಗ ಲೇಖಕರು ಬಹುಜಾಗ್ರತರಾಗಿ ಇರಬೇಕಾಗುತ್ತದೆ. ಯಾವುದೇ ಕೃತಿಯನ್ನು ಪಠ್ಯವನ್ನಾಗಿ ಆಯ್ಕೆ ಮಾಡುವಾಗ ಅದು ಬೀರಬಹುದಾದ ಪರಿಣಾಮದ ಬಗ್ಗೆ ಚಿಂತನೆ ಮಾಡಬೇಕಾಗುತ್ತದೆ. ಸಾಮಾಜಿಕ ಹೊಣೆಗಾರಿಕೆ ಎನ್ನು ವುದೂ ಮಾನವ ಸಮಾಜದಲ್ಲಿ ಪರಿಗಣಿಸಬೇಕಾದ ಅಂಶ. ಲೇಖಕ ತನ್ನ ಮಿಷಿ, ಖಯಾಲಿಗಾಗಿ ಅಂದರೆ ಚಪಲಕ್ಕಾಗಿ ಬರೆದು ಇಟ್ಟುಕೊಳ್ಳಲು ಸರ್ವತಂತ್ರ ಸ್ವತಂತ್ರ. ಅದು ಪ್ರಕಟವಾದಾಗ ಆ ಕೃತಿಗೆ ಸಾಮಾಜಿಕ ಸಂಬಂಧ ವಿರ್ಪಡುತ್ತದೆ; ಪಠ್ಯವಾಗಿ ವಿದ್ಯಾರ್ಥಿಗಳಿಗೆ ಆಯ್ಕೆಯ ಓದಿನ ಸ್ವಾತಂತ್ರ್ಯ ಕಸಿಯುವಾಗ ಅದರ ಸಾಮಾಜಿಕ ಸಂಬಂಧ ಇನ್ನೂ ಹಿರಿದಾಗುತ್ತದೆ. ಮಹಾತ್ಮರು ಬಯಲಿಗೆಳೆದ ಭಯಂಕರ ಸತ್ಯಗಳ ಅವಾಂತರದ ಹಿನ್ನೆಲೆಯಲ್ಲಿ ನಾವು ಬಹಳ ಹೊಣೆಗಾರಿಕೆಯಿಂದ, ಗಂಭೀರವಾಗಿ ಈ ಮನವಿಯನ್ನು ನಿಮ್ಮ ಮುಂದೆ ಇಡುತ್ತಿದ್ದೇವೆ.

ಸಂಬಂಧಿಸಿದವರಿಂದ ಪರಿಶೀಲನೆ

ಐತಿಹಾಸಿಕ ಮತ್ತು ಧಾರ್ಮಿಕ ವ್ಯಕ್ತಿಗಳ ಜೀವನ, ಸಾಧನೆ, ಸಂದೇಶಗಳಿಗೆ ಸಂಬಂಧಪಟ್ಟ ಯಾವುದೇ ಲೇಖಕರ ಪುಸ್ತಕಗಳನ್ನು ಇಡಿಯಾಗಿ ಅಥವಾ ಆಯ್ಕೆ ಮಾಡಿದ ಭಾಗಗಳನ್ನು ಪಠ್ಯದಲ್ಲಿ ಇಡುವಾಗ ಅಥವಾ ಸೇರಿಸುವಾಗ ಸಂಬಂಧಪಟ್ಟ ಧಾರ್ಮಿಕ ವಿದ್ವಾಂಸರು, ಪರಿಣತರು ಆದವರ ಗಮನಕ್ಕೆ ಆ ಪಠ್ಯವನ್ನು ಅಥವಾ ಆದರ ಭಾಗವನ್ನು ತಂದು, ಮುದ್ರಣಕ್ಕೆ ಬಿಡುಗಡೆ ಮಾಡುವ ಪರಿಪಾಠ ಬೆಳೆಸಿಕೊಳ್ಳಬೇಕು. ವಚನ ಸಾಹಿತ್ಯ, ದಾಸ ಸಾಹಿತ್ಯ ಮುಂತಾದುವು ಕೇವಲ ಸಾಹಿತ್ಯ ಕ್ಷೇತ್ರಕ್ಕೆ ಸೀಮಿತವಾಗದೆ, ಆ ವ್ಯಾಪ್ತಿದಾಟಿ ಭಾವನಾತ್ಮಕ ಮತ್ತು ಧಾರ್ಮಿಕ ವಲಯವನ್ನು ಪ್ರವೇಶಿಸುತ್ತವೆ. ಒಂದು ಸುಂದರವಾದ ಎತ್ತನ್ನು ರೈತನು ಪ್ರೀತಿಸುವ ಬಗೆಗೂ, ಕಟುಕನು ಪ್ರೀತಿಸುವ ಬಗೆಗೂ ಅಗಾಧ ವ್ಯತ್ಯಾಸವಿರುತ್ತದೆ. ಒಬ್ಬ ರೈತನಿಗೆ ತನ್ನ ಎತ್ತು ಮಗನಿಗಿಂತಲೂ ಹೆಚ್ಚಿನ ಪ್ರೀತಿಯದು, ಅವನ ಸರ್ವಸ್ವವಾಗಿರುವುದು.

ಅದೇ ರೀತಿ ದಾರ್ಮಿಕ ಶ್ರದ್ಧಾಳುಗಳಿಗೆ ವಿಶ್ವಗುರುಬಸವಣ್ಣ, ಅಕ್ಕಮಹಾದೇವಿ, ಅಕ್ಕನಾಗಲಾಂಬಿಕೆ, ಚನ್ನಬಸವಣ್ಣ ಮುಂತಾದವರು ಶ್ರದ್ಧಾ ಕೇಂದ್ರಗಳು, ಸ್ಫೂರ್ತಿ ಚಿಲುಮೆಗಳು. ಭಾರತದ ಸಂವಿಧಾನವು ಕೊಡುವ ಒಂದು ಶ್ರೇಷ್ಠ ಹಕ್ಕು ಧಾರ್ಮಿಕ ಅನುಸರಣೆ, ಈ ಶ್ರದ್ಧೆಗೆ ಚ್ಯುತಿ ತರಲು ಯಾರಿಗೂ ಅಧಿಕಾರವಿಲ್ಲ. ಬಸವ ತತ್ತ್ವಾನುಯಾಯಿಗಳಾದ ಅನೇಕ ಧಾರ್ಮಿಕ ಶ್ರದ್ಧಾಳುಗಳೆಲ್ಲ ಇದೀಗ ಆಳವಾದ ಚಿಂತನೆ ಗೈದು, ಒಂದು ಪಠ್ಯಪುಸ್ತಕ ಪರಿಶೀಲನಾ ಸಮಿತಿ ಮತ್ತು ಮುದ್ರಣಗೊಂಡ ಎಲ್ಲ ಸಾಹಿತ್ಯವನ್ನು ಪರಿಶೀಲಿಸಲು ಒಂದು ಸಾಹಿತ್ಯ ಪರಿಶೀಲನಾ ಸಮಿತಿಯನ್ನು ಬಸವ ಧರ್ಮಪೀಠ ಮತ್ತು ರಾಷ್ಟ್ರೀಯ ಬಸವ ದಳಗಳ ಅಂಗವಾಗಿ ರಚಿಸಿದ್ದೇವೆ. ಅಧ್ಯಯನ ಮಾಡಿ ಅಭಿಪ್ರಾಯ ನೀಡುವ ವಿದ್ವಾಂಸರನ್ನು ಇದಕ್ಕೆ ಮುಕ್ತ ಮತ್ತು ಪ್ರಾಮಾಣಿಕ ಮನಸ್ಸಿನಿಂದ

ಸದಸ್ಯರನ್ನಾಗಿ ತೆಗೆದುಕೊಳ್ಳಲಾಗಿದೆ. ಆದ್ದರಿಂದ ತಾವು ಆಯ್ಕೆ ಮಾಡುವ ವಚನ ಸಾಹಿತ್ಯ, ವಚನಕಾರರು, ಅವರ ಜೀವನ, ಸಾಧನೆ, ಸಂದೇಶ ಗಳನ್ನು ಚಿತ್ರಿಸುವ ಯಾವುದೇ ಕೃತಿಯನ್ನು ನಮ್ಮ ಸಮಿತಿಯ ಗಮನಕ್ಕೆ ತರಬೇಕು. ಪೂರ್ವಾಗ್ರಹ ಪೀಡಿತವಿರದೆ, ಮುಕ್ತ ಮನಸ್ಸಿನಿಂದ ಅಧ್ಯಯನ ಮಾಡಿ ನಿಮಗೆ ಅಭಿಪ್ರಾಯ ನೀಡಲಾಗುವುದು. ಸಣ್ಣದೋಷಗಳಿದ್ದರೆ ಲೇಖಕರನ್ನು ಸೂಕ್ತ ಬದಲಾವಣೆಗೆ ವಿನಂತಿಸಲಾಗುವುದು, ತಮಗೆ ಪತ್ರವನ್ನಾಗಿ ಆಯ್ಕೆ ಮಾಡಿದ ಕೃತಿಯ ಬಗ್ಗೆ ಸರಿಯಾದ ವಿವರ, ಟಿಪ್ಪಣಿ ನೀಡಲಾಗುವುದು.

ಸಾಮಾಜಿಕ ಸ್ವಾಸ್ಥ್ಯದ ದೃಷ್ಟಿಯಿಂದ ಈ ನಿರ್ಧಾರಕ್ಕೆ ಬರಲಾಗಿದೆ. ಮಹಾಚೈತ್ರದ ಅವಾಂತರದ ಹಿನ್ನೆಲೆಯಲ್ಲಿ ಧಾರ್ಮಿಕ-ಸಾತ್ವಿಕರು ಆತ್ಮರಕ್ಷಣೆಗಾಗಿ ಮತ್ತು ಸಾಂಸ್ಕೃತಿಕ - ಧಾರ್ಮಿಕ ಮೌಲ್ಯಗಳ ರಕ್ಷಣೆಗಾಗಿ ಮಾಡಿಕೊಂಡ ವೈಚಾರಿಕ ಪ್ರಯತ್ನ ವಿದು. ನಮ್ಮ ಪಠ್ಯಪುಸ್ತಕ ಪರಿಶೀಲನಾ ಸಮಿತಿ ಮತ್ತು ಸಾಹಿತ್ಯ ಪರಿಶೀಲನಾ ಸಮಿತಿಗಳು ಉತ್ತಮ, ಪರಿಣತ ವಿದ್ವಾಂಸರಿಂದ ಕೂಡಿವೆ ಎಂದು ಹೇಳಲು ಹೆಮ್ಮೆ ಎನಿಸಿದೆ. ಕೆಲವು ಸಣ್ಣಮನಸ್ಸಿನ ಸಾಹಿತಿಗಳು ಮಾಡಬಹುದಾದ ಗುಂಪುಗಾರಿಕೆಯನ್ನು ಗಮನದಲ್ಲಿರಿಸಿಕೊಂಡು ಸಮಿತಿಯ ಸದಸ್ಯರ ಹೆಸರನ್ನು ಗೋಪ್ಯವಾಗಿ ಇಡಲಾಗಿದೆ. ಪುಸ್ತಕಗಳ ಬಗ್ಗೆ ತಮಗೆ ಅಭಿಪ್ರಾಯ, ಲಿಖಿತರೂಪದಲ್ಲಿ ಕೊಡುವಾಗ ಆಯಾ ಪರಿಣತ ವಿದ್ವಾಂಸರ ಹೆಸರು - ವಿಳಾಸ - ಸಹಿ ನೀಡಲಾಗುವುದು.

ಈ ಆರೋಗ್ಯಕರ ವ್ಯವಸ್ಥೆಯನ್ನು ಪ್ರಾಜ್ಞರು, ಪ್ರೌಢರು, ಆ ಸಾಮಾಜಿಕ ಹೊಣೆಗಾರಿಕೆಯುಳ್ಳ ತಾವು ಮನ್ನಿಸಿ, ಅಗತ್ಯವೆನಿಸಿದಾಗ ನಮ್ಮ ಸಮಿತಿಯ ವಿಳಾಸಕ್ಕೆ ಸಂಪರ್ಕಿಸಬೇಕಾಗಿ ಕೋರುತ್ತೇವೆ.

ವಚನ ಸಾಹಿತ್ಯ, ವಚನಕಾರರು ಮುಖ್ಯವಾಗಿ ವಿಶ್ವವಿಭೂತಿ ಬಸವಣ್ಣನವರಿಂದ ಹರಿದು ಬಂದ ಸಾಹಿತ್ಯ-ಧರ್ಮ ಸಂಸ್ಕೃತಿಗಳ ಕ್ಷೇತ್ರಕ್ಕೆ ನಮ್ಮ ಗಮನವನ್ನು ಸೀಮಿತಗೊಳಿಸಿ ಕೊಂಡಿದ್ದೇವೆಂಬುದನ್ನು ಸ್ಪಷ್ಟಪಡಿಸಬಯಸುತ್ತೇವೆ.

ಶುಭಹಾರೈಕೆಗಳೊಡನೆ,
ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ
ಕಾರ್ಯಾಧ್ಯಕ್ಷೆ, ಬಸವ ಧರ್ಮ ಪೀಠ
ರಾಷ್ಟ್ರೀಯ ಬಸವದಳ.

ಸ್ವೇಚ್ಛಾ ಕಲ್ಪನೆ

ಮಾನ್ಯರೇ,

ಮಹಾಚೈತ್ರ ನಾಟಕದ ಚರ್ಚೆಯ ಸಂದರ್ಭದಲ್ಲಿ ನನ್ನ ಹೆಸರು ಪ್ರಸ್ತಾಪ ಮಾಡಿರುವ ಹಿನ್ನೆಲೆಯಲ್ಲಿ (ಕ.ಪ್ರ. 10.4.95) ಆ ನಾಟಕದ ಬಗ್ಗೆ ನನ್ನ ಧೋರಣೆ ಯನ್ನು ಸ್ಪಷ್ಟಪಡಿಸುವುದು ಅಗತ್ಯವಾಗಿದೆ.

ಶಿಲ್ಪಿ ತನಗೆ ಬೇಕಾದ ರೂಪವನ್ನು ಕೊಡಲು ಕಲ್ಲನ್ನು ಬಳಸುವಂತೆ ನಾಟಕಕಾರ ಇತಿಹಾಸವನ್ನು ಬಳಸಲು ಇತಿಹಾಸವೇನೂ ಜಡ ಕಲ್ಲು ಅಲ್ಲ. ಅದು ಮನುಷ್ಯರಿಗೆ ಸಂಬಂಧಪಟ್ಟದು ಮತ್ತು ಇಂದಿಗೂ ಮನುಷ್ಯರ ಸಾಮಾಜಿಕ-ನೈತಿಕ - ಭಾವುಕ ಜೀವನದ ಭಾಗವಾಗಿರುವಂತಹದು. ಸಾಹಿತ್ಯ ಇತಿಹಾಸಗಳು ಬೇರೆ ಬೇರೆ ಆದರೂ ಇತಿಹಾಸವನ್ನು ಬಳಸಿಕೊಳ್ಳಲು ನಾಟಕಕಾರನಿಗೆ ಅನಿರ್ಬಂದಿತ ಸ್ವಾತಂತ್ರ್ಯವಿಲ್ಲ. ದುರದೃಷ್ಟವಶಾತ್ ಶಿವಪ್ರಕಾಶ್ ತಮ್ಮ ನಾಟಕ ರಚನೆಯಲ್ಲಿ ಇತಿಹಾಸವನ್ನು ತಮಗೆ ತೋಚಿದಂತೆ ಬಳಸಿಕೊಂಡಿದ್ದಾರೆ. ಬಸವಣ್ಣನವರು ಅಕ್ರಮ ಸಂಬಂಧದ ಶಿಶು ಎಂಬಂತೆ, ಅವರ ತಾಯಿ ಶಂಕಿತ ಶೀಲದವಳು ಎಂಬಂತೆ ಪಾತ್ರಗಳ ಬಾಯಲ್ಲಿ ಆಡಿಸಿದ್ದಾರೆ. ಅವು ಬಸವ ವಿರೋಧಿ ಪಾತ್ರಗಳು ಎಂಬುದು ಸಮಾಧಾನ ತರುವ ಮಾತಾಗುವುದಿಲ್ಲ. ಅಂತಹ ಹೀನ ಕಲ್ಪನೆಗಳನ್ನು ಯಾವನೇ ವ್ಯಕ್ತಿಯ ಬಗ್ಗೆಯೂ ಮಾಡಬಹುದು. ಚಾಳುಕ್ಯ ಚಕ್ರವರ್ತಿಯನ್ನು ಕ್ರೂರವಾಗಿ ಕೊಂದು ಪಟ್ಟಕ್ಕೆ ಬಂದ ಬಿಜ್ಜಳನಿಗೆ ಬಸವಣ್ಣ ದೊಡ್ಡ ಸಾಮ್ರಾಜ್ಯವನ್ನು ಕಟ್ಟು ಎಂದು ಉಪದೇಶ ಮಾಡಿದ್ದಾಗಲಿ ಬಿಜ್ಜಳನ ಧಾನದತ್ತಿಗಳ ಹಂಗಿನಲ್ಲಿ ಬಸವಣ್ಣನವರ ಮಹಾಮನೆ ನಡೆಯುತ್ತಿತ್ತು ಎಂದು ಕಲ್ಪಿಸಿರುವುದಾಗಲಿ ಬಸವಣ್ಣನವರ ಸ್ವತಂತ್ರ ವ್ಯಕ್ತಿತ್ವಕ್ಕೆ ಅಪಚಾರ ಮಾಡುವಂತಹದು.

ಬಸವಣ್ಣನವರು ಆತ್ಮಹತ್ಯೆ ಮಾಡಿಕೊಂಡರೆಂದು ಚಿತ್ರಿಸಿರುವುದು ಅವರ ಬದುಕಿಗೆ ಕಳಂಕ ತರುವಂತಹುದು. ಇವು ಎಲ್ಲೋ ಆಯ್ದ ಕೆಲವು ಉದಾಹರಣೆಗಳು ಜನತೆಗೆ ಸಾಹಿತ್ಯ ಮತ್ತು ಚರಿತ್ರೆ ಎಂಬುವನ್ನು ಬಿಡಿಸಿ ನೋಡುವಷ್ಟು ವ್ಯವಧಾನ ವಿಲ್ಲದಿರುವಾಗ ಇತಿಹಾಸದ ಚೌಕಟ್ಟನ್ನು ಗಂಭೀರವಾಗಿ ಪರಿಭಾವಿಸುವುದು ಅಗತ್ಯ. ಇದೊಂದು ನಿರರ್ಥಕ ಸ್ವೇಚ್ಛಾ ಕಲ್ಪನೆಯ ನಾಟಕವಾಗಿದ್ದು ಹನ್ನೆರಡನೆಯ ಶತಮಾನವನ್ನು ಕಲಾತ್ಮಕವಾಗಿ ಚಿತ್ರಿಸುವಲ್ಲಿ ವಿಫಲವಾಗಿದೆಂಬುದು ನನ್ನ ಸ್ಪಷ್ಟ ಅಭಿಪ್ರಾಯವಾಗಿದೆ.

ಆ ನಾಟಕದ ಬಗ್ಗೆ ವಿರೋಧ ವ್ಯಕ್ತಪಡಿಸಿರುವವರಲ್ಲಿ ಅನೇಕರು ನಿರ್ಮಲ ಬದುಕಿನ ಸೇವಾ ಮನೋಧರ್ಮದ ಗುರುಗಳಿದ್ದರೆ, ವಿಚಾರವಂತರೂ ಇದ್ದಾರೆ. ಅವರೆಲ್ಲರನ್ನೂ ಟೀಕಿಸುವಾಗ ಕೆಲವು ಅಪಚಾರದ ಮಾತುಗಳೂ ಬಂದಿವೆ. ಅಂತಹ ಅಪಚಾರದ ಮಾತುಗಳು ನಾಟಕದ ಬಗ್ಗೆಯೂ ನಾಟಕಕಾರನ ಬಗ್ಗೆಯೂ ಬಂದಿವೆ. ಗಮನಿಸಬೇಕಾದ ಸಂಗತಿಯೆಂದರೆ ನಾಟಕವನ್ನು ವಿರೋಧಿಸಿರುವವರು ರಷ್ದಿ ಬಗ್ಗೆ ತಸ್ಲೀಮರ ಬಗ್ಗೆ ಬೇರೆ ದೇಶಗಳಲ್ಲಿ ನಡೆದುಕೊಂಡಂತೆ ನಡೆದುಕೊಂಡಿಲ್ಲ. ಲೇಖಕನ ಅಭಿಪ್ರಾಯ ಸ್ವಾತಂತ್ರ್ಯದಂತೆಯೇ ವಿರೋಧಿಸುವವರಿಗೂ ನಾಗರಿಕ ವಿಧಾನದಲ್ಲಿ ಪ್ರತಿಭಟಿಸುವ ಸ್ವಾತಂತ್ರ್ಯವೂ ಇರುತ್ತದೆ. ಶಿವಸೇನೆಯ ಬಗ್ಗೆ ನಾನು ವ್ಯಕ್ತಪಡಿಸಿರುವ ಅಭಿಪ್ರಾಯಗಳ ಬಗ್ಗೆ ಗಿರೀಶ್ ಕಾರ್ನಾಡರು ಆಡಿರುವ ಮಾತುಗಳು ಅವರಿಗೆ ಕೆಲವು ವಾಸ್ತವಗಳ ಅರಿವಿಲ್ಲವೆಂಬುದನ್ನು ತೋರುತ್ತದೆ.

(ಕನ್ನಡ ಪ್ರಭ - 19-4-1995)

- ಡಾ ಎಂ. ಚಿದಾನಂದಮೂರ್ತಿ

ಬಸವ ಧರ್ಮ ತೃತೀಯ ಸಮ್ಮೇಳಕ್ಕೆ ಧರ್ಮಪಿತರ ಕರೆಯೋಲೆ - 2

ಮಮತೆಯ ಮಕ್ಕಳೇ,

ನನ್ನ ಕರೆಯೋಲೆ- 1ಕ್ಕೆ ಮಹತ್ವಕೊಟ್ಟರೇನೋ ಎಂಬಂತೆ ಬಹಳ ಹೆಚ್ಚಿನ ಜನರು ಶರಣಮೇಳಕ್ಕೆ ಬಂದುದು ನನಗೆ ಬಹಳ ಆನಂದ ತಂದಿತು. ಈ ನನ್ನ ಕರೆಯೋಲೆಗಳ ವಿವರಗಳನ್ನೂ ಗೊತ್ತಿಲ್ಲದವರಿಗೆ ತಲುಪಿಸುವ ಮಹತ್ ಕಾರ್ಯವನ್ನು ನೀವು ವರ್ಷವಿಡೀ ಮಾಡುತ್ತಲಿರಬೇಕು.

ಪರಮಾತ್ಮನ ದಿವ್ಯಕೃಪೆಯನ್ನು ಹೊತ್ತು ಮರ್ತ್ಯಲೋಕಕ್ಕೆ ಬಂದು ವಿಶ್ವಾತ್ಮನ ಕುರುಹಾಗಿ ಇಷ್ಟಲಿಂಗವನ್ನು ಸಾಕಾರಗೊಳಿಸಿಕೊಟ್ಟೆನು. ಜಾತಿ ವರ್ಣವರ್ಗರಹಿತ ದರ್ಮಸಹಿತವಾದ ಕಲ್ಯಾಣ ರಾಜ್ಯವನ್ನು ಮರ್ತ್ಯಲೋಕದಲ್ಲಿ ಕಟ್ಟಿ ತೋರಿಸಿದೆ, ಗಣಲಾಂಛನವನ್ನಾಗಿ ಇಷ್ಟಲಿಂಗವನ್ನು ಕೊಟ್ಟು ಪ್ರತಿಯೊಬ್ಬರ ಅಂಗದ ಮೇಲೂ ಧರಿಸಿಕೊಳ್ಳುವ ಸದವಕಾಶ ನೀಡಿ ಉದಾತ್ತವಾದ ಸಮತಾವಾದಿ ಶರಣ ಸಮಾಜವನ್ನು ಕಟ್ಟಿದೆನು. ನನ್ನ ಆಶೋತ್ತರಗಳನ್ನು ಅರಿತು, ಸ್ಪಂದಿಸಿ, ದೀಕ್ಷಾವಂತರಾಗಿ ಅಂಗದ ಮೇಲೆ ಲಿಂಗವನ್ನು ಧರಿಸಿಕೊಳ್ಳುವ ಆಚರಣೆಯುಳ್ಳ ಲಿಂಗವಂತ ಸಮಾಜದ ಸದಸ್ಯರು ಅಂದರೆ ಲಿಂಗಾಯತ ಧರ್ಮಾನುಯಾಯಿಗಳಿಂದ ನೀವು ಎಲ್ಲೆಡೆಯಲ್ಲಿ ಚದುರಿಹೋಗಿದ್ದೀರಿ, ಲಿಂಗಾಯತ ಧರ್ಮದ ಜನ್ಮಭೂಮಿ ಅಂದರೆ ನಿಮ್ಮಗಳ ಧರ್ಮಭೂಮಿ ಕರ್ನಾಟಕ. ನೀವು ಆಚರಿಸಬೇಕಾದ ದರ್ಮಮಾರ್ಗವನ್ನು ಬೋಧಿಸುವ ವಚನ ವಾಙ್ಮಯವು ರಚನೆಯಾಗಿರುವುದು ಕನ್ನಡದಲ್ಲಿ. ಆದ್ದರಿಂದ ಇದು ನಿಮ್ಮ ಧರ್ಮಭಾಷೆ . ಕರ್ನಾಟಕದಲ್ಲಿ ಅತ್ಯಧಿಕ ಸಂಖ್ಯೆಯಲ್ಲಿ, ನೆರೆಯ ಗಡಿರಾಜ್ಯಗಳಲ್ಲಿ ದಟ್ಟವಾಗಿ ಇನ್ನಿತರ ರಾಜ್ಯಗಳಲ್ಲಿ ವಿರಳವಾಗಿ, ಹೀಗೆ ಕರ್ನಾಟಕ, ಮಹಾರಾಷ್ಟ್ರ, ಆಂಧ್ರ, ತಮಿಳುನಾಡು, ಕೇರಳ, ಮಧ್ಯ ಪ್ರದೇಶ ಮುಂತಾದಲ್ಲೆಲ್ಲ ನೀವು ನೆಲೆಸಿದ್ದೀರಿ.

ಸ್ವಭಾವತಃ ಒಳ್ಳೆಯ ಜನರು ಎಂದು ಹೆಸರು ಪಡೆದಿದ್ದರೂ ನೀವು ತಾತ್ತಿಕವಾಗಿ ನಿಷ್ಠರಾಗಿಲ್ಲ; ಸ್ವಧರ್ಮ -ಸಂಸ್ಕೃತಿಗಳನ್ನು ಸರಿಯಾಗಿ ಉಳಿಸಿಕೊಂಡಿಲ್ಲ; ನಾವು ಅಂದರೆ ನಮ್ಮ ಅನುಭವ ಮಂಟಪದ ಸಮಕಾಲೀನ ಶರಣರು ಯಾವ ಉದಾತ್ತ ಧ್ಯೇಯಗಳನ್ನು ಬೋಧಿಸಿ, ಅವುಗಳ ಅನುಷ್ಠಾನಕ್ಕಾಗಿ ನುಡಿದೆವೋ, ದುಡಿದೆವೋ ಅವುಗಳಿಂದ ನೀವು ದೂರ ಹೋಗುತ್ತ ಪುನಃ ಜಾತಿ - ಉಪಜಾತಿ, ಪಂಗಡ ಪ್ರಜ್ಞೆ ಬೆಳೆಸಿಕೊಂಡಿದ್ದೀರಿ. ಮೂಢನಂಬಿಕೆಯ ಕೆಸರಿನ ಗುಂಡಿಯಲ್ಲಿ ಸಿಕ್ಕಿಕೊಂಡಿದ್ದೀರಿ. ಇದರಿಂದ ನನಗೆ ಆಘಾತವಾಗದೆ? ತತ್ತ್ವಸಿಂಹರನ್ನು ನೀಡಬೇಕೆಂಬ ನಮ್ಮ ಹಂಬಲಕ್ಕೆ ವಿರುದ್ಧವಾಗಿ ಕಪಟ ನರಿಗಳಂತೆ ಹೇಡಿಗಳು, ನಿರಭಿಮಾನಿಗಳೂ ಆದರೆ ನನಗೆ ಎಷ್ಟು ವ್ಯಥೆಯಾಗಲಿಕ್ಕಿಲ್ಲ?

ನಾನಿಷ್ಟು ಕಟುವಾಗಿ ಬೈಯುವೆ ಎಂದುಕೊಳ್ಳಬೇಡಿ ನಿಮ್ಮ ಮೇಲಿನ ನನ್ನವರೆಂಬ ಮೋಹದಿಂದಲೇ ಈ ಮಾತುಗಳನ್ನು ಆಡುತ್ತಿದ್ದೇನೆ. ನನ್ನವರು ಎಂದು ನಾನು ಭಾವಿಸುವಲ್ಲಿ ಹುಟ್ಟನಿಂದ ಲಿಂಗಾಯತರು ಅಷ್ಟೇ ಅಲ್ಲ ನಂಬಿಕೆ, ಧರ್ಮ-ಸ್ವೀಕೃತಿಯಿಂದ ಲಿಂಗಾಯತರಾದವರೂ ಸೇರಿರುತ್ತಾರೆ ಎಂಬುದು ನಿಮಗೆ ಮನವರಿಕೆಯಾಗಬೇಕು. ಹುಟ್ಟು ಲಿಂಗಾಯತರು ಹೆತ್ತ ಮಕ್ಕಳಾದರೆ ಧರ್ಮವನ್ನು ಸ್ವೀಕರಿಸಿ ಬಂದವರು ಪಡೆದ ಮಕ್ಕಳು ಅರ್ಥಾತ್ ದತ್ತು ಮಕ್ಕಳು. ಇಬ್ಬರಿಗೂ ಸಮಾನ ಹಕ್ಕುಬಾಧ್ಯತೆಗಳಿವೆ. ಇಂಥ ಎಲ್ಲ ಬಸವ ತತ್ತ್ವಾನುಯಾಯಿಗಳಾದ ಲಿಂಗವಂತ ದರ್ಮೀಯರನ್ನು ಸಂಘಟಿಸಲು, ಸಂಸ್ಕಾರ ನೀಡಲು, ವಚನ ವಾಙ್ಮಯವು ಪ್ರತಿಪಾದಿಸುವ ಶರಣ ಸಂಸ್ಕೃತಿಯ ಪ್ರಭಾವಕ್ಕೆ ಒಳಪಡಿಸಲು ವಿವಿಧ ಸ್ಥಳಗಳಲ್ಲಿ ಬಸವ ದರ್ಮ ಸಮ್ಮೇಳನಗಳನ್ನು ನನ್ನ ಸಂಕಲ್ಪದಂತೆ ಹಮ್ಮಿಕೊಳ್ಳಲಾಗುತ್ತಿದೆ. ನನ್ನ ವಿದ್ಯಾ ಭೂಮಿ, ತಪೋಸ್ಥಾನ, ಐಕ್ಯಕ್ಷೇತ್ರ ಕೂಡಲ ಸಂಗಮದಲ್ಲಿ ಬಸವ (ಲಿಂಗಾಯತ) ಧರ್ಮ ಸಂಸ್ಥಾಪನಾ ದಿನದ ಅಂಗವಾಗಿ ಪ್ರತಿವರ್ಷದ ಜನವರಿ 12 ರಿಂದ 15ರ ವರೆಗೆ ಶರಣ ಮೇಳವು 1988ರಿಂದಲೂ ನಡೆದು ಬರುತ್ತಿದೆಯಷ್ಟೆ. ಮುಸಲೀಮರಿಗೆ ಮೆಕ್ಕಾ, ಸಿಖ್ಖರಿಗೆ ಅಮೃತಸರ, ಬೌದ್ಧರಿಗೆ ಗಯೆ ಪವಿತ್ರ ಧರ್ಮಕ್ಷೇತ್ರಗಳಾದಂತೆ ಬಸವ ತತ್ತ್ವಾನುಯಾಯಿಗಳಿಗೆ ಕೂಡಲ ಸಂಗಮವೇ ಧರ್ಮಕ್ಷೇತ್ರವಾಗಿರುವ ಕಾರಣ, ಲಿಂಗಾಯತ ಧರ್ಮೀಯರು ವರ್ಷಕ್ಕೊಮ್ಮೆಯಾದರೂ ಒಂದು ಕಡೆ ಸೇರಿ,

ತಮ್ಮ ಧಾರ್ಮಿಕ ಅನುಯಾಯಿತ್ವವನ್ನು ಸ್ಥಿರೀಕರಿಸಬೇಕೆಂಬುದೇ ಶರಣ ಮೇಳದ ಉದ್ದೇಶ. ಎಲ್ಲೆಡೆಯಲ್ಲಿ ಚದುರಿ ಹೋಗಿರುವ ಲಿಂಗವಂತ ಧರ್ಮೀಯರನ್ನು ಸಂಘಟಿಸಲು, ಸಂಸ್ಕಾರ ನೀಡಲು ಮತ್ತು ಏಕರೂಪದ ಆಚಾರ - ವಿಚಾರಗಳನ್ನು ಸಮಾಜದಲ್ಲಿ ಆಳವಡಿಸಲು ಕರ್ನಾಟಕದ ಹೊರರಾಜ್ಯಗಳಲ್ಲಿ, ಕರ್ನಾಟಕದ ವಿವಿಧ ಸ್ಥಳಗಳಲ್ಲಿ ಬಸವ ಧರ್ಮ ಸಮ್ಮೇಳನ ನಡೆಸಬೇಕೆಂದು ಶರಣ ಮೇಳದ ಮಹಾಸಭೆಯಲ್ಲಿ ದಿ. 14-1-1993ರಂದು ನಿರ್ಣಯಕೈಗೊಳ್ಳಲಾಯಿತು. 1993ರ ಮೇ ತಿಂಗಳಿನಲ್ಲಿ ಮೊಟ್ಟ ಮೊದಲನೆಯ ಸಮ್ಮೇಳನವು ತಮಿಳುನಾಡಿನ ನೀಲಗಿರಿ ಜಿಲ್ಲೆಯ ಕಾಟೇರಿ ಡ್ಯಾಂಸೈಟ್ ಎಂಬಲ್ಲಿ ನಡೆಯಿತು. 1994ರ ಮೇ ತಿಂಗಳಿನಲ್ಲಿ ಎರಡನೆಯ ಸಮ್ಮೇಳನವು ಆಂಧ್ರ ಪ್ರದೇಶದ ರಾಜಧಾನಿ ಹೈದರಾಬಾದ್ ನಗರದಲ್ಲಿ ನಡೆಯಿತು. ಮೂರನೆಯ ಸಮ್ಮೇಳನವು 1995ನೆಯ ಮೇ ತಿಂಗಳಿನ 12, 13, 14ರಂದು ಕರ್ನಾಟಕದ ರಾಜಧಾನಿ ಬೆಂಗಳೂರಿನಲ್ಲಿ ನಡೆಯುತ್ತಿದೆ.

ಇಂಥ ಸಮ್ಮೇಳನವನ್ನು ನಡೆಸುವುದರಿಂದ ಶರಣ ಬಂಧುಗಳೆಲ್ಲ ಒಟ್ಟಾಗಿ ಸೇರಲು, ಪರಸ್ಪರ ಸಹೋದರ ಭಾವನೆಯಿಂದ ಬೆರೆಯಲು ಅವಕಾಶ ಒದಗುವುದು. ಕನ್ನಡವನ್ನೇ ಧರ್ಮ ಭಾಷೆಯನ್ನಾಗಿ ಹೊಂದಿರುವ ಲಿಂಗಾಯತ ಧರ್ಮದ ಅನುಯಾಯಿಗಳು ಧಾರ್ಮಿಕವಾಗಿ, ಸಾಮಾಜಿಕವಾಗಿ, ಸಾಂಸ್ಕೃತಿಕವಾಗಿ ಒಂದಾಗಬೇಕಾದರೆ ಇಂಥ ಗಣಸಮ್ಮೇಳನಗಳು, ತನ್ಮೂಲಕ ಶರಣ-ಸಮಾಗಮ ಅತ್ಯಗತ್ಯ. ನಾನೇ ಹೀಗೆ ಹೇಳಿರುವೆನಷ್ಟೆ.

ಲಕ್ಷಗಾವುದ ದಾರಿಯ ಹೋಗಿ
ಭಕ್ತನು ಭಕ್ತನ ಕಾಂಬುದು ಸದಾಚಾರ
ಅಲ್ಲಿ ಕೂಡಿ ದಾಸೋಹವ ಮಾಡಿದಡೆ
ಕೂಡಿಕೊಂಬನು ನಮ್ಮ ಕೂಡಲ ಸಂಗಮದೇವನು (-ಬ.ಷ.ವ. 246)

ಮಾನಸಿಕವಾಗಿ ,ಹಾರ್ದಿಕವಾಗಿ, ಧಾರ್ಮಿಕವಾಗಿ, ಸಾಂಸ್ಕೃತಿಕವಾಗಿ ನೀವು ಪರಸ್ಪರ ಹತ್ತಿರವಾಗಬೇಕಾದರೆ ಲಕ್ಷಗಾವುದ ದೂರವೇ ಇರಲಿ, ಹೋಗಿ ಭಕ್ತರನ್ನು ಕಾಣಬೇಕು. ಅವರೊಂದಿಗೆ ಕೂಡಿ ಒಡೆಯರಂತೆ, ಅತಿಥಿಗಳಂತೆ, ಜಂಬದಿಂದ ಬಿಗುಮಾನದಿಂದ ವರ್ತಿಸದೆ, ದಾಸೋಹವನ್ನು ಮಾಡಬೇಕು.

ಕಾಗೆಯೊಂದಗುಳ ಕಂಡಡೆ ಕೂಗಿ ಕರೆಯದೆ
ತನ್ನ ಬಳಗವೆಲ್ಲವನು.
ಕೋಳಿಯೊಂದು ಕುಟಕ ಕಂಡಡೆ ಕೂಗಿ ಕರೆಯದೆ
ತನ್ನ ಕುಲವನೆಲ್ಲವನು?
ಶಿವಭಕ್ತನಾಗಿ ಭಕ್ತಿಪಕ್ಷವಿಲ್ಲದಿದ್ದರೆ
ಆ ಕಾಗೆ ಕೋಳಿಗಳಿಗಿಂತ ಕರಕಷ್ಟ ಕೂಡಲಸಂಗಮದೇವಾ.

ಈ ಆದೇಶದಂತೆ ನೀವು ಭಕ್ತಿ ಪಕ್ಷವನ್ನು ಕಟ್ಟಿಕೊಂಡು ಬಾಳಬೇಕು. ಮಾನವ ಸಂಘಜೀವಿ, ಸಮಾಜ ಜೀವಿ, ಭಕ್ತಿಯನ್ನೇ ಸೂತ್ರವನ್ನಾಗಿ ಮಾಡಿಕೊಂಡು ಸಂಘ ಶಕ್ತಿಯನ್ನು ಬೆಳೆಸಬೇಕು.

ಸಂಸ್ಕಾರ - ಸಂಘಟನೆ - ಸಮಾನತೆ - ಸಹೋದರತ್ವ

ಜಾತಿವರ್ಣವರ್ಗರಹಿತ ಸಮಾಜ ಕಟ್ಟಲು ನಾನು ಸಾಧನವನ್ನಾಗಿ ಇಟ್ಟುಕೊಂಡದ್ದು ಧರ್ಮವನ್ನು. ನಮ್ಮ ನಿಮ್ಮೆಲ್ಲರನ್ನು ಬೆಸೆಯುವ ಸೂತ್ರ ಸೃಷ್ಟಿಕರ್ತನಾದ ಪರಮಾತ್ಮನು. ಪರಮಾತ್ಮನು ಕೊಟ್ಟ ಮರ್ತ್ಯಲೋಕ ಮತ್ತು ಮಾನವ ಜನ್ಮ ಎರಡೂ ಅಮೂಲ್ಯ ಸಾಧನಗಳು. ಆದ್ದರಿಂದ ಮಾನವನು ಉಳಿದ ಪಶು-ಪಕ್ಷಿ, ಕ್ರಿಮಿ - ಕೀಟಗಳಂತೆ ಕೇವಲ ಉಂಡುಟ್ಟು ಬದುಕುವ ಕ್ಷುಲ್ಲಕ ಜೀವನ ನಡೆಸದೆ ಸಂಸ್ಕಾರವನ್ನು ಪಡೆಯಬೇಕು. ಆ ಸಂಸ್ಕಾರವು ಮರೆವಿನ ಸೃಷ್ಟಿಯಲ್ಲಿ ಹುಟ್ಟಿದ ಮಾನವನನ್ನು ಅರಿವಿನ ಸೃಷ್ಟಿಗೆ ಒಯ್ದು ಶರಣನನ್ನಾಗಿ ಮಾಡಬೇಕು. ಸಂಸ್ಕಾರದ ಆಗತ್ಯವು ಎಲ್ಲರಿಗೂ ಇದೆ. ಆದ್ದರಿಂದ ಯಾವುದೇ ಬೇಧಭಾವ ಮಾಡದೆ ಧರ್ಮವು ಸಕಲ ಮಾನವರಿಗೂ ಸಂಸ್ಕಾರವನ್ನು ಕೊಡಬೇಕು.

ವ್ಯಕ್ತಿಯನ್ನು ವೈಯಕ್ತಿಕವಾಗಿ ಸಂಸ್ಕರಿಸಿದರೆ ಸಾಲದು, ಧರ್ಮವು ಎಲ್ಲ ವ್ಯಕ್ತಿಗಳನ್ನೂ ಸಂಘಟಿಸಿ, ಸಮುದಾಯ ಜೀವನದ ಬಗೆಯನ್ನೂ ಕಲಿಸಬೇಕು. ಸಂಘ ಶಕ್ತಿಯನ್ನು ಕ್ರೋಢೀಕರಿಸಿ ಎಲ್ಲರನ್ನೂ ಒಟ್ಟುಗೂಡಿಸಬೇಕಲ್ಲದೆ ಪರಸ್ಪರರಲ್ಲಿ ಆತ್ಮೀಯ ಬಾಂಧವ್ಯ ಮೂಡಿಸಬೇಕು. ಸಂಘಟನೆ ಸಾಧ್ಯವಾಗುವುದು ಶರಣರ ಸಂಗದಿಂದ, ಉಂಬ - ಉಡುವ ನಡೆಯಿಂದ, ಕೊಂಬ - ಕೊಡುವ ಸಾಮಾಜಿಕ ಬಾಂಧವ್ಯದಿಂದ. ಆದ್ದರಿಂದ ವಾರಕ್ಕೊಮ್ಮೆ, ವರ್ಷಕ್ಕೊಮ್ಮೆ, ಆಗಾಗ ಗಣಸಮ್ಮೇಳನಗಳ ಮೂಲಕ ನೀವೆಲ್ಲ ಸೇರಬೇಕು.

ದೀಕ್ಷಾವಂತರಾಗಿ ಗಣಲಾಂಛವನ್ನಾಗಿ ಇಷ್ಟಲಿಂಗವನ್ನು ದರಿಸಿದವರೆಲ್ಲರೂ ಸಮಾನರೆಂಬ ಬಾವ ನಿಮ್ಮಗಳಲ್ಲಿ ಮೂಡಬೇಕು. ದೇವರ ರಾಜ್ಯದ ಸಂಕೇತವೇ ಅನುಭವ (ಬಸವ) ಮಂಟಪ. ಆ ವಲಯವನ್ನು ಪ್ರವೇಶಿಸುತ್ತಲೇ ಪರಸ್ಪರರಲ್ಲಿರುವ ಜಾತಿ, ವರ್ಣ, ವರ್ಗ, ಉದ್ಯೋಗ ತಾರತಮ್ಯಗಳಳಿದು ಎಲ್ಲರೂ ಸಮಾನರೆಂಬ ಭಾವ ಬೆಳೆಯಬೇಕು. ದೀಕ್ಷಾವಂತನಾಗಿ ಅಂಗದ ಮೇಲೆ ದೇವರ ಕುರುಹನ್ನು ಧರಿಸಿದವರು ಯಾರೇ ಇರಲಿ ಅವರಲ್ಲಿ ಸದಾಚಾರ ಸಂಪನ್ನತೆಯನ್ನು ನೋಡಬೇಕೇ ವಿನಾ ಪೂರ್ವದ ಜಾತಿಯನ್ನಾಗಲೀ, ಕೈಗೊಂಡ ವೃತ್ತಿಯನ್ನಾಗಲಿ, ಆತನ ಆರ್ಥಿಕ ಸ್ಥಾನ - ಮಾನ ಅಂತಸ್ತುಗಳನ್ನಲ್ಲ.

ಸಮಾನತೆಯ ಜೊತೆಗೆ ಧಾರ್ಮಿಕ ಸಹೋದರತ್ವದ ಭಾವವು ಬಹಳ ಮುಖ್ಯ. ಎಲ್ಲರಲ್ಲಿಯೂ ಭಾವೈಕ್ಯತೆ ಮೂಡಬೇಕಾದರೆ ಒಂದು ತತ್ತ್ವದ ನೆಲೆಗಟ್ಟಿನಮೇಲೆ ನಿಲ್ಲಬೇಕು. ಅನುಭವ ಮಂಟಪವು ನೀಡಿದ ವಚನ ವಾಙ್ಮಯವೇ ನಿಮ್ಮ ಧಾರ್ಮಿಕ ಸಂವಿಧಾನವಾಗಿ ಅದರ ಮಾರ್ಗದರ್ಶನದಲ್ಲಿಯೇ ನೀವು ಸಾಗಬೇಕು. ಅಂಗದ ಮೇಲೆ ಇಷ್ಟಲಿಂಗವನ್ನು ದರಿಸಿದ ದೇವಭಕ್ತರೆಲ್ಲರೂ ಸಹೋದರರು ಎಂದು ಭಾವಿಸಿ, ಇನ್ನಿತರರನ್ನು ಸ್ನೇಹಿತರೆಂದು ಭಾವಿಸಬೇಕು. ರಕ್ತ ಸಂಬಂಧಿಗಳನ್ನಷ್ಟೆ ನಿಮ್ಮ ಬಂಧುಗಳೆಂದು ಭಾವಿಸದೆ ಭಕ್ತಿ ಸಂಬಂಧಿಗಳನ್ನು ವಿಶೇಷವಾಗಿ ಆದರಿಸಬೇಕು. ರಕ್ತಸಂಬಂಧ ಪ್ರಕೃತಿಯಿಂದ ನಿರ್ಮಾಣವಾದರೆ ಭಕ್ತಿ ಸಂಬಂಧ ನನ್ನನ್ನು ಪ್ರೀತಿಸುವವರ ಮಧ್ಯೆ ಉಂಟಾಗಿ, ಅದು ಆತ್ಮ ಸಂಬಂಧಿಯಾಗುತ್ತದೆ. ಸೃಷ್ಟಿಕರ್ತನಾದ ಪರಮಾತ್ಮನು ಇಷ್ಟಲಿಂಗವಾಗಿ ನನ್ನನ್ನು, ನಿಮ್ಮನ್ನು ನನ್ನ ಪಥದಲ್ಲಿ ನಡೆಯುವವರನ್ನೂ ದೇಶಕಾಲಾತೀತವಾಗಿ ಬಂಧಿಸುವುದರಿಂದ ಭಕ್ತಿ ಬಂಧನ ಅಪೂರ್ವ, ನಿಸ್ಸೀಮ. ಸುಖ ಬಂದಾಗ ಪರಸ್ಪರ ಹಂಚಿಕೊಂಡು ನಲಿದಾಡಿರಿ. ದುಃಖ ಬಂದಾಗ ಪರಸ್ಪರ ನೆರವಾಗಿರಿ. ಕಷ್ಟ - ನಷ್ಟಕಾರ್ಪಣ್ಯಗಳಲ್ಲಿ ಒಬ್ಬರಿಗೊಬ್ಬರು ಸಹಾಯ ಹಸ್ತ ನೀಡಿರಿ.

ನನ್ನ ಮುದ್ದಿನ ಮಗಳು, ಅನುಭವ ಮಂಟಪದ ಮಾಣಿಕ್ಯ ಅಕ್ಕಮಹಾದೇವಿ ಹೇಳುವುದಿಲ್ಲವೆ?

ಆದಿಅನಾದಿ ಎನ್ನದೆ ಬಸವಣ್ಣ ಗಣ ಮೇಳಾಪವಾಗಿ
ಅನಂತ ಯುಗಂಗಳಲ್ಲಿಯೂ
ಸಕಲ ಲೋಕದೊಳು ಚರಿಸುತ್ತಿಪ್ಪ ಮಹಿಮರನರಿಯದೆ
ಸಕಲ ನಿಃಕಲರೆಲ್ಲ ಭ್ರಮೆಗೊಂಡು ಬೀಳುತ್ತೇಳುತಿರ್ದರು
ಇವರೆಲ್ಲರ ಮುಂದೆ ಆ ಗಣಂಗಳ ನಾನರಿದು
ಬದುಕಿದೆನು ಕಾಣಾ ಚೆನ್ನಮಲ್ಲಿಕಾರ್ಜುನಾ.

ನೀವೆಲ್ಲ ಎಲ್ಲೆಲ್ಲಿ ಗಣಮೇಳಾಪ ಮಾಡುವಿರೋ ಅಲ್ಲಿ ನಾನು ನನ್ನ - ನಿಮ್ಮೆಲ್ಲರ ತಂದೆ ಸೃಷ್ಟಿಕರ್ತನೊಡನೆ ಇರುತ್ತೇನೆ. ಕರ್ತನ ಸದಿಚ್ಛೆಯಂತೆ ಅನುಗ್ರಹಿಸುತ್ತೇನೆ. ಈ ನನ್ನ ಮಾತುಗಳು ಅಹಂಕಾರದಿಂದ ಬಂದವಲ್ಲ. ಸೃಷ್ಟಿಕರ್ತನ ಆಶಯದಂತೆ, ಲಿಂಗವಶದಿಂದ ಬಂದ ನುಡಿಗಳು. ಆದ್ದರಿಂದ ಮಮತೆಯ ಮಕ್ಕಳೇ, ಗುರುವಿಗೆ ಶರಣಾಗಿ, ಲಿಂಗಕ್ಕೆ ಶರಣಾಗಿ, ಜಂಗಮಕ್ಕೆ ಶರಣಾಗಿ, ಬ್ರಹ್ಮಪದವಿ, ವಿಷ್ಣುಪದವಿ, ಇಂದ್ರ, ಪದವಿಗಳಿಗಿಂತ ಮಿಗಿಲಾದ ಗಣಪದವಿ (ಸಮಾಜದ ಸದಸ್ಯತ್ವ)ಯನ್ನು ಹೊಂದಿರಿ. ಸಮ್ಮೇಳನಕ್ಕೆ ನಿಮ್ಮೆಲ್ಲರ ಆಗಮನದ ನಿರೀಕ್ಷೆಯಲ್ಲಿರುವ ನಿಮ್ಮ ಅಪ್ಪ, ಧರ್ಮಕರ್ತ ಬಸವಣ್ಣ.

[ಗ್ರಹಿಸಿದವರು : ಬಸವಾತ್ಮಜೆ]

ಬಸವ ಧರ್ಮ ಸಮ್ಮೇಳನ

ಅಖಿಲ ಭಾರತ

ಬಸವ ಧರ್ಮ ತೃತೀಯ ಸಮ್ಮೇಳನ

1995ರ ಮೇ 12,13 ಮತ್ತು 14ರಂದು

ಸ್ಥಳ:

ಬಸವ ಮಹಾಮನೆ ಮಂಟಪ

ಬೆಂಗಳೂರಿನ ಮಲ್ಲೇಶ್ವರಂ ಬಡಾವಣೆಯಲ್ಲಿರುವ ಕಾರ್ಪೋರೇಷನ್ ಕ್ರೀಡಾಂಗಣ
(ಕೆ.ಸಿ. ಜನರಲ್ ಆಸ್ಪತ್ರೆ ಹಾಗೂ ಪೋಲಿಸ್ ಸ್ಟೇಷನ್ ಎದುರು)

ಬೆಂಗಳೂರು ನಗರ ಸಾರಿಗೆ - ಮೆಜೆಸ್ಟಿಕ್‌ನಿಂದ 96, 96D ಶಿವಾಜಿನಗರದಿಂದ 63, 74
ಕೆ.ಆರ್. ಮಾರ್ಕೆಟ್‌ನಿಂದ 77, 76, 91D, 95

ಪ್ರಾರಂಭೋತ್ಸವ

ಶುಕ್ರವಾರ ದಿನಾಂಕ : 12.5.1995 **ಬೆಳಿಗ್ಗೆ 10 ಘಂಟೆ**

ಬಸವಧ್ವಜಾರೋಹಣ : ಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು ಲಿಂಗಾನಂದ ಸ್ವಾಮಿಗಳು, ಬಸವಧರ್ಮ ಪೀಠ, ಕೂಡಲ ಸಂಗಮ

ಶರಣ ಮಂಟಪ ಉದ್ಘಾಟನೆ : ಸಮ್ಮೇಳನ ನಡೆಯುವ ಮೈದಾನದಲ್ಲಿ ಶರಣ ಮಂಟಪ,ಶರಣರ ಭಾವಚಿತ್ರ ಪ್ರದರ್ಶನವು ನೂರಾರು ಶರಣರ ಭಾವಚಿತ್ರಗಳನ್ನು ಹೊಂದಿದ್ದು, ಇದನ್ನು ಶ್ರೀ ಮುದ್ದೀರೇಶ್ವರ ಮೈನಿಂಗ್ ಇಂಡಸ್ಟ್ರೀಸ್‌ನ ಒಡೆಯರಾದ ಶರಣ ಕೆ.ಆರ್. ಸೋಮಶೇಖರ್ ಅವರು ಉದ್ಘಾಟಿಸಲಿದ್ದಾರೆ.

ಶರಣರ ಬರವೆಮಗೆ ಪ್ರಾಣ ಜೀವಾಳ

ಶರಣ ಎನ್. ಪುಟ್ಟರುದ್ರಪ್ಪ
ಪ್ರಧಾನ ಕಾರ್ಯದರ್ಶಿ

ಪೂಜ್ಯಶ್ರೀ ಜಗದ್ಗುರು ಮಾತೆ ಮಹಾದೇವಿ
ಕಾರ್ಯಾಧ್ಯಕ್ಷೆ

ಅಖಿಲ ಭಾರತ ಬಸವಧರ್ಮ ತೃತೀಯ ಸಮ್ಮೇಳನ ಸಮಿತಿ
ಬಸವ ಮಂಟಪ, 2035, 20ನೆಯ ಮೇನ್
2ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು-560 010. © 3325335

ಉದ್ಘಾಟನಾ ಸಮಾರಂಭ

ಶುಕ್ರವಾರ ದಿನಾಂಕ 12.5.1995 — ಬೆಳಿಗ್ಗೆ 10 ಗಂಟೆ

ದಿವ್ಯ ಸನ್ನಿಧಿ	: ಪೂಜ್ಯಶ್ರೀ ನಿ.ಪ್ರ. ಮಹಾಂತ ಸ್ವಾಮಿಗಳವರು ಚಿತ್ತರಗಿ ಸಂಸ್ಥಾನ ಮಠ, ಇಳಕಲ್
ಉದ್ಘಾಟನೆ	: ಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು ಲಿಂಗಾನಂದ ಮಹಾಸ್ವಾಮಿಗಳು, ಬಸವಧರ್ಮ ಪೀಠ, ಕೂಡಲಸಂಗಮ
ಅಧ್ಯಕ್ಷತೆ	: ಶರಣ ಡಿ.ಎಂ. ಚಂದ್ರಶೇಖರ್ ನಿವೃತ್ತ ಉನ್ನತ ನ್ಯಾಯಾಲಯದ ಮುಖ್ಯ ನ್ಯಾಯಮೂರ್ತಿಗಳು
ಪ್ರಸ್ತಾವನೆ	: ಪೂಜ್ಯಶ್ರೀ ಜಗದ್ಗುರು ಮಾತೆ ಮಹಾದೇವಿ ಕಾರ್ಯಾಧ್ಯಕ್ಷೆ, ಬಸವಧರ್ಮ ಸಮ್ಮೇಳನ ಸಮಿತಿ
ಮುಖ್ಯ ಅತಿಥಿಗಳಿಂದ ಪುಸ್ತಕ ಬಿಡುಗಡೆ	: ಶರಣೆ ರಾಣಿ ಸತೀಶ ಉಪಸಭಾಪತಿ, ವಿಧಾನ ಪರಿಷತ್ತು, ಬೆಂಗಳೂರು
ಪುಸ್ತಕ	: ವಿಶ್ವಜ್ಯೋತಿ ಬಸವಣ್ಣ
ನೆನಪಿನ ಕಾಣಿಕೆ ಬಿಡುಗಡೆ	: ಶರಣ ಎಸ್. ಷಡಕ್ಷರಿ ಎಂ.ಡಿ., ರಮಣಶ್ರೀ ಗ್ರೂಪ್, ಬೆಂಗಳೂರು
ವಿಶೇಷ ಆಹ್ವಾನಿತರು	: ಶರಣ ಕೆ.ಆರ್. ಸೋಮಶೇಖರ್ ಶ್ರೀ ಮುದ್ವೀರೇಶ್ವರ ಮೈನಿಂಗ್ ಇಂಡಸ್ಟ್ರೀಸ್, ಬೆಂಗಳೂರು.
ವಿಶೇಷ ಸಂಚಿಕೆ ಬಿಡುಗಡೆ	: ಹೊಸ ದಿಗಂತ - ಶರಣ ಬಸವಕುಮಾರ್ ಪಾಟೀಲರಿಂದ ಸಂಕ್ಷಿಪ್ತಸಮಾಚಾರ - ಶರಣ ಡಾ। ನಿತೀನಚಂದ್ರ, ಹತ್ತೀಕಾಳರಿಂದ
ಉಪಸ್ಥಿತರಿರುವ ಪೂಜ್ಯರು	: ಪೂಜ್ಯಶ್ರೀ ನಿ.ಪ್ರ. ಗುರುಬಸವಸ್ವಾಮಿಗಳು, ಪಾಂಡೋಮಟ್ಟಿ ಪೂಜ್ಯಶ್ರೀ ನಿ.ಪ್ರ. ಮಹಾಂತ ಸ್ವಾಮಿಗಳು, ಕೊಡ್ಲಿಪೇಟೆ ಪೂಜ್ಯಶ್ರೀ ಚಿದ್ಘನ ಸ್ವಾಮಿಗಳು, ಗಂಜಾಂಮಠ
ಪ್ರಾರ್ಥನೆ	: ರಾಷ್ಟ್ರೀಯ ಬಸವ ದಳ, ಬೆಂಗಳೂರು.
ಸ್ವಾಗತ	: ಶರಣ ಎಸ್. ಪುಟ್ಟರುದ್ರಪ್ಪ ಪ್ರಧಾನ ಕಾರ್ಯದರ್ಶಿ, ಬಸವ ಧರ್ಮ ಸಮ್ಮೇಳನ ಸಮಿತಿ
ಶರಣು ಸಮರ್ಪಣೆ	: ಶರಣ ಅನ್ನದಾನಯ್ಯ ಪುರಾಣಿಕ
ಸಭಾ ನಿರ್ವಹಣೆ	: ಶರಣ ಬಸವಕುಮಾರ್ ಪಾಟೀಲ

ಸಕಲ ಜೀವಾತ್ಮರಿಗೆ ಲೇಸು ಬಯಸುವವನೇ ಶರಣ

— ಧರ್ಮಪಿತ ಬಸವಣ್ಣನವರು

ಧರ್ಮ ಚಿಂತನ ಗೋಷ್ಠಿ

ಶುಕ್ರವಾರ ದಿನಾಂಕ 12.5.1995 — ಮಧ್ಯಾಹ್ನ 4 ಗಂಟೆ

ಬಸವ ಧ್ವಜಾರೋಹಣ	: ಪೂಜ್ಯಶ್ರೀ ಸದ್ಗುರು ಮಾತೆ ಗಂಗಾದೇವಿ ಜಗನ್ಮಾತಾ ಅಕ್ಕಮಹಾದೇವಿ ಆಶ್ರಮ, ಧಾರವಾಡ
ದಿವ್ಯಸನ್ನಿಧಿ	: ಪೂಜ್ಯಶ್ರೀ ಸದ್ಗುರು ಸದಾನಂದ ಪ್ರಭು ಸ್ವಾಮಿಗಳು ಮಂಗಲಮಠ, ಶಿರಗುಪ್ಪಿ
ಉದ್ಘಾಟನೆ	: ಪೂಜ್ಯಶ್ರೀ ನಿ.ಪ್ರ. ಜಗದ್ಗುರು ಮಲ್ಲಿಕಾರ್ಜುನ ಮುರುಘರಾಜೇಂದ್ರ ಸ್ವಾಮಿಗಳು, ಆನಂದಪುರಂ
ಪ್ರಸ್ತಾವನೆ	: ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ ಕಾರ್ಯಾಧ್ಯಕ್ಷೆ, ಬಸವ ಧರ್ಮ ಪೀಠ
ಮುಖ್ಯ ಅತಿಥಿಗಳಿಂದ ಪುಸ್ತಕ ಬಿಡುಗಡೆ	: ಶರಣ ಭೀಮಣ್ಣ ಖಂಡ್ರೆ ಮಾಜಿ ಸಚಿವರು ಮತ್ತು ವಿಧಾನ ಪರಿಷತ್ತು ಸದಸ್ಯರು
ಪುಸ್ತಕ	: ಅನ್ನದಾನಯ್ಯ ಪುರಾಣಿಕರ “ವಚನ ಪ್ರಕಾಶ”
ಮುಖ್ಯ ಉಪನ್ಯಾಸಕರು	: ಶರಣ ಸಿ. ಸೋಮಶೇಖರ್ ವಿಶೇಷ ಜಿಲ್ಲಾಧಿಕಾರಿಗಳು, ಬೆಂಗಳೂರು ಶರಣ ಶಿವಶರಣಪ್ಪ ವಾಲಿ ಸಂಪಾದಕರು, ಉತ್ತರ ಕರ್ನಾಟಕ ಪತ್ರಿಕೆ, ಬೀದರ್
ವಿಶೇಷ ಉಪನ್ಯಾಸ	: ಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು ಲಿಂಗಾನಂದ ಸ್ವಾಮಿಗಳು
ವಿಷಯ	: ಇಷ್ಟಲಿಂಗವು ವಿಶ್ವಾತ್ಮ ಕುರುಹು
ಬಸವ ಭಾವಚಿತ್ರ ಬಿಡುಗಡೆ	: ಪೂಜ್ಯಶ್ರೀ ನಿ.ಪ್ರ. ಚನ್ನವೀರ ಮಹಾಸ್ವಾಮಿಗಳು ಶ್ರೀ ಶಿವಲಿಂಗೇಶ್ವರ ಮಠ, ಮೂಡಿ
ಅಧ್ಯಕ್ಷತೆ	: ಪೂಜ್ಯಶ್ರೀ ಜಯಚಂದ್ರಶೇಖರ ಸ್ವಾಮಿಗಳು ಬಸವತತ್ತ್ವಪೀಠ, ಚಿಕ್ಕಮಗಳೂರು
ಉಪಸ್ಥಿತರಿರುವ ಪೂಜ್ಯರು	: ಪೂಜ್ಯಶ್ರೀ ನಿ.ಪ್ರ. ಮಲ್ಲಿಕಾರ್ಜುನ ಸ್ವಾಮಿಗಳು ಶ್ರೀ ಗುರುವಣ್ಣದೇವರ ಮಠ, ಬೆಂಗಳೂರು
ಸ್ವಾಗತ	: ಶರಣ ಡಾ. ನಿತೀನ ಚಂದ್ರ ಹತ್ತೀಕಾಳ
ಶರಣು ಸಮರ್ಪಣೆ	: ಶರಣ ನಿಜಗುಣಾನಂದಸ್ವಾಮಿ
ಸಭಾ ನಿರ್ವಹಣೆ	: ಶರಣ ಡಿ.ಎಸ್. ವಿಜಯಕುಮಾರ್

862ನೆಯ ಬಸವ ಜಯಂತಿ ಉತ್ಸವ

ಶನಿವಾರ ದಿನಾಂಕ 13.5.1995 ಬೆಳಿಗ್ಗೆ 10 ಗಂಟೆ

ಬಸವ ಧ್ವಜಾರೋಹಣ	:	ಪೂಜ್ಯಶ್ರೀ ಜಯಚಂದ್ರಶೇಖರ ಸ್ವಾಮಿಗಳು ಬಸವ ತತ್ತ್ವಪೀಠ, ಚಿಕ್ಕಮಗಳೂರು
ದಿವ್ಯ ಸನ್ನಿಧಿ	:	ಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು ಲಿಂಗಾನಂದ ಮಹಾಸ್ವಾಮಿಗಳು
ಉದ್ಘಾಟನೆ	:	ಪೂಜ್ಯಶ್ರೀ ಜಗದ್ಗುರು ಬಾಲಗಂಗಾಧರನಾಥ ಮಹಾಸ್ವಾಮಿಗಳು ಆದಿ ಚುಂಚನಗಿರಿ ಮಠ
ಅಧ್ಯಕ್ಷತೆ	:	ಶರಣ ಎನ್. ತಿಪ್ಪಣ್ಣ ಎಂ.ಎಲ್.ಸಿ. ಅಧ್ಯಕ್ಷರು, ವೀರಶೈವ ವಿದ್ಯಾವರ್ಧಕ ಸಂಘ, ಬಳ್ಳಾರಿ
ಪ್ರಸ್ತಾವನೆ	:	ಪೂಜ್ಯಶ್ರೀ ಜಗದ್ಗುರು ಮಾತೆ ಮಹಾದೇವಿ ಕಾರ್ಯಾಧ್ಯಕ್ಷೆ, ಬಸವ ಧರ್ಮ ಪೀಠ, ಕೂಡಲ ಸಂಗಮ
ಮುಖ್ಯ ಅತಿಥಿಗಳು	:	ಶರಣ ಜಿ. ಕುಪ್ಪುಸ್ವಾಮಿ ಮಹಾಪೌರರು, ಬೆಂಗಳೂರು ಮಹಾನಗರ ಪಾಲಿಕೆ
ಪುಸ್ತಕ ಬಿಡುಗಡೆ	:	ಶರಣ ಸಿ. ಚಂದ್ರಶೇಖರ್ ಅಧ್ಯಕ್ಷರು, ರಾಷ್ಟ್ರೀಯ ಬಸವದಳ, ಹಾಸನ
ಪುಸ್ತಕ	:	ಬಸವ ಧರ್ಮದ ಸಂಸ್ಕಾರಗಳು
ಪುಸ್ತಕ ದಾನಿಗಳಿಗೆ ಸತ್ಕಾರ	:	ಶರಣ ಗವೀರಪ್ಪ, ದೊಡ್ಡನಲ್ಲೂರು ಹಳ್ಳಿ
ಪುಸ್ತಕ ಬಿಡುಗಡೆ	:	ಪೂಜ್ಯಶ್ರೀ ಮ.ಘ.ಚ. ಬಸವಲಿಂಗ ಪಟ್ಟಾಧ್ಯಕ್ಷರು ಹಿರೇಮಠ ಸಂಸ್ಥಾನ, ಭಾಲ್ಕಿ
ಪುಸ್ತಕ	:	ಪತಿತೋದ್ಧಾರಕ ಬಸವಣ್ಣ
ಕಲ್ಯಾಣ ಕಿರಣ ಬಿಡುಗಡೆ	:	ಶರಣ ಆರ್.ಬಿ. ಹೆಬ್ಬಳ್ಳಿ ಮೆ॥ ಮಂಜುನಾಥ ಬಿಲ್ಡರ್ಸ್, ಮುಂಬಯಿ
ಸತ್ಕಾರ	:	ಶರಣ ಬಪ್ಪನಾಡು ರಾಘವ ಸಂಕ್ಷಿಪ್ತ ಸಮಾಚಾರ ಶರಣ ಶರತ್‌ಕುಮಾರ್, ಹೊಸದಿಗಂತ ಶರಣ ಎಸ್.ವಿ. ಮುದ್ದಪ್ಪ, ಸಂಚಾರಿ ಲೋಕ ಶರಣೆ ಸುಶೀಲಮ್ಮ, ಸುಮಂಗಲಿ ಸೇವಾಶ್ರಮ

ಬಸವ ಜಯಂತಿ ನಿಮಿತ್ತವಾಗಿ ತೊಟ್ಟಿಲು ಕಾರ್ಯಕ್ರಮ. ಬಸವಣ್ಣನವರಿಗೆ ಆರತಿ ಪುಷ್ಪವೃಷ್ಟಿ ಇರುವುದು. ಗಣನಾಯಕ ಮತ್ತು ಗಣ ನಾಯಕಿಯರಿಗೆ ಅಧಿಕಾರ ಪ್ರದಾನ ಸಮಾರಂಭ. ಇದರಲ್ಲಿ ಪ್ರತಿಜ್ಞಾವಿಧಿ ಬೋಧೆ ಇರುವುದು.

ಸ್ವಾಗತ	:	ಶರಣ ಬಸವಕುಮಾರ್ ಪಾಟೀಲ
ಮಾಲಾರ್ಪಣೆ	:	ರಾಷ್ಟ್ರೀಯ ಬಸವದಳ, ಹಾಸನ
ಶರಣು ಸಮರ್ಪಣೆ	:	ಶರಣ ಕೊಂಡಜ್ಜಿ ಜಿ. ಬಸಪ್ಪ
ಸಭಾ ನಿರ್ವಹಣೆ	:	ಶರಣೆ ಅಕ್ಕ ಅನ್ನಪೂರ್ಣ, ಬೀದರ

ಬಸವಜಯಂತಿ ಮೆರವಣಿಗೆ ಮತ್ತು ಪಥ ಸಂಚಲನ

ಶನಿವಾರ ದಿನಾಂಕ 13.5.1995 ಮಧ್ಯಾಹ್ನ 3.30ರಿಂದ

ಹೊರಡುವ ಸ್ಥಳ : ಚಿಕ್ಕಲಾಲ್‌ಬಾಗ್, ಸುಭಾಷ್‌ನಗರದ ಮೆಜೆಸ್ಟಿಕ್ ಕೇಂದ್ರ ಬಸ್‌ನಿಲ್ದಾಣದ ಬಳಿ

ಉದ್ಘಾಟನೆ : ಪೂಜ್ಯಶ್ರೀ ಸದ್ಗುರು ಸದಾನಂದ ಪ್ರಭು ಸ್ವಾಮೀಜಿ
ಮಂಗಲ ಮಠ, ಶಿರಗುಪ್ಪಿ.

ವಿಶ್ವಗುರು ಬಸವಣ್ಣನವರ 862ನೆಯ ಜಯಂತಿ ಉತ್ಸವದ ನಿಮಿತ್ತ ಮೆರವಣಿಗೆ ಮತ್ತು ಪಥ ಸಂಚಲನವನ್ನು ಏರ್ಪಡಿಸಲಾಗಿದೆ. ಬೆಂಗಳೂರು ನಗರದ ಕೇಂದ್ರ ಪ್ರದೇಶವಾದ ಮೆಜೆಸ್ಟಿಕ್ ಬಳಿಯ ಚಿಕ್ಕಲಾಲ್‌ಬಾಗ್‌ದಿಂದ ಹೊರಡುವ ಮೆರವಣಿಗೆಯು ಸುಭಾಷ್‌ನಗರ, ಆನಂದರಾವ್ ವೃತ್ತ, ಶಿವಾನಂದ ವೃತ್ತ, ಶೇಷಾದ್ರಿಪುರಂನ ಸೆಂಟ್ರಲ್ ಟಾಕೀಸ್ ಮಾರ್ಗವಾಗಿ ಮಲ್ಲೇಶ್ವರಂ ಸರ್ಕಲ್ ಮೂಲಕ ಕ್ರಮಿಸಿ ಮಲ್ಲೇಶ್ವರಂನಲ್ಲಿರುವ ಬಸವ ಮಹಾಮನೆ ಸಭಾಮಂಟಪವನ್ನು ತಲುಪುವುದು. ಶ್ರೀ ಗುರು ಬಸವಣ್ಣನವರ ಭಾವಚಿತ್ರ, ಮೂರ್ತಿಯೊಡನೆ ಬಸವ ಗುರು ನಿಷ್ಠೆಯನ್ನು ಅಂಗವಿಸಿಕೊಂಡು ಬಸವ ಪಥದಲ್ಲಿ ನಡೆಯುತ್ತಿರುವ ಜಂಗಮ, ಪುಂಗವರ ಮೆರವಣಿಗೆಯು ತೆರೆದ ಅಲಂಕೃತ ವಾಹನಗಳಲ್ಲಿ ಜರುಗುವುದು. ಮೆರವಣಿಗೆಯಲ್ಲಿ ಅನೇಕ ಸ್ತಬ್ಧ ಚಿತ್ರಗಳಿದ್ದು ವಿವಿಧ ಶರಣರ ವೇಷಗಳನ್ನು ಧರಿಸಿದ ಪಾತ್ರಧಾರಿಗಳು ಇರುತ್ತಾರೆ.

ಶರಣ ಬಂಧುಗಳು ಬಿಳಿಯ ಸಮವಸ್ತ್ರ ಧರಿಸಿ, ಕಾವಿಯ ಬಣ್ಣದ ಸ್ಕಾರ್ಫ್, ಮೆಟಲ್ ಬ್ಯಾಡ್ಜ್ ಧರಿಸಿರಬೇಕು. ರಾಷ್ಟ್ರೀಯ ಬಸವದಳದವರಿಗೆ ಬಿಳಿಯ ವಸ್ತ್ರಗಳನ್ನು ಸಮವಸ್ತ್ರವಾಗಿ ಮಾಡಲಾಗಿದೆ. ತರುಣರು ಕುರ್ತಾ ಕಮೀಜ್ (ನೆಹರು ಡ್ರೆಸ್) ಅನ್ನು, ಶರಣೆಯರು ಬಿಳಿಯ ಸೀರೆ, ಸಮವಸ್ತ್ರ ತೊಟ್ಟು ಸ್ಕಾರ್ಫ್ ಹೊದೆಯಬೇಕು. ಬಸವಲಿಂಗ ಮುದ್ರೆಯ ಟೋಪಿಯನ್ನು ಶರಣರು ಕಡ್ಡಾಯವಾಗಿ ಧರಿಸಬೇಕು. ಶರಣೆಯರೂ ಸ್ವಯಂ ಪ್ರೇರಣೆಯಿಂದ ಟೋಪಿ ಧರಿಸಬಹುದು, ಒತ್ತಾಯವಿಲ್ಲ. ಕಾವಿ ಸ್ಕಾರ್ಫ್ ಉಭಯತರಿಗೂ ಕಡ್ಡಾಯವಿರುವುದು. ದ್ವಿಚಕ್ರ ವಾಹನ ಉಳ್ಳವರು ಅವುಗಳಿಗೆ ಕಾವಿಯ ಬಸವ ಧ್ವಜ ಕಟ್ಟಿ, ತಮ್ಮ ವಾಹನಗಳ ಮೇಲೆಯೇ ಚಲಿಸಬಹುದು. ಕಾರು, ವ್ಯಾನ್, ಜೀಪ್‌ಗಳು ಬಹಳ ಸ್ಥಳವನ್ನು ಆಕ್ರಮಿಸುವುದರಿಂದ ಅವನ್ನು ಸಂಗಡ ತರಬಾರದು. ಒಂದು ಕಡೆ ನಿಲ್ಲಿಸಿ ಮೆರವಣಿಗೆಯಲ್ಲಿ ನಡೆಯಬೇಕು. ಮೆರವಣಿಗೆಯಲ್ಲಿ ಸಾಗುವವರಿಗೆ ಕುಡಿಯುವ ನೀರು, ಮಜ್ಜಿಗೆ ಕೊಡಲಾಗುವುದು.

ಸಾಮೂಹಿಕ ಇಷ್ಟಲಿಂಗಾರ್ಚನೆ

ಶನಿವಾರ ದಿನಾಂಕ 13.5.1995 ಸಂಜೆ 6.30

ಬಸವ ತತ್ತ್ವದ ಜೀವಾಳ ಕರ್ತನ ಆರಾಧನೆ. ಸೃಷ್ಟಿಕರ್ತನನ್ನು ವಿಶ್ವದಾಕಾರದಲ್ಲಿ ಚುಳುಕಾಗಿಸಿಕೊಂಡು ಪೂಜಿಸುವುದು ಈ ಶಿವಪಥದ ಮುಖ್ಯ ಆಚರಣೆ. ವಿಶ್ವಗುರು ಬಸವಣ್ಣನವರ ದಿವ್ಯ ಕೃಪೆಯಿಂದ ದೇವರ ಕುರುಹಾದ ಇಷ್ಟಲಿಂಗವನ್ನು ಎಲ್ಲರೂ ಧರಿಸಿಕೊಂಡು ಪೂಜಿಸುವ ಪರಮ ಭಾಗ್ಯ ಲಿಂಗಾಯಿತ ಧರ್ಮದ ಅನುಯಾಯಿಗಳಿಗೆ ಸಿಕ್ಕಿದೆ. ಏಕೇಶ್ವರವಾದ ಪ್ರತಿಪಾದನೆ ಮಾತ್ರವಲ್ಲದೆ ಏಕದೇವೋಪಾಸನೆಯೂ ಇದಾಗಿದೆ. ಇಂಥ ವಿಶೇಷ ಕ್ರಿಯೆಯು ದಿನದಿನಕ್ಕೆ ಲಿಂಗವಂತ ಧರ್ಮದ ಅನುಯಾಯಿಗಳ ಅಜ್ಞಾನದಿಂದ ನಶಿಸಿ ಹೋಗುತ್ತಿದೆ. ಆದ್ದರಿಂದ ಇಷ್ಟಲಿಂಗ ಪೂಜೆಯ ಹಿಂದೆ ಇರುವ ವೈಜ್ಞಾನಿಕತೆಯ ಜೊತೆಗೆ ನಿಜಾರ್ಥವನ್ನು ತಿಳಿಸಿ ಪೂಜೆಯನ್ನು ತೋರಿಸಲಾಗುವುದು. ಶರಣ ಬಂಧುಗಳು ಪೂಜಾ ಸಾಮಗ್ರಿಗಳೊಡನೆ ಬಂದು ಪೂಜೆಯಲ್ಲಿ ಭಾಗಿಗಳಾಗಬೇಕು. ಸಮೃದ್ಧತೆ, ಸ್ವಾಭಿಮಾನ, ಸಮಾನತೆ, ಸಹೋದರತ್ವಗಳಿಂದ ಕೂಡಿರುವ ಬಸವ ತತ್ತ್ವದ ತಳಹದಿಯ ಮೇಲೆ ಲಿಂಗವಂತ ಸಮಾಜ ನಿರ್ಮಾಣದ ಸಂಕಲ್ಪ ಹೊತ್ತು ಈ ಪೂಜೆಯನ್ನು ಮಾಡಬನ್ನಿ. (ವಿಶೇಷ ವಿವರಗಳಿಗಾಗಿ ಪುಟ 12 ನೋಡಿರಿ)

ಉದ್ಘಾಟಕರು	:	ಪೂಜ್ಯಶ್ರೀ ಬಸವಲಿಂಗ ಪಟ್ಟಾಧ್ಯಕ್ಷರು, ಭಾಲ್ಕಿ
ಪ್ರಜಾಪ್ರಾತ್ಯಕ್ಷಿತೆ	:	ಪೂಜ್ಯಶ್ರೀ ಜಗದ್ಗುರು ಮಾತೆ ಮಹಾದೇವಿ
ಸಭಾ ನಿರ್ವಹಣೆ	:	ಪೂಜ್ಯಶ್ರೀ ಸದ್ಗುರು ಮಾತೆ ಗಂಗಾದೇವಿ

ಲಿಂಗಾಯತ ಸಮಾಜ ಸಂಘಟನೆ ಬಗ್ಗೆ ಚರ್ಚೆ

ಭಾನುವಾರ ದಿನಾಂಕ 14.5.1995 ಬೆಳಿಗ್ಗೆ 10 ಗಂಟೆ

ಧ್ವಜಾರೋಹಣ : ಪೂಜ್ಯಶ್ರೀ ಮುಮ್ಮಡಿ ನಿರ್ವಾಣ ಸ್ವಾಮಿಗಳು
ದೇಗುಲ ಮಠ, ಕನಕಪುರ

ದಿವ್ಯ ಸನ್ನಿಧಿ : ಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು
ಲಿಂಗಾನಂದ ಮಹಾಸ್ವಾಮಿಗಳು

ಸಮ್ಮುಖ : ಪೂಜ್ಯಶ್ರೀ ನಿ.ಪ್ರ. ನಿಜಗುಣ ಸ್ವಾಮಿಗಳು
ಜಂಗಮಮಠ, ಬೆಂಗಳೂರು

ಉದ್ಘಾಟನೆ : ಪೂಜ್ಯಶ್ರೀ ನಿ.ಪ್ರ. ಮಹಾಂತಸ್ವಾಮಿಗಳು
ಚಿತ್ತರಗಿ ಸಂಸ್ಥಾನಮಠ, ಇಳಕಲ್

ಪ್ರಾಸ್ತಾವಿಕ ಭಾಷಣ : ಪೂಜ್ಯಶ್ರೀ ನಿ.ಪ್ರ. ಶಿವರುದ್ರಸ್ವಾಮಿಗಳು
ಬೇಲೀಮಠ, ಬೆಂಗಳೂರು

ಮುಖ್ಯ ಅತಿಥಿಗಳು : ಶರಣ ಭೀಮಣ್ಣ ಖಂಡ್ರೆ, ಎಂ.ಎಲ್.ಸಿ.
ಮಾಜಿ ಸಚಿವರು, ಬೆಂಗಳೂರು

ಉಪನ್ಯಾಸಗಳು : ಶರಣ ಡಾ ಎಂ. ಚಿದಾನಂದಮೂರ್ತಿ
ಅಧ್ಯಕ್ಷರು, ಕನ್ನಡ ಶಕ್ತಿ ಕೇಂದ್ರ, ಬೆಂಗಳೂರು
ಶರಣೆ ಪ್ರಮೀಳಾ ನೇಸರ್ಗಿ, ಶಾಸಕರು, ಬೆಂಗಳೂರು
ಶರಣ ಬಸವಕುಮಾರ್ ಪಾಟೀಲರು
ಅಧ್ಯಕ್ಷರು, ರಾಷ್ಟ್ರೀಯ ಬಸವದಳ, ರಾಜ್ಯ ಸಮಿತಿ

ಪುಸ್ತಕ ಬಿಡುಗಡೆ : ಪೂಜ್ಯ ಶ್ರೀ ನಿ.ಪ್ರ ಶಿವಾನಂದ ಸ್ವಾಮಿಗಳು
ಶ್ರೀ ಗುರುಬಸವೇಶ್ವರ ಸಂಸ್ಥಾನಮಠ, ಹುಲಸೂರು

ಅಧ್ಯಕ್ಷತೆ : ಶರಣ ಅನ್ನದಾನಯ್ಯ ಪುರಾಣಿಕ
ನ್ಯಾಯವಾದಿಗಳು, ಬೆಂಗಳೂರು

ಸಮಾರೋಪ : ಪೂಜ್ಯಶ್ರೀ ಜಗದ್ಗುರು ಮಾತೆ ಮಹಾದೇವಿ

ವಿಶೇಷ ಆಹ್ವಾನಿತರು : ಶರಣ ಜಗದೀಶ ಶೆಟ್ಟರ್, ಶಾಸಕರು, ಹುಬ್ಬಳ್ಳಿ

ಸ್ವಾಗತ : ಶರಣ ರಾಜಶೇಖರ್ ಚಂದನಗೌಡರು, ವಕೀಲರು

ಮಾಲಾರ್ಪಣೆ : ಶರಣ ವಿ.ಟಿ. ರಾಯರೆಡ್ಡಿ, ವಕೀಲರು

ಶರಣು ಸಮರ್ಪಣೆ : ಶರಣ ಪ್ರೊ। ಜಿ.ಬಿ. ಹಳ್ಯಾಳ, ಗದಗ

ಸಭಾ ನಿರ್ವಹಣೆ : ಶರಣ ನಿಜಗುಣಾನಂದ ಸ್ವಾಮಿ

ಸಮಾರೋಪ ಮತ್ತು ಸತ್ಕಾರ ಸಮಾರಂಭ

ಭಾನುವಾರ ದಿನಾಂಕ 14.5.1995 ಸಂಜೆ 4 ಗಂಟೆ

ಧ್ವಜಾರೋಹಣ : ಪೂಜ್ಯಶ್ರೀ ಸದಾಶಿವ ಸ್ವಾಮಿಗಳು
ಶ್ರೀ ಬಸವೇಶ್ವರ ದೇವರ ಮಠ, ನೆಲಮಂಗಲ

ಸನ್ನಿಧಿ : ಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು
ಲಿಂಗಾನಂದ ಸ್ವಾಮಿಗಳು

ಸಮ್ಮುಖ : ಪೂಜ್ಯಶ್ರೀ ನಿ.ಪ್ರ. ಶಿವಲಿಂಗಸ್ವಾಮಿಗಳು
ತಣ್ಣೀರುಹಳ್ಳಮಠ, ಹಾಸನ

ಅಧ್ಯಕ್ಷತೆ : ಶರಣ ಚಂದ್ರಕಾಂತ ಬೆಲ್ಲದ, ಶಾಸಕರು, ಧಾರವಾಡ

ಉದ್ಘಾಟನೆ : ಪೂಜ್ಯಶ್ರೀ ನಿ.ಪ್ರ. ಶಿವರುದ್ರಸ್ವಾಮಿಗಳು, ಬೇಲೀಮಠ

ಪ್ರಸ್ತಾವನೆ : ಶರಣ ಎನ್. ಪುಟ್ಟರುದ್ರಪ್ಪ
ಪ್ರಧಾನ ಕಾರ್ಯದರ್ಶಿ, ಬಸವ ಧರ್ಮ ಸಮ್ಮೇಳನ ಸಮಿತಿ

ಮುಖ್ಯ ಅತಿಥಿಗಳು : ಶರಣ ಕೆ.ಬಿ. ಷಣ್ಮುಖಪ್ಪ
ಮುಖ್ಯ ಕಮೀಷನರ್, ಭಾರತ ಸ್ಕೌಟ್ ಅಂಡ್ ಗೈಡ್ಸ್

ಪುಸ್ತಕ ಬಿಡುಗಡೆ : ಶರಣ ಪದ್ಮಶ್ರೀ ಆರ್.ಎಂ.ಬಿ. ಆರಾಧ್ಯ
ಪುಸ್ತಕ ವಚನ ಪ್ರಸಾದಕ್ಕಾಗಿ "ಬಸವ ಭಾಸ್ಕರ"

ಉಪನ್ಯಾಸಕರು : ಶರಣ ಡಾ. ಎಸ್. ಆರ್. ಗುಂಜಾಳ
ನಿವೃತ್ತ ಗ್ರಂಥಾಲಯ ವಿಭಾಗ ಮುಖ್ಯಸ್ಥರು
ಶರಣ ಪ್ರೊ. ಬಿ.ಎಂ. ಬಿರಾದಾರ
ಪ್ರಾಂಶುಪಾಲರು, ಮಹಾವಿದ್ಯಾಲಯ, ಸಿಂದಗಿ

ವಿಶೇಷ ಆಹ್ವಾನಿತರು : ಶರಣ ಎಂ.ಕೆ. ಮಲ್ಲಯ್ಯರಾಜ್, ಭವಾನಿ

ನಿರ್ಣಯಗಳ ಮಂಡನೆ : ವಿವಿಧ ಶರಣ ಬಂಧುಗಳಿಂದ

ನಿರ್ಣಯಗಳ ಘೋಷಣೆ : ಪೂಜ್ಯಶ್ರೀ ಜಗದ್ಗುರು ಮಾತೆ ಮಹಾದೇವಿ

ಸತ್ಕಾರ : ವಿಶೇಷ ದಾಸೋಹಿಗಳು

೧. ಶರಣ ಕೆ.ಆರ್. ಸೋಮಶೇಖರ್, ಶ್ರೀ ಮುದ್ದೀರೇಶ್ವರ ಮೈನಿಂಗ್ ಇಂಡಸ್ಟ್ರೀಸ್, ಬೆಂಗಳೂರು
೨. ಶರಣ ಎಸ್. ಷಡಕ್ಷರಿ, ಎಂ.ಡಿ. ರಮಣಶ್ರೀ ಗ್ರೂಪ್, ಬೆಂಗಳೂರು
೩. ಶರಣ ಪದ್ಮಶ್ರೀ ಆರ್.ಎಂ.ಬಿ. ಆರಾಧ್ಯ
ವಾಣಿಜ್ಯೋದ್ಯಮಿಗಳು, ಸಮಾಜ ನೇತಾರರು, ಬೆಂಗಳೂರು
೪. ಶರಣ ಜಿ.ಆರ್. ಷಣ್ಮುಖಪ್ಪ, ಪ್ರೊ. ಬ್ಲೆಂಡ್ ಪ್ಯಾಕ್, ಬೆಂಗಳೂರು

ಮಹಾಮಹಿಮ ಸಂಗನ ಬಸವಣ್ಣನು ಎನಗೆಯೂ ಗುರು ನಿನಗೆಯೂ ಗುರು ಜಗವೆಲ್ಲಕ್ಕೂ ಗುರು ಕಾಣಾ ಗುಹೇಶ್ವರ

ಬಸವ ಧರ್ಮ ಸಮ್ಮೇಳನ

೫. ಶರಣ ಜೆ.ಸಿ. ಗಂಗಯ್ಯ, ಶರಣ ದಾಸೋಹಿ, ಶಿಗ್ಗಾಂವ
೬. ಶರಣ ಶ್ರೀಕಂಠ ಕುಮಾರ್, ಶರಣ ದಾಸೋಹಿ, ಬೆಂಗಳೂರು
೭. ಶರಣೆ ಸೌಭಾಗ್ಯ ಮತ್ತು ಬಿ.ಕೆ. ನಾಗರಾಜು, ಮೈಸೂರು
೮. ಮೆ॥ ಸೂರ್ಯ ಟ್ರಾನ್ಸ್‌ಮಿಷನ್ ಇಂಜಿನಿಯರಿಂಗ್ ವರ್ಕ್ಸ್
೯. ಶರಣ ಬಿ. ಮುನಿಕೃಷ್ಣಪ್ಪ, ಗುತ್ತಿಗೆದಾರರು, ವಿಜಯಪುರ
೧೦. ಶರಣ ಸಿ. ಕಂತೆಪ್ಪ, ವ್ಯಾಪಾರಿಗಳು, ವಿಜಯಪುರ
೧೧. ಮೆ॥ ಚೈತ್ರಶ್ರೀ ಫೈನಾನ್ಶಿಯರ್, ವಿಜಯಪುರ
೧೨. ರಾಷ್ಟ್ರೀಯ ಬಸವ ದಳಗಳು, ವಿಜಯಪುರ, ಬೀಚಗಾನಹಳ್ಳಿ, ದೊಡ್ಡನಲ್ಲೂರು ಹಳ್ಳಿ, ಶಿವನಾಪುರ
೧೩. ಶರಣ ಭೋಗಾ ನಂಜುಂಡಪ್ಪ ಮತ್ತು ವನಜಾಕ್ಷಮ್ಮ, ಬೆಂಗಳೂರು

ಸರ್ಕಾರಿ ಸೇವಾಕ್ಷೇತ್ರ

ಶರಣ ಈಶ್ವರಗೌಡ, ವಿರುಪಾಕ್ಷಗೌಡ ಪಾಟೀಲ ಡಿ.ಜಿ. ಅವರ (ಪಿ.ಆರ್.ಓ. ಬೆಂಗಳೂರು)
ಶರಣ ಹೆಚ್.ಎ. ಶರಣಪ್ಪ, ಚೀಫ್ ಅಕೌಂಟ್ಸ್ ಆಫೀಸರ್, ಕೆ.ಇ.ಬಿ.
ಶರಣ ಡಾ. ಚನ್ನಬಸಪ್ಪ ಶಿರೋಳ, ಶಸ್ತ್ರ ಚಿಕಿತ್ಸಾ ತಜ್ಞರು, ಬೌರಿಂಗ್ ಆಸ್ಪತ್ರೆ
ಶರಣ ಜಿ. ಕರಿಬಸಪ್ಪ, ಸಹಕಾರಿ ಸಂಘಗಳ ಉಪನಿಬಂಧಕರು

ಮಹಿಳಾ ಸಂಘಟನೆಗಳ ನೇತಾರರು

ಶರಣೆ ಉಮಾದೇವಿ ಡಿ.ಎಂ. ಚಂದ್ರಶೇಖರ್, ಶ್ರೀ ಅಕ್ಕಮಹಾದೇವಿ ಸೇವಾ ಸಮಿತಿ, ಬೆಂಗಳೂರು
ಶರಣೆ ಶಾರದಾ ಅಪಟಿ, ಸಂಪಾದಕಿ, ಲಿಂಗನುಡಿ ಮಾಸಪತ್ರಿಕೆ, ಬೆಂಗಳೂರು

ಆಯ್ಕೆಯಾಗಿರುವ ಗಣನಾಯಕ-ಗಣನಾಯಕಿಯರ ಹೆಸರುಗಳು ಕೆಳಗಿನಂತಿದ್ದು ಅವರಿಗೆ ದಿ. ೧೩.೫.೧೯೯೫ರಂದು ಬೆಳಿಗ್ಗೆ ೧೦ ಗಂಟೆಗೆ ಅಧಿಕಾರ ಪ್ರದಾನವಿರುವುದು

೧. ಶರಣ ಬಸವಕುಮಾರ ಪಾಟೀಲ, ಬೀದರ
೨. ಶರಣ ಸುಭಾಷ್ ಪಾಟೀಲ, ಹೈದರಾಬಾದ
೩. ಶರಣ ಆರ್. ಚಂದ್ರಶೇಖರ್, ತಮಿಳುನಾಡು
೪. ಶರಣ ಡಾ॥ ನಿತಿನ್‌ಚಂದ್ರ ಹತ್ತೀಕಾಳ, ಧಾರವಾಡ
೫. ಶರಣ ಡಿ.ಎಸ್. ವಿಜಯಕುಮಾರ್, ಶಿವಮೊಗ್ಗ
೬. ಶರಣ ಆರ್.ಜಿ. ಶೆಟಗಾರ, ಗುಲ್ಬರ್ಗಾ
೭. ಶರಣೆ ಅಕ್ಕ ಅನ್ನಪೂರ್ಣ, ಬೀದರ್
೮. ಶರಣೆ ಮಾಲೂತಾಯಿ ಚಂದ್ರಕಾಂತಸ್ವಾಮಿ, ಮಹಾರಾಷ್ಟ್ರ
೯. ಶರಣೆ ಶಾರದಾತಾಯಿ, ಬಳ್ಳಾರಿ
೧೦. ಶರಣೆ ಸರೋಜಮ್ಮ ನಾಗರಾಜು, ಮೈಸೂರು
೧೧. ಶರಣೆ ಜಯಮ್ಮ ಚಂದ್ರಪ್ಪ, ಶಿವಮೊಗ್ಗ
೧೨. ಶರಣೆ ದೇವಿಕಾ ಶರಣಪ್ಪ, ಬೆಂಗಳೂರು

ಕಲ್ಯಾಣ ಕಿರಣ

ಕಲ್ಯಾಣ ಕಿರಣ ಪತ್ರಿಕೆಯ ಒಡೆತನ ಮತ್ತಿತರ ವಿವರಗಳ ಪ್ರಕಟಣೆ

ಪ್ರಾರೂಪ 4 (ವಿಧಿ 8)

1.	ಪ್ರಕಟಣೆಯ ಸ್ಥಳ	ಬೆಂಗಳೂರು
2.	ಪ್ರಕಟಣೆಯ ನಿಯತಕಾಲಿಕತೆ	ಮಾಸಿಕ
3.	ಮುದ್ರಕರ ಹೆಸರು	ಸೋದರಿ ಕಸ್ತೂರಿ
	ಭಾರತದ ಪ್ರಜೆಯೇ	ಹೌದು
	ವಿಳಾಸ	ಪ್ರಭುದೇವ ಮುದ್ರಣಾಲಯ, ಬಸವ ಗಂಗೋತ್ರಿ ಕುಂಬಳಗೋಡು
4.	ಪ್ರಕಾಶಕರ ಹೆಸರು	ಬಿ.ಶಂಭುಲಿಂಗಯ್ಯ
	ಭಾರತದ ಪ್ರಜೆಯೇ	ಹೌದು
	ವಿಳಾಸ	ಕಲ್ಯಾಣ ಕಿರಣ ಕಾರ್ಯಾಲಯ, ಬಸವ ಮಂಟಪ ರಾಜಾಜಿನಗರ, ಬೆಂಗಳೂರು-560 010
5.	ಸಂಪಾದಕರ ಹೆಸರು	ಬಿ.ಶಂಭುಲಿಂಗಯ್ಯ
	ಭಾರತದ ಪ್ರಜೆಯೇ	ಹೌದು
	ವಿಳಾಸ	ಬಸವ ಮಂಟಪ, ರಾಜಾಜಿನಗರ ಬೆಂಗಳೂರು-560 010
6.	ಪತ್ರಿಕೆಯ ಒಡೆತನ ವಹಿಸಿರುವ ವ್ಯಕ್ತಿಯ ಮತ್ತು ಪಾಲುದಾರರ ಅಥವಾ ಒಟ್ಟು ಬಂಡವಾಳ ಶೇ 1ಕ್ಕಿಂತ ಹೆಚ್ಚು ಭಾಗಕ್ಕೆ ಪಾಲುದಾರರ ಹೆಸರು ಮತ್ತು ವಿಳಾಸ	ವಿಶ್ವಕಲ್ಯಾಣ ಮಿಷನ್ ರಿಜಿಸ್ಟರ್ ರಿಲಿಜಿಯಸ್ ಚಾರಿಟಬಲ್ ಟ್ರಸ್ಟ್, ಬಸವ ಮಂಟಪ ರಾಜಾಜಿನಗರ, ಬೆಂಗಳೂರು-560 010

ಮೇಲೆ ಕೊಟ್ಟಿರುವ ವಿವರಗಳು ನನಗೆ ತಿಳಿದಮಟ್ಟಿಗೆ ಮತ್ತು ನನ್ನ ನಂಬಿಕೆಯಂತೆ ನಿಜವೆಂದು, ನಾನು ಬಿ. ಶಂಭುಲಿಂಗಯ್ಯ ಘೋಷಿಸುತ್ತೇನೆ

ಪ್ರಕಾಶಕ
ಬಿ. ಶಂಭುಲಿಂಗಯ್ಯ
ಕಲ್ಯಾಣ ಕಿರಣ, ಬೆಂಗಳೂರು-10

ದಿನಾಂಕ 1.3.1995

ಬಸವ ಧರ್ಮ ಸಮ್ಮೇಳನ ಪ್ರತಿನಿಧಿಗಳ ವಸತಿ ವಿವರ

ಸಮ್ಮೇಳನವು ಮಲ್ಲೇಶ್ವರಂ ಬಡಾವಣೆಯ 3ನೇ ಬ್ಲಾಕಿನಲ್ಲಿರುವ ಕಾರ್ಪೋರೇಷನ್ ಕ್ರೀಡಾಂಗಣ (ಕೆ.ಸಿ. ಜನರಲ್ ಆಸ್ಪತ್ರೆ, ಮಲ್ಲೇಶ್ವರಂ ಪೋಲಿಸ್ ಠಾಣೆ ಎದುರು)ದಲ್ಲಿ ನಡೆಯುತ್ತದೆ. 'ಶರಣ ಮಂಟಪ' ಶರಣರ ಭಾವಚಿತ್ರ ಪ್ರದರ್ಶನ, ಪುಸ್ತಕ ಮಾರಾಟದ ಮಳಿಗೆ ಇರುತ್ತವೆ. ಪ್ರತಿನಿಧಿಗಳ ವಾಸ್ತವ್ಯಕ್ಕಾಗಿ ಬೇರೆ ಬೇರೆ ಕಲ್ಯಾಣ ಮಂಟಪ, ಛತ್ರ, ಶಾಲಾ ಕಾಲೇಜುಗಳನ್ನು ಪಡೆಯಲಾಗಿದೆ. (ಈಗಾಗಲೇ, ಶ್ರೀರಾಮ ಕಲ್ಯಾಣ ಮಂದಿರ, ಸೀತಾ ಸಮುದಾಯ ಭವನ, ತೆಂಗಿನ ಮರದ ರಸ್ತೆ, 7ನೆಯ ಕ್ರಾಸ್. ಗೀತಾಂಜಲಿ ಟಾಕೀಸ್ ಹಿಂಭಾಗ, ಮಲ್ಲೇಶ್ವರಂ, ಬೆಂಗಳೂರು-6 ಇವುಗಳನ್ನು ಸಮ್ಮೇಳನದ ಸಮಯದಲ್ಲಿ ವಾಸ್ತವ್ಯಕ್ಕಾಗಿ ಪಡೆದುಕೊಳ್ಳಲಾಗಿದೆ). ಸ್ವಾಗತ ಸಮಿತಿಯ ತಾತ್ಕಾಲಿಕ ಕಾರ್ಯಾಲಯವು ಸಮ್ಮೇಳನದ ವೇಳೆಯಲ್ಲಿ ಸಭಾಮಂಟಪ ಮೈದಾನದಲ್ಲಿ, ಶಾಶ್ವತ ಕಾರ್ಯಾಲಯವು ರಾಜಾಜಿನಗರದ ಬಸವ ಮಂಟಪದಲ್ಲಿ ಇರುತ್ತದೆ.

ಬೆಂಗಳೂರು-ಮೈಸೂರು ರಸ್ತೆ, 21ನೇ ಕಿ.ಮೀಟರ್ ಬಳಿ ಬಸವ ಗಂಗೋತ್ರಿ ಇದ್ದು, ಅಲ್ಲಿ ಶ್ರೀ ಬಸವೇಶ್ವರ ಕಲ್ಯಾಣ ಮಂಟಪ, ಶ್ರೀ ರುದ್ರಾನಂದ ಕಲ್ಯಾಣ ಮಂಟಪ ಎಂಬ ಎರಡು ಕಲ್ಯಾಣ ಮಂಟಪ, ಸಾಕಷ್ಟು ಶೌಚಾಲಯ ಸ್ನಾನ ಗೃಹ ಇರುವುದರಿಂದ ಸ್ವತಂತ್ರ ವಾಹನಗಳುಳ್ಳವರು ಅಲ್ಲಿ ಬಹಳ ಆರಾಮವಾಗಿ ಇರಬಹುದು. ಅಲ್ಲಿ ಸಮ್ಮೇಳನದ ಪ್ರತಿನಿಧಿಗಳಿಗಾಗಿ ಕಾಯ್ದಿರಿಸಲಾಗಿದೆ.

ಕಾರ್ಯಾಲಯದ ವಿಳಾಸ
ಅಖಿಲ ಭಾರತ ಬಸವ ಧರ್ಮ ತೃತೀಯ ಸಮ್ಮೇಳನ ಸಮಿತಿ
ಬಸವ ಮಂಟಪ, 2035, 20ನೇ ಮೇಯಿನ್, 2ನೇ ಬ್ಲಾಕು, ರಾಜಾಜಿನಗರ, ಬೆಂಗಳೂರು-560 010

ಕಲ್ಯಾಣ ಕಿರಣ ಮಾಸ ಪತ್ರಿಕೆ

ಕಲ್ಯಾಣ ಕಿರಣ KRNB 312/BGW-92 ಏಪ್ರಿಲ್ 1995



KALYANA KIRANA - Monthly Magazine Printed and Published by B. Shambhulingaiah, at Prabhudeva Printing Press, Basava Gangotri, Kumbalgod, Bangalore - 560 074. Phone : 8437234